PEER - REVIEWED JOURNAL
ISSN: 2320-9941
ಸಂಪುಟ - 9, ಸಂಚಿಕೆ- 4
VOLUME: 09, ISSUE: 04

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಭಾಗ - ೪
PART - 4



ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಭಾಗ – 04, PART - 4

ಸಂಪುಟ: 09, ಸಂಚಿಕೆ 04, ಡಿಸೆಂಬರ್ 2025

VOLUME: 09, ISSUE: 04, DECEMBER 2025

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ

ತೋಟದ ಮನೆ ನಂ 107(25)

ಕಂಚಾಘಟ್ಟ ಹೊಸ ಬಡಾವಣೆ

ತಿಪಟೂರು 572201

e-mail: prathispanda@gmail.com

website : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಳಿಯಾರು – ಕೆಂಕೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, English Department
BMS Govt. First Grade College, Huliyar - Kenkere
Tumkur District, Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Kannada Department
University Of Madras,
Chenni, Tamil Nadu

ಡಾ. ಜ್ಯೋತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Associate Professor, English Department
Govt. First Grade College, Koratagere,
Tumkur District, Karnataka

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Kannada Department
Govt. First Grade College, Madhugiri
Tumkur District, Karnataka

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Kannada Department
Mount Carmel College Autonomous, Vasanthnagar
Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ
ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti Deemed to be University,
K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಕಾನೂನು ಸಲಹೆಗಾರರು
ಪೃಥ್ವಿ ಸೂರಿ
ಲೇಖಕರು ಹಾಗೂ ವಕೀಲರು

ಸಂಪಾದಕೀಯ...

ಕಾಳನುಯದಿ ಬಿತ್ತೆ ಸಂಜೆಗದು ಪೈರಹುದೆ
ಪಾಲುಂಟು ಕಾಲಂಗೆ ನಮ್ಮ ಕೃಷಿಗಳಲಿ ।
ವೇಳೆ ಗಡು ಮರೆತಾತುರದಿನ್ ಅಡುಗೆ ಪಕ್ವಹುದೆ
ತಾಳುಮೆಯೆ ಪರಿಪಾಕ – ಮಂಕುತಿಮ್ಮ ॥

ಸವಾಲುಗಳನ್ನು ಎದುರಿಸಿ ಮೇಲೇಳುವ ಶಕ್ತಿ ಅಥವಾ Resilience ಗುಣವು ಅಸಾಧಾರಣವಾದದ್ದು. ವಸಾಹತು ಪರಿಭಾಷೆಯಲ್ಲಿ ಈ ಸ್ವಭಾವವು ದಾಸ್ಯವೆಂದು ಭಾವಿಸಲ್ಪಡುತ್ತದೆ. ಜೀವನದ ಅಪರಿಮಿತ ಶಕ್ತಿಯನ್ನು ಎದುರಾಗುವ ಪ್ರಯತ್ನದ ಕಾರಣದಿಂದಲೇ ತನ್ನ ಜೀವ ಸೆಲೆಯನ್ನು ಜಾಗೃತವಾಗಿಡುವ ಹೆಮ್ಮಿಂಗ್‌ವೇಯ ಮುದುಕನ ರೂಪಕ ಅನನ್ಯವಾದದ್ದು.

ಎಂತಹ ಕಠಿಣ ಪರಿಸ್ಥಿತಿಯಲ್ಲೂ ಏಳುವ ಸಮಸ್ಥಿತಿಗಳಿಸುವ ಪ್ರಕ್ರಿಯೆಗೆ ಕೆಲವು ಪೂರ್ವ ನಿಯಮಗಳಿರುತ್ತವೆ. Integrity, ತೀವ್ರಮೌನ, disinterestedness ಕೀಟ್ಸ್ ಕವಿ ಹೇಳುವ Negative Capability ಇಂತಹವು.
ಬದುಕಿನ ಬಗ್ಗೆ ನಾವು ಕಟ್ಟಿಕೊಳ್ಳುವ ಭ್ರಮೆಗಳು ನಿರಸನಗೊಂಡಾಗ, ತ್ರಿವ್ರವಾದ ಭಾವೋದ್ವೇಗಗಳು, ಹತ್ತಿರದವರನ್ನು ಕಳೆದುಕೊಂಡಾಗ ಆಗುವ ನೋವು, ಬದುಕುವ ಅಸ್ತಿತ್ವವನ್ನೇ ಅಲುಗಾಡಿಸುವ ಬಡತನ, ಯುದ್ಧಗಳು ಬರಗಾಲ, ರೋಗ ರುಜಿನ, ಯಾತನೆಗಳು ಮನುಷ್ಯರಲ್ಲಿ ಸಹಜವಾಗಿ Resilience ಗುಣವನ್ನು ಹೆಚ್ಚಿಸುತ್ತವೆ.

ಇಂದಿನ ಯುವ ಸಮೂಹವು ಇಂತಹ ಯಾವುದೇ ನೈಜ ದುರಂತಗಳು ಉಂಟುಮಾಡುವ ನೋವಿಗಿಂತ ಕಲ್ಪನೆಯಲ್ಲೇ ಕಾಡುವ ಭಯ, ಗೀಳು, ಅತಿಯಾದ ನಿರೀಕ್ಷೆ ಸ್ವಾರ್ಥದಿಂದ ಬರುವ ಹಠ, ಎಲ್ಲರನ್ನೂ, ಎಲ್ಲದನ್ನೂ ಒಳಗೊಳ್ಳದೇ ಇರುವ ಕಾರಣದಿಂದ ನೋವು ಅನುಭವಿಸುತ್ತಿದ್ದಾರೆ. ಇದು ಅಸಹಜ ಯಶಸ್ಸಿಗೆ ಅಡ್ಡದಾರಿಗಳನ್ನು

ಹುಡುಕುವ ಸಾಮರ್ಥ್ಯವಿಲ್ಲದಿದ್ದರೂ ಯಶಸ್ವಿ ಎಂದು ತೋರಿಸುವ ಕಾರಣದಿಂದ ದಿಕ್ಕು ತಪ್ಪುತ್ತಿದ್ದಾರೆ.

ನೋಡುವ, ಒಳನೋಟ ನೀಡುವ ಕಣ್ಣು ಕಳೆದುಕೊಂಡು ಅಂದರಾಗುವ ಮುನ್ನ ಎಚ್ಚೆತ್ತುಕೊಳ್ಳುವುದು ಅನಿವಾರ್ಯವಾಗಿದೆ. ಇಂತಹ ಪ್ರಜ್ಞಾವಿಹೀನ ಸ್ಥಿತಿ ಸಂಶೋಧನೆಗಳಿಗೆ ಮಾರಕವಾಗಿದೆ.

– ಡಾ. ಸರಸ್ವತಿ ಕೆ. ಬಿ

(ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.)

ISSN : 2320-9941
Linking ISSN (ISSN-L): 2320-9941
Key-title: Prathispandha
Title proper: Prathispandha.
Country: India
Medium: Print
Last modification date: 01/09/2014
Type of record: Confirmed
ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಪರಿವಿಡಿ INDEX

1. ಸ್ವಾತಂತ್ರ್ಯ ಚಳುವಳಿಯಲ್ಲಿ ಸಾಹಿತ್ಯದ ಪಾತ್ರ

ಡಾ. ಸಂಗಪ್ಪ ತೌಡಿ **01–06**

2. ಪ್ರಭು ಅಲ್ಲಮನ ವಚನಗಳಲ್ಲಿ ಸಾಮಾಜಿಕತೆ ಮತ್ತು ತಾತ್ವಿಕತೆ

ಡಾ. ನಟರಾಜು ಜೆ. ಆರ್. **07–19**

3. ಮಂಕುತಿಮ್ಮನ ಕಗ್ಗದಲ್ಲಿ ಜೀವನ ಮೌಲ್ಯಗಳು

ನಾಗೇಂದ್ರ ಹೆಚ್. ಜಿ.

ಡಾ. ಸುಮ ಆರ್. **20–35**

4. ಕನ್ನಡ ಸಾಹಿತ್ಯದಲ್ಲಿ ಶ್ರೀರಾಮ

ಅಶ್ವತ್ಥ ಎಸ್.

ಡಾ. ಸುಮ ಆರ್. **36–41**

5. ಹೊಸ ತಲೆಮಾರಿನ ಕನ್ನಡ ಕತೆಗಳಲ್ಲಿ ಮನುಷ್ಯ ಸಂಬಂಧಗಳು

ಡಾ. ಕಿರಣಕುಮಾರ್ ಹೆಚ್. ಜಿ. **42–53**

6. ಬೇಂದ್ರೆಯವರ 'ತಾಯಿ' ಕವಿತೆಯ ವಿಶ್ಲೇಷಣೆ

ಅನಿತ ಕೆ.ವಿ., ಗೌರಿಬಿದನೂರು **54–62**

7. ಕುವೆಂಪು ಕಾವ್ಯದಲ್ಲಿ ನಾಡು–ನುಡಿಯ ಸಂಕಲ್ಪ: ಅಸ್ಮಿತೆಯ ಆದರ್ಶ ಮತ್ತು ಆಶಯ

ಸುಕನ್ಯ ಎಂ

ಅಕ್ಷಯ ಸುಂದರೆಸನ್

ಡಾ. ಬಸಯ್ಯ ಸ್ವಾಮಿ **63–69**

8. ಕಲ್ಲಳ್ಳಿ ಗಜಲ್: ಸಾಮಾಜಿಕ ಪ್ರಜ್ಞೆಯ ಹಿನ್ನೋಟ

ಶ್ರೀನಿವಾಸ ಡಿ ಎಚ್

ಡಾ. ಪಿ ಎಂ ಗಂಗಾಧರಯ್ಯ **70–77**

9. Universalism and Humanism in the Selected Essays of Rabindranath Tagore: A Literary and Philosophical Study

Shivanand Bande

Dr. Pritha Sanyal 78-85

8. Enacting Intersectionality: Women, Culture, and Identity in Girish Karnad's Hayavadana and The Fire and the Rain
Prof. Divakar S. **86–95**

9. Performing Resistance: Gender, Identity, and Societal Ex pectations in Silence! The Court is in Session and Dance Like a Man - Shashikala S **96–104**

10. Dynamics of Marginality : The Disabled Community in Selected Indian English Literature Texts
Dr. Waseem Akram **105–112**

11. True self: In the spiritual terms of Vachanas
Shalini Jayakumar A **113–119**

12. Girish Karnad's Contribution to Karnataka Theatre
Dr. Prabhuraja **120–127**

ಸ್ವಾತಂತ್ರ್ಯ ಚಳುವಳಿಯಲ್ಲಿ ಸಾಹಿತ್ಯದ ಪಾತ್ರ

ಡಾ. ಸಂಗಪ್ಪ ತೌಡಿ
ಅತಿಥಿ ಉಪನ್ಯಾಸಕರು ಕರ್ನಾಟಕ
ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾಲಯ ಪ್ರಾದೇಶಿಕ
ಅಧ್ಯಯನ
ಕೇಂದ್ರ ಬೀದರ

ಭಾರತದ ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಬಗೆಯ ಚಳುವಳಿಗಳು ಪ್ರಮುಖವಾದ ಪಾತ್ರವನ್ನು ನಿರ್ವಹಿಸಿವೆ. ಅದರಲ್ಲಿ ಸಾಹಿತ್ಯವು ಒಂದು ಸ್ವಾತಂತ್ರ್ಯ ಚಳುವಳಿಯಲ್ಲಿ ಸಾಹಿತ್ಯವು ಜನರಲ್ಲಿ ರಾಷ್ಟ್ರೀಯ ಭಾವನೆಗಳನ್ನು ಜಾಗೃತಗೊಳಿಸಿ ದೇಶಪ್ರೇಮವನ್ನು ಮೂಡಿಸಿ ಸ್ವಾತಂತ್ರ್ಯಕ್ಕೆ ಬೇಕಾಗುವ ಅಗತ್ಯಗಳನ್ನು ಪ್ರಚೋದಿಸಿ ದೇಶಕ್ಕಾಗಿ ಹೋರಾಡಲು ಅನೇಕ ಅಸ್ತ್ರಗಳನ್ನು ಸಾಹಿತ್ಯವು ನೀಡಿತ್ತು.

ಜಾತಿ ಮತ್ತು ಧರ್ಮದ ಆಧಾರದ ಮೇಲೆ ವಿಭಜನೆಗೊಂಡಿದ್ದ ಭಾರತೀಯರನ್ನು ಒಗ್ಗೂಡಿಸಿ, ಬ್ರಿಟಿಷ್ ಆಡಳಿತ ವಿರುದ್ಧ ಹೋರಾಡಲು ಪ್ರೇರಣೆ ನೀಡುವಲ್ಲಿ ಕವಿತೆಗಳು, ಕಾದಂಬರಿಗಳು, ನಾಟಕಗಳು ಮತ್ತು ಸಣ್ಣ ಕಥೆಗಳು ಜನರ ಮನದಲ್ಲಿ ದೇಶಭಕ್ತಿಯನ್ನು ತುಂಬಿ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನು ತ್ಯಾಗ ಮಾಡಲು ಸ್ಫೂರ್ತಿ ದಾಯಕವಾಗಿ

ಸಾಹಿತ್ಯವನ್ನು ರಚಿಸಿ ದೇಶಕ್ಕಾಗಿ ಒಂದು ಬಲವಾದ ಬಾಂಧವ್ಯವನ್ನು ಸೃಷ್ಟಿಸಿತು. ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸ್ವಾತಂತ್ರ್ಯದ ಚಳುವಳಿಗೆ "ಅರವಿಂದ ಘೋಷ್, ರವೀಂದ್ರನಾಥ ಟ್ಯಾಗೋರ್, ಬಂಕಿಮಚಂದ್ರ ಚಟರ್ಜಿ, ಇಬ್ರಾಹಿಂ ಇಕ್ಬಾಲ್, ಖುಷ್ವಂತ್ ಸಿಂಗ್" ಮೊದಲಾದ ಸಾಹಿತಿಗಳು ತಮ್ಮ ಸಾಹಿತ್ಯದ ಮೂಲಕ ಜನರಲ್ಲಿ ದೇಶ ಭಕ್ತಿಯನ್ನು ಮೂಡಿಸಿದರು. ದೇಶದ ಜನರನ್ನು ಜಾಗೃತಗೊಳಿಸುವ ಮತ್ತು ದೇಶಭಕ್ತಿಯ ಸಾಮಾನ್ಯ ಭಾವನೆಯೊಂದಿಗೆ ಒಗ್ಗೂಡಿಸುವ ಗುರಿಯನ್ನು ಹೊಂದಿರುವ ಅನೇಕ ಸಾಹಿತಿಗಳಿದ್ದಾರೆ. ಅವರ ಬರವಣಿಗೆಯ ಶೈಲಿಗಳು ವಿಭಿನ್ನವಾಗಿರಬಹುದು, ಆದರೆ ಅವರ ಗುರಿ ಒಂದೇ ಆಗಿತ್ತು.

ಲೋಕಮಾನ್ಯ "ಬಾಲಗಂಗಾಧರ ತಿಲಕರು ಸ್ವಾತಂತ್ರ್ಯಕ್ಕಾಗಿ ಮರಾಠ ಮತ್ತು ಕೇಸರಿ ಎಂಬ ಎರಡು ಪತ್ರಿಕೆಗಳನ್ನು ಪ್ರಕಟಿಸಿದರು. ಈ ಪತ್ರಿಕೆಗಳು ಆಗಿನ ಭಾರತದ ಸ್ವಾತಂತ್ರ್ಯ ಹೋರಾಟದ ಮುಖವಾಣಿಯಾದವು ಇಂತಹ ಪತ್ರಿಕೆಗಳ ಮೂಲಕ ಭಾರತೀಯರಲ್ಲಿ ಸ್ವಾತಂತ್ರ್ಯದ ಕಿಚ್ಚು ವೇಗವಾಗಿ ಬೆಳೆಯಲು ಸಾಧ್ಯವಾಯಿತ್ತು. ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಇನ್ನೊಬ್ಬ ಶ್ರೇಷ್ಠ ಕವಿವೆಂದರೆ ರವೀಂದ್ರನಾಥ ಟ್ಯಾಗೋರ ಅವರ ಸೃಜನಶೀಲತೆಯು ತುಂಬ ಪರಿಣಾಮಕಾರಿಯಾಗಿ ಪ್ರಭಾವ ಬೀರಿವೆ. ಅದರಲ್ಲಿ ಮುಖ್ಯವಾಗಿ "ಜನ್ ಗಣ ಮನ ಮತ್ತು ಬಾಂಗ್ಲಾದೇಶದ ಅಮರ್ ಶೋನಾರ್ ಬಾಂಗ್ಲಾ ಎಂಬ ಎರಡು ರಾಷ್ಟ್ರಗೀತೆಗಳನ್ನು ರಚಿಸಿ ಅನೇಕ ಭಾರತೀಯರಲ್ಲಿ ದೇಶದ ಏಕತೆ ಮತ್ತು ಅಖಂಡತೆ ಕುರಿತು ಸುಧೀರ್ಘವಾಗಿ ವಿವರಿಸುವ ಪ್ರಯತ್ನವನ್ನು ಮಾಡಿದರು. ಗೋರಾ ಕಾದಂಬರಿಯೂ ಎರಡೂ ಜೋಡಿಗಳ ಪ್ರೇಮಕಥೆಯನ್ನು ಆಧರಿಸಿ ಇದು ದೇಶದ ರಾಜಕೀಯ ಮತ್ತು ಧರ್ಮದ ಕುರಿತಾದ ತಾತ್ವಿಕ ಚರ್ಚೆಯ ಹಿನ್ನೆಲೆಯಲ್ಲಿ ವಿಮೋಚನೆ, ರಾಷ್ಟ್ರೀಯತೆ ಮತ್ತು ಇತರ ವಿವಿಧ ಉಪ ವಿಷಯಗಳನ್ನು ಒಳಗೊಂಡಿದೆ. "ಘರೆಬೈರೆ" ಅವರ ಮತ್ತೊಂದು ಕಾದಂಬರಿ" ಈ ಕಾದಂಬರಿಯಲ್ಲಿನ ಪಾತ್ರಗಳು ಹಿಂಸಾಚಾರವನ್ನು ವಿರೋಧಿಸುವ ಬದಿಯನ್ನು ತೆಗೆದುಕೊಳ್ಳುವ ಮೂಲಕ ಅಥವಾ ಗುರಿಯನ್ನು ತಲುಪಲು ಯಾವುದೇ ಮಾರ್ಗವನ್ನು ತೆಗೆದುಕೊಳ್ಳುವ ಮೂಲಕ ಸ್ವಾತಂತ್ರ್ಯದ ಹೋರಾಟದ ಹಾದಿಯನ್ನು ನಿರ್ಧರಿಸುವಲ್ಲಿ ಆ ಕಾಲದ ಯುವಕರಲ್ಲಿ ನಡೆಯುತ್ತಿರುವ ಆಂತರಿಕ ಸಂಘರ್ಷವನ್ನು ಪ್ರತಿನಿಧಿಸುತ್ತದೆ. ಯುವಕರು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಯುವ ವಾಸ್ತವ ಸ್ಥಿತಿಗತಿಗಳನ್ನು ಕಾದಂಬರಿಯು ನಿರೂಪಿಸುತ್ತದೆ.

ಶರತ್ ಚಂದ್ರ ಚಟ್ಟೋಪಾಧ್ಯಾಯ ಅವರ ಪಠಾರ್ ಡಾಬಿ ಬಿಪ್ರದಾಸ್ ಈ ಕಾದಂಬರಿಯಲ್ಲಿ ಇಬ್ಬರು ಮಹಿಳಾ ಪಾತ್ರಗಳ ಮೂಲಕ ಸ್ವಾತಂತ್ರ್ಯಕ್ಕಾಗಿ ತಮ್ಮದೇ

ಆದ ರೀತಿಯಲ್ಲಿ ತೊಡಗಿಸಿಕೊಂಡವರು ವಿವಿಧ ರೀತಿಯ ಪ್ರಯತ್ನದಲ್ಲಿ ಎದುರಾಳಿಯನ್ನು ಎದುರಿಸಲು ನಿರಂತರವಾದ ಹೋರಾಟ ಮಾಡುವರು. ಇಂತಹ ಅನೇಕ ಸಾಹಿತಿಗಳು ರಾಷ್ಟ್ರೀಯ ಮಟ್ಟದಲ್ಲಿ ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಕವಿತೆ, ಕಾದಂಬರಿಗಳು ರಚಿಸಿ ದೇಶದ ವಾಸ್ತವಿಕತೆಯನ್ನು ಅಚ್ಚುಕಟ್ಟಾಗಿ ಜನರಿಗೆ ಮನ ಮುಟ್ಟುವಂತೆ ವಿವರಿಸಿದರು.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಕನ್ನಡ ಸಾಹಿತಿಗಳು ಪ್ರಮುಖವಾದ ಪಾತ್ರವನ್ನು ವಹಿಸಿದರು. ದೇಶದ ವಿವಿಧ ಪ್ರದೇಶಗಳಂತೆ ಕರ್ನಾಟಕದಲ್ಲಿಯೂ ಭಾರತದ ಸ್ವಾತಂತ್ರ್ಯ ಸಮರವಾಣಿಗೆ ಕವಿವಾಣಿಯೂ ಹೊಸ ಶಕ್ತಿಯನ್ನು ನೀಡಿ ಹೊಸದೊಂದು ಯುಗಕ್ಕೆ ಸಾಕ್ಷಿಯಾಗಿತ್ತು. ಪ್ರಾರಂಭದಲ್ಲಿ ಆಲೂರು ವೆಂಕಟರಾಯರಂಥ ಹಿರಿಯ ಕವಿ ಕರ್ನಾಟಕತ್ವ ಹಾಗೂ ರಾಷ್ಟ್ರೀಯತ್ವದ ಅಭಿನ್ನ ಸ್ವರೂಪದ ತಿಳುವಳಿಕಯನ್ನು ಕನ್ನಡ ಜನ ಸಮುದಾಯದಲ್ಲಿ ಪ್ರಸಾರ ಮಾಡಿದರು.

ರಾಷ್ಟ್ರಕವಿ ಕುವೆಂಪುರವರು “ಜಯ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ” ಎಂದು ಕಾವ್ಯ ಬರೆದರು. ಈ ಮೂಲಕ ಕನ್ನಡ ತಾಯಿಯೆಂದರೆ ಭಾರತ ಮಾತೆಯ ಮಗಳೆಂಬ ಆತ್ಮೀಯ ನಂಟು ಜೋಡಿಸಿ ದೇಶದ ಅಖಂಡತೆಯ ಕುರಿತು ಕನ್ನಡಿಗರಲ್ಲಿ ದೇಶಾಭಿಮಾನವನ್ನು ಮೂಡಿಸಿದವರು. ವಿಚಾರವಾದಿ ಕವಿಗಳಾಗಿ ಕನ್ನಡಿಗರು ಕರ್ನಾಟಕತ್ವ ಜತೆಜತೆಗೆ ರಾಷ್ಟ್ರೀಯತ್ವವನ್ನು ನಿಷ್ಠೆಯಿಂದ ಮೈಗೂಡಿಸಿಕೊಳ್ಳುವಲ್ಲಿ ಇವರ ಸಾಹಿತ್ಯದ ಶಕ್ತಿಯು ಅಪಾರ ಪ್ರಮಾಣದಲ್ಲಿ ಪಾತ್ರವನ್ನು ನಿರ್ವಹಿಸಿದೆ.

“ನವೋದಯದ ಸಾಹಿತ್ಯದಲ್ಲಿ ದೇಶಾಭಿಮಾನದ ಕಿಚ್ಚು ವೇಗವಾಗಿ ಬೆಳೆಯಿತ್ತು. ಕನ್ನಡವೂ ಭಾರತವೂ ಜಗವೆಲ್ಲವೂ ಒಂದೇ” ಎಂಬ ವಿಶಾಲ ವಿಸ್ತಾರಕ್ಕೆ ಕೈ ಹಾಕಿದ ವರಕವಿ ಬೇಂದ್ರೆಯವರು ರಾಷ್ಟ್ರಭಿಮಾನದ ಕವಿತೆಗಳನ್ನು ರಚಿಸಿ ಕನ್ನಡಿಗರಿಗೆ ಸ್ವಾತಂತ್ರ್ಯದ ಮೇಲೆ ಸಂಪೂರ್ಣವಾದ ಜವಾಬ್ದಾರಿ ಬರಬೇಕು ಅಂದಾಗ ಮಾತ್ರ ದೇಶದ ಜನರು ಸುವ್ಯವಸ್ಥೆಯಿಂದ ಇರಲು ಸಾಧ್ಯವಾಗುತ್ತದೆ. ಎಂಬ ಆದರ್ಶತನವನ್ನು ತಮ್ಮ ಕವಿತೆಗಳಲ್ಲಿ ನಿರೂಪಿಸಿದ್ದಾರೆ.

“ಕರ್ನಾಟಕ್ಕೆ 1924 ರಂದು ಮಹಾತ್ಮ ಗಾಂಧೀಜಿರವರು ಬೆಳಗಾವಿಗೆ ಬಂದಿದ್ದರು. ಅದು ರಾಷ್ಟ್ರೀಯ ಕಾಂಗ್ರೆಸ್ಸಿನ ಮಹಾ ಅಧಿವೇಶನ ಅಲ್ಲಿ ನಮ್ಮ ಕನ್ನಡದ ಕವಿಯಾದ “ಹುಯಿಲಗೋಳ ನಾರಾಯಣರಾಯರು ಬರೆದ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು” ಎಂಬ ಗೀತೆಯನ್ನು ಹಾಡಿ ರಾಷ್ಟ್ರೀಯತೆಯ

ಚಿಲುಮೆಯೊಡನೆ ಕರ್ನಾಟಕದ ಒಲುಮೆಯನ್ನು ಉದ್ದೀಪನಗೊಳಿಸಿದ್ದು ಕಾಣುತ್ತೇವೆ.

ದ.ರಾ.ಬೇಂದ್ರೆಯವರು ಬೆಳಗಾವಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕ್ರಾಂತಿಕಾರಿ ಪದ್ಯವನ್ನು ಬರೆದು ಓದುವುದರ ಮೂಲಕ ದೇಶಾಭಿಮಾನ ಮೂಡಿಸಲು ಪ್ರಯತ್ನಿಸಿದರು.

"ರಾಜ್ಯದ ಸಾಮ್ರಾಜ್ಯದ ತೆರೆ ಒಕ್ಕಿ
ಮಂಡಲ–ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ–ಖಂಡಗಳ
ಸೌರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ"

ಎಂದು ಬ್ರಿಟಿಷರ ಅಳಿಗಾಲದ ಕಣಿ ನುಡಿದಂತೆ ಹಕ್ಕಿಯ ಸಂಕೇತವನ್ನು ಬಳಸಿದ ನಿಷ್ಠುರ ಪದ್ಯವನ್ನು ತಮ್ಮ ಅಸ್ಖಲಿತ ಧ್ವನಿಯಲ್ಲಿ ಹಾಡಿ ಜನಸ್ತೋಮವನ್ನು ಬೆರಗಾಗಿಸಿದ್ದು. ಈ ಮೂಲಕ ಕನ್ನಡಿಗರಲ್ಲಿ ದೇಶಪ್ರೇಮ ಹಾಗೂ ರಾಷ್ಟ್ರಭಿಮಾನವೂ ಮೂಡಿಲು ಇದು ಸಹಾಯಕವಾಗಿದೆ. ನವೋದಯ ಯುಗದ ಮೊದಲ ಕವಿ ಎನಿಸಿದ ಎಂ.ಗೋವಿಂದ ಪೈರವರು ದೇಶದ ಸ್ವಾತಂತ್ರ್ಯಕ್ಕಾಗಿ ಜನರಲ್ಲಿ ದೇಶಾಭಿಮಾನವನ್ನು ಮೂಡಿಸಲು ಸರಳವಾದ ಭಾಷೆಯಲ್ಲಿ ಕಾವ್ಯಗಳನ್ನು ರಚಿಸಿದರು. "ಭರತಾಂಬೆಯೆ, ಜನಿಸಿ ನಿನ್ನೊಳು ಧನ್ಯನಾದೆನು 'ದೇವಿಯೆ ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೇ"

"ಭಾರತ ಮಾತೆಯ ಮೇಲಿನ ಪ್ರೀತಿಯನ್ನು ತಮ್ಮ ಭಾರತ ಜನನಿಗೆ" ಕಾವ್ಯಗಳಲ್ಲಿ ವಿಸ್ತಾರವಾಗಿ ಕವಿ ನಿರೂಪಿಸಿದ್ದಾರೆ. ಪ್ರತಿಯೊಬ್ಬ ಯುವಕರು ದೇಶದ ಅಖಂಡತೆಯ ಕುರಿತು ಯಾವಾಗಲೂ ಚಿಂತನೆಯನ್ನು ಮಾಡಬೇಕು. ಪ್ರತಿಯೊಬ್ಬರ ಹೃದಯ ಮಂದಿರಲ್ಲಿ ದಿನನಿತ್ಯವು ತಾಯಿ ಭಾರತ ಮಾತೆಯನ್ನು ಪೂಜಿಸಬೇಕೆಂದು ತಮ್ಮ ಕಾವ್ಯದಲ್ಲಿ ದಾಖಲಿಸಿದ್ದಾರೆ. ಇಂತಹ ಕಾವ್ಯಗಳ ಮೂಲಕ ಕನ್ನಡಿಗರಲ್ಲಿ ಭಾರತ ದೇಶದ ಸ್ವಾತಂತ್ರ್ಯದ ಕುರಿತು ಜಾಗೃತಿ ಮೂಡಿಸಲು ಸಾಧ್ಯವಾಯಿತು.

ಇವರ ಮತ್ತೊಂದು ಕವಿತೆ "ಭಾರತ ಸ್ವಾತಂತ್ರ್ಯದ ಗಾಯಿತ್ರಿ ಕ್ವಿಟ್ ಇಂಡಿಯಾ ಎಂಬುದೇ" ಈ ಕವಿತೆಯ ಮೂಲ ಮಂತ್ರ ಗಾಂಧೀಜಿಯವರು ಭಾರತದ ಹೃದಯದಲ್ಲಿ ಮಿಂಚಿನಕ್ಷರದಲ್ಲಿ ಬರೆದ ಈ ಮಂತ್ರವೇ ಇಲ್ಲಿಯ ಬಹುತೇಕ ಕವಿತೆ–ಹಾಡುಗಳ ಆಶಯವು ಹೌದು ಈ ಕವನದ ಹಿಂದೆ ಕೆಲಸ ಮಾಡಿದ್ದು ಭಾರತ ಸ್ವಾತಂತ್ರ್ಯದ ಅದಯ್ಯ ಆಕಾಂಕ್ಷೆಯಲ್ಲದ ಸಂಪ್ರದಾಯಿಕ ಧಾರ್ಮಿಕ ಭಾವನೆಯೇನಲ್ಲ "ಭಾರತಾಂಬೆ

ಹಾಗೂ ಕನ್ನಡಾಂಬೆಗೆ ಗೌರವ ಸ್ಥಾನವನ್ನೊದಿಗಿಸಿ ಕೊಡಬೆಕೇಂಬ ರಾಷ್ಟ್ರಪ್ರೇಮವೇ ಪೈಗಳ ಧರ್ಮವಾಗಿತ್ತು.

"ಗೋವಿಂದ ಪೈರವರು ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ ಆಪಾರ ಕೊಡುಗೆಯನ್ನು ಶ್ರೀ ಕಯ್ಯಾರ ಕಿಂಞ್ಞಣ್ಣ ರೈ ಅವರು ಮಹಾಕವಿ ಗೋವಿಂದ ಪೈ" ಗ್ರಂಥದಲ್ಲಿ ಎಳೆ ಎಳೆಯಾಗಿ ನಿರೂಪಿಸಿದ್ದಾರೆ. ಗೋವಿಂದ ಪೈ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವತ ಭಾಗಿಯಾಗಿದ್ದರು ಎಂದು ದಾಖಲಿಸುವರು.

"ಆಗಿನ ಕಾಲದಲ್ಲಿ ಆಗತ್ಯವಿದ್ದ ಜನಮನ ಚೇತನಕ್ಕೆ ಪ್ರೇರಣೆ ನೀಡುವ ಮೂಲಕ ಸ್ವತಂತ್ರ್ಯ ಚಳುವಳಿಗೆ ಮತ್ತೇಷ್ಟು ಚೈತನ್ಯವನ್ನು ತುಂಬಿದವರು ಎಂದು ವಿವರಿಸಿದ್ದಾರೆ. ರಾಷ್ಟ್ರಕವಿ ಕುವೆಂಪುರವರ "ಸತ್ತಂತಿಹರನ್ನು ಬಡಿದೆಚ್ಚರಿಸು" ಕಾವ್ಯ ಬರೆಯುವ ಮೂಲಕ ಸ್ವತಂತ್ರ್ಯ ಸಂದರ್ಭದಲ್ಲಿ ಮೃತ ಪಟ್ಟವರಂತೆ ಇರುವವರನ್ನು ಎಚ್ಚರಿಸಲು ಇದು ಸಾಧ್ಯವಾಯಿತ್ತು. ದಿನನಿತ್ಯವು ನಮ್ಮ ಸಮಾಜದಲ್ಲಿ ಜಾತಿ ಧರ್ಮದ ಹೆಸರಿನಲ್ಲಿ ಕಚ್ಚಾಡುತ್ತಿರುವವರನ್ನು ಒಗ್ಗೂಡಿಸಿ ಸೌಹಾರ್ದತೆಯನ್ನು ಬೆಳಸಲು ಕುವೆಂಪುರವರ ಕಾವ್ಯ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿದೆ.

ಭಾರತ ದೇಶವೂ ಒಂದು ಸುಧಿರ್ಘವಾದ ಚರಿತ್ರೆಯನ್ನು ಹೊಂದಿದೆ. ಪರಕೀಯ ಅನೇಕ ದಾಳಿಗಳಿಂದ ಸಮಸ್ಯೆಗಳನ್ನು ಎದುರಿಸಿದೆ. ಕಾಲ ಕಾಲಕ್ಕೆ ಭಾರತ ದೇಶದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾದ ಚಳುವಳಿಗಳು ಹೋರಾಟಗಳು ಹುಟ್ಟಿಕೊಂಡಿವೆ. ಅದರಲ್ಲಿ ಸಾಹಿತ್ಯವು ದೇಶದ ಸಮಸ್ತ ಸಮಾಜದ ಆಗು ಹೋಗುಗಳನ್ನು ಶ್ರೀ ಸಾಮಾನ್ಯರ ಬಳಲಿಕೆ ತೊಳಲಿಕೆಗಳು ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಕವಿಗಳು ಸಾಹಿತಿಗಳು ತಮ್ಮ ಸೂಕ್ಷ್ಮ ಗ್ರಹಣಶಕ್ತಿಯಿಂದ ಸಾಮಾಜಿಕ ಪರಿವರ್ತನೆ ಹಾಗೂ ಪ್ರಜೆಗಳು ತಮ್ಮ ಹಕ್ಕುಗಳನ್ನು ಪಡೆಯಲು ಯಾವಾಗಲು ಹೋರಾಟ ಮಾಡಲು ಮುಂದಾಗಬೇಕು. ಹಾಗೂ ರಾಷ್ಟ್ರೀಯ ನವನಿರ್ಮಾಣ ಕಾರ್ಯದಲ್ಲಿ ಪ್ರತಿಯೊಬ್ಬರು ನಿರಂತರವಾಗಿ ಪ್ರಯತ್ನಿಸಬೇಕೆಂದು ತಮ್ಮ ಸಾಹಿತ್ಯದ ಮೂಲಕ ಜನಮಾನವನ್ನು ಸ್ವಾತಂತ್ರ್ಯದ ಅವಶ್ಯಕತೆಯ ಕುರಿತು ಸುಧಿರ್ಘವಾಗಿ ನಿರೂಪಿಸಿದ್ದಾರೆ. ಸಾಹಿತ್ಯವು ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿತು. ಕವಿಗಳು ತಮ್ಮ ಕೃತಿಗಳನ್ನು ರಚಿಸಿ ಜನರಲ್ಲಿ ದೇಶಪ್ರೇಮ, ತ್ಯಾಗ–ಬಲಿದಾನದ ಚಾರಿತ್ರಿಕತೆಯನ್ನು ಅದರ ಪ್ರಜ್ಞೆಯನ್ನು ಮೂಡಿಸಲು ಉತ್ಸಾಹ ತುಂಬಿದರು. ಸ್ವಾತಂತ್ರ್ಯ ಚಳುವಳಿಯ ಕಾವ್ಯ ಮತ್ತು ಮಹಾತ್ಮ ಗಾಂಧಿಯ ಹೋರಾಟದ ಪ್ರಭಾವ ಕನ್ನಡ ನಾಡಿನ ನೆಲದಲ್ಲಿ ದಟ್ಟವಾಗಿತ್ತು. ಸ್ವಾತಂತ್ರ್ಯ ಚಳುವಳಿಗೆ ಸ್ಪೂರ್ತಿಯಾಗಿ ಜನಮನಕ್ಕೆ ವೈಚಾರಿಕ

ಪ್ರಣಾಳಿಕೆಯನ್ನು ತಮ್ಮ ಬರಹಗಳ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ದೇಶದ ಅನೇಕ ಸಾಹಿತಿಗಳು ದೇಶಪ್ರೇಮದ ಬಗ್ಗೆ ಬರೆದುದು ಮೆಚ್ಚುವಂತಹದ್ದು.

ಪರಾಮರ್ಶನ ಗ್ರಂಥಗಳು :

1. ಭಾರತ ಸ್ವಾತಂತ್ರ್ಯದ ಗಾಯಿತ್ರಿ., ಸಂಪಾದಕರು, ಬಿ.ಎ.ಸನದಿ., ಸಾಹಿತ್ಯ ಆಕಾಡಮಿ., 2010., ನವದೆಹಲಿ
2. ಕನ್ನಡ ಸಾಹಿತ್ಯವೆಂಬ ಸ್ವಾತಂತ್ರ್ಯ ಹೋರಾಟ., ಬರಗೂರು ರಾಮಚಂದ್ರಪ್ಪ., ಅಂಕಿತ ಪ್ರಕಾಶನ ಬೆಂಗಳೂರು–2007
3. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು., ಎನ್.ಪಿ. ಶಂಕರನಾರಾಯಣ ರಾವ್
4. ಕನ್ನಡ ಪತ್ರಿಕೆಗಳು ಮತ್ತು ಸಾಹಿತ್ಯ., ಕೆ.ವಿಜಯಶ್ರೀ., ಪ್ರಾಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪ್ರಭು ಅಲ್ಲಮನ ವಚನಗಳಲ್ಲಿ ಸಾಮಾಜಿಕತೆ ಮತ್ತು ತಾತ್ವಿಕತೆ
(ಚಂದ್ರಶೇಖರ ತಾಳ್ಯ ಅವರ ಪ್ರಭು ಅಲ್ಲಮ ಕೃತಿಯನ್ನು ಅನುಲಕ್ಷಿಸಿ)

1
ಡಾ. ನಟರಾಜು ಜೆ. ಆರ್.
ಅತಿಥಿ ಉಪನ್ಯಾಸಕ, ಕನ್ನಡ ವಿಭಾಗ,
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಅಲ್ಲಮ ಶರಣ ಶ್ರೇಷ್ಠ. ಬಸವಣ್ಣನವರಿಗಿಂತಲೂ ಹಿರಿಯವನು. ಬಳ್ಳಿಗಾವೆಯ ಬಳ್ಳಿಯಲ್ಲಿ ಅರಳಿದ ಹೂವಾಗಿ ಕಂಡು ಬಂದವನು. ವೈರಾಗ್ಯ ಹಾಗೂ ಜ್ಞಾನದಲ್ಲಿ ಪರಿಣಿತ ಬುದ್ದಿಶಾಲಿ. ಅನುಭವ ಮಂಟಪ ಮತ್ತು ಶೂನ್ಯಪೀಠಗಳ ಅಧ್ಯಕ್ಷ. ಢಾಂಬಿಕತೆ, ಅಂಧಶ್ರದ್ಧೆ, ಬಾಹ್ಯಾಡಂಬರ, ಅಜ್ಞಾನ, ಅಸತ್ಯ, ವಿಕಾರತೆಗಳ ನಿಷ್ಠುರ ಉಗ್ರವಾದಿ. ಯಾವುದೇ ಮತ, ಧರ್ಮ, ಸಂಪ್ರದಾಯಗಳ ಕಟ್ಟಿಗೆ ಒಳಪಟ್ಟವನಲ್ಲ. ಎಲ್ಲವನ್ನು ನೇರ, ಖಚಿತ ಮತ್ತು ವಿಮರ್ಶೆಗೆ ಗುರಿಪಡಿಸಿದವನು. ಬಸವಣ್ಣನ ವಿಚಾರ ಕ್ರಾಂತಿಗೆ ತನ್ನ ಜ್ಞಾನ, ವೈರಾಗ್ಯಗಳನ್ನಿತ್ತು ಮುನ್ನಡೆಸಿದವನು.

ಈತನ ವ್ಯಕ್ತಿತ್ವ ಮತ್ತು ವಚನ ರಚನೆ ಕನ್ನಡಕ್ಕಷ್ಟೆಯಲ್ಲದೆ, ಭಾರತೀಯ ಹಾಗೂ ಜಾಗತಿಕ ಸಾಹಿತ್ಯಕ್ಕೆ ಶ್ರೇಷ್ಟವಾದುದಾಗಿದೆ. ಗುಹೇಶ್ವರ

ಅಂಕಿತದೊಂದಿಗೆ ವಚನ ಬರೆದವನು. ಈತನ ವಚನ ಭಾಷೆ ಕ್ಲಿಷ್ಟಕರ ಹಾಗೂ ಸಂಕೀರ್ಣತೆಯಿಂದ ಕೂಡಿದ್ದು, ಅನುಭವ ಹಾಗೂ ಜ್ಞಾನದಲ್ಲಿ ಅತ್ಯುನ್ನತ ಶಿಖರದಲ್ಲಿ ನಿಂತಿದ್ದಾನೆ. ಮಾತೆಂಬುದು ಜ್ಯೋತಿರ್ಲಿಂಗ ಎಂಬ ಹೇಳಿಕೆಯ ಮೂಲಕ ವಚನಗಳಲ್ಲಿ ಅಲಂಕಾರ, ಉಪಮಾನ, ಒಗಟು, ಗಾದೆಗಳನ್ನು ಪರಿಣಾಮಕಾರಿಯಾಗಿ ಬಳಸಿದ್ದಾನೆ. ಅನುಭವಿಯಾಗಿ, ಕವಿಯಾಗಿ, ಸಿದ್ಧಸಾಧಕನಾಗಿ ಕಾವ್ಯದ ಮಟ್ಟವನ್ನು ಮೀರಿ ನಿಂತ ಪ್ರಭಾವಿಯಾಗಿದ್ದಾನೆ. ಬೆಡಗಿನ ವಚನಗಳ ಮೂಲಕ ಅನುಭಾವದ ನಿರಾಕಾರವನ್ನು ಸಾಕಾರಗೊಳಿಸಿದ್ದಾನೆ. ಈತ ವೀರಶೈವರ ಗುರು, ಕನ್ನಡ ಸಾಹಿತ್ಯಾರ್ಥಿಗಳಿಗೆ ವಿಸ್ಮಯ, ಬಸವಣ್ಣನಾದಿ ಶರಣರುಗಳಿಗೆ ಮಾರ್ಗದರ್ಶಕನಾಗಿ 12ನೇ ಶತಮಾನದ ಎಲ್ಲ ಶರಣರ ಮೇಲೂ ಪ್ರಭಾವ ಬೀರಿದ್ದಾನೆ. ಅಷ್ಟೆಯಲ್ಲದೆ ಈ ಕಾಲದ ಆಂದೋಲನದ ನಾಯಕರಿಗೆ ತನ್ನ ನೈತಿಕ ಶಕ್ತಿ ಧಾರೆಯೆರದ ಮಹಾಪುರುಷ ಈ ಅಲ್ಲಮ.

ಅಲ್ಲಮನ ಜೀವನ : ಅಲ್ಲಮನ ಜನ್ಮಸ್ಥಳ ಇಂದಿನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ. ಈ ಬಳ್ಳಿಗಾವೆಯು ಅಂದು ಕಲ್ಯಾಣದ ಬಿಜ್ಜಳ ರಾಜನ ಕಾಲದಲ್ಲಿ ಮತ್ತು ಅದಕ್ಕೂ ಮುಂಚೆ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಬೆಳೆದಿದ್ದು, ಬನವಸೆ 12000 ನಾಡಿನ ರಾಜಧಾನಿಯಾಗಿತ್ತು. ಜೊತೆಗೆ ಬಳ್ಳಿಗಾವೆಯು ಪ್ರಸಿದ್ಧ ಮಠವೊಂದರ ಕೇಂದ್ರವೂ ಆಗಿತ್ತು. ಅಲ್ಲಮ ಆ ಪಟ್ಟಣದ ದೇವದಾಸಿ ವರ್ಗದವರ ಕುಟುಂಬದವನೆಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಕೆಲವರು ಇವನ ತಂದೆ ನಟುವ(ನಟ್ಟುಗ) ಜಾತಿಯವರೆಂದು, ಶೂದ್ರಕುಲದವರೆಂದೂ ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ನಟುವ (ಕಲಾವಿದ) ಮನೆಯಲ್ಲಿ ಜನಿಸಿದ ಈತನಿಗೆ ಮೃದಂಗವಾದನ ಕಲೆಯಲ್ಲಿ ಅಭಿರುಚಿ ಇದ್ದಿತೆಂದು ಹೇಳಲಾಗುತ್ತದೆ. ಒಂದು ದಿನ ಈತ ತನ್ನ ಮನೆ ದೇವರಾದ ಗೊಗ್ಗೇಶ್ವರ ದೇವಾಲಯದಲ್ಲಿ ಮೃದಂಗವನ್ನು ನುಡಿಸುತ್ತಿರುವ ಸಂದರ್ಭದಲ್ಲಿ ಅದೇ ಊರಿನ ಧನದತ್ತನ ಮಗಳಾದ ಕಾಮಲತೆಗೂ ಈತನಿಗೂ ಪ್ರೇಮ ಹುಟ್ಟುತ್ತದೆ. ಇಬ್ಬರು ಕೆಲಕಾಲ ಗೃಹಸ್ಥ ಜೀವನ ನಡೆಸುತ್ತಾರೆ. ಆದರೆ ಇಲ್ಲಿ ಕೆಲವು ವಿಚಾರಗಳನ್ನು ಸೂಕ್ಷ್ಮವಾಗಿ ನೋಡುವ ಅಂಶಗಳಿವೆ. ಇಲ್ಲಿ ಕಾಮಲತೆ ಆ ಊರಿನ ವೈಶ್ಯ ಜಾತಿಗೆ ಸೇರಿದ ಧನದತ್ತನ ಮಗಳೆಂದು ಭಾವಿಸಿದರೆ ಆ ಕಾಲದ ಸಾಮಾಜಿಕ ವ್ಯವಸ್ಥೆ ಅಲ್ಲಮ–ಕಾಮಲತೆಯರ ವಿವಾಹಕ್ಕೆ ಸಮ್ಮತಿ ನೀಡಿರಲಾರದು. ಇದೇ ಸಂದರ್ಭದಲ್ಲಿ ಕಾಮಲತೆ ಮರಣ ಹೊಂದುತ್ತಾಳೆ. ಇವಳ ಮರಣಕ್ಕೆ ಅಲವು ಅನುಮಾನಗಳು ಹುಟ್ಟಿಕೊಳ್ಳುವ ಸಾಧ್ಯತೆಗಳಿವೆ. ಅದೇನೆ ಇರಲಿ ಕಾಮಲತೆಯ ಸಾವು ಅಲ್ಲಮನನ್ನು ತೀವ್ರತರವಾಗಿ ಕಾಡಿದೆ. ಒಂದು ಹಂತದಲ್ಲಿ ಮತಿಭ್ರಮಣೆಗೊಳಗಾದವನಂತೆ

ತಿರುಗುತ್ತಾನೆ. ಹೀಗೆ ತಿರುಗಾಡುತ್ತ ಅಲ್ಲಮ ಒಂದು ಕಣಗಿಲೆ ತೋಟವನ್ನು ಪ್ರವೇಶ ಮಾಡುತ್ತಾನೆ. ತೋಟದಲ್ಲಿ ತಿರುಗಾಡುತ್ತ ತೆಂಗಿನ ಮರಕ್ಕೆ ಒರಗಿಕೊಂಡು ಅನ್ಯ ಮನಸ್ಕನಾಗಿ ಕಾಲಿನ ಹೆಬ್ಬೆರಳಿನಿಂದ ನೆಲ ಕೆದಕುತ್ತಿರುವಾಗ ನೆಲದಲ್ಲಿ ಎಂದೋ ಹೂತುಹೋಗಿದ್ದ ದೇವಾಲಯದ ಶಿಖರ ಕಾಣಸಿಗುತ್ತದೆ. ಚಕಿತನಾಗಿ ಹಲವರ ಸಹಾಯದಿಂದ ಶಿಖರದ ಭಾಗವನ್ನು ಬಿಡಿಸುತ್ತ ಹೋದಂತೆ ದೇವಾಲಯವಿರುವುದು ಕಂಡುಬರುತ್ತದೆ. ದೇವಾಲಯದ ಪ್ರವೇಶಧ್ವಾರವನ್ನು ಮುಕ್ತಗೊಳಿಸಿ ಒಳ ಪ್ರವೇಶ ಮಾಡಲು ಕೇಳಿಕೊಂಡಾಗ ಅಲ್ಲಿನ ಯಾವೊಬ್ಬರೂ ಧೈರ್ಯ ಮಾಡದ ಸಂದರ್ಭದಲ್ಲಿ ಸಾಕಷ್ಟು ನೊಂದಿದ್ದ ಅಲ್ಲಮ ಏನಾದರಾಗಲಿ ಎಂದು ದೇವಾಲಯ ಪ್ರವೇಶ ಮಾಡುತ್ತಾನೆ. ಒಳಗಡೆ ಅನಿಮಿಷನೆಂಬ ಯೋಗಿಯ ಎಲುಬಿನ ಪಂಜರದಿಂದ ಇಷ್ಟಲಿಂಗ ದೊರೆಯುತ್ತದೆ. ಕಾಮಲತೆಯ ಸಾವಿನಿಂದ ಕುರುಡನಾಗಿದ್ದ ಅಲ್ಲಮನಿಗೆ ಈಗ ಭವಿಷ್ಯದ ಸ್ಪಷ್ಟ ದಾರಿ ಕಾಣತೊಡಗಿತು. ತಾನು ಒಂದು ಹೆಣ್ಣಿನ ಸಾವಿನಿಂದ ದುಃಖಿಸಬೇಕೆ? ಎಂದು ಯೋಚಿಸಿ ಇಷ್ಟಲಿಂಗಕ್ಕಾಗಿ, ದೇವರಿಗಾಗಿ ಬದುಕಿದರೂ–ಸತ್ತರೂ ಪರವಾಗಿಲ್ಲ, ದೇವರಿಗಾಗಿಯೇ ಸಾಯಬೇಕು ಎಂದು ತೀರ್ಮಾನಿಸಿದನು. ಈ ಹಂತ ಈತನ ಜೀವನದ ಹೊಸ ಅಧ್ಯಾಯಕ್ಕೆ ನಾಂಧಿಯಾಯಿತು.

ಗಂಡು ಹೆಣ್ಣಿನ ಸಂಬಂಧದ ಸಂಕೀರ್ಣತೆಯನ್ನು ಅಲ್ಲಮ ಅರಿತಿದ್ದನು. ಹಾಗಾಗಿ ಮಾನಸಿಕವಾಗಿ ಕಾಮಲತೆಯ ತೊಡಕನ್ನು ಬಿಡಿಸಿಕೊಳ್ಳುವುದು ಕಷ್ಟವಾಯಿತು. ಕೈಯಲ್ಲಿ ಲಿಂಗವನ್ನು ಹಿಡಿದು ಹೊರಟ ಅಲ್ಲಮ ಹುಚ್ಚನಂತೆ ಅಲೆದಾಡಿದ. ಕಾಮಲತೆಯ ಹುಚ್ಚನ್ನು ದೇವರ ಹುಚ್ಚನ್ನಾಗಿ ರೂಪಾಂತರಿಸಲು ಪ್ರಯತ್ನಿಸಿದ ಎಂಬುದನ್ನು ಅಲ್ಲಮ

ಎಸೆಯದಿರು ಎಸೆಯದಿರು ಕಾಮ
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ
ಇದು ಸಾಲದೆ ನಿನಗೆ?
ನಿನ್ನ ಬಾಣ ಹುಸಿಯಲದೇಕೋ!
ಗೋಗೇಶ್ವರ ಲಿಂಗದ ವಿರಹದಲ್ಲಿ ಬೆಂದವರ
ಮರಳಿ ಸುಡಲುಂಟೆ ಕಾಮ.

ಎಂದು ಹೇಳುತ್ತ ಬದುಕನ್ನು ಸರಳಗೊಳಿಸಿಕೊಳ್ಳಲೆತ್ನಿಸುತ್ತಾನೆ. ಮೊದಲ ಹಂತದಲ್ಲಿ ಅಲ್ಲಮ ಸಾಮಾನ್ಯ ಜನರಂತೆ ಬದುಕಿದವನು. ಆದರೆ ಎರಡನೇ ಹಂತದಲ್ಲಿ ಲೌಕಿಕ ಜೀವನದಿಂದ ದೂರ ಹೋಗಿ ವಿರಕ್ತನಾಗಿ ಬದುಕಿದನು. ಬೆಟ್ಟ, ಗುಡ್ಡ, ಕಾಡು,

ಪ್ರಾಣಿ, ಯೋಗ ಇವುಗಳೆ ಇವನ ಪ್ರಪಂಚವಾಗಿತ್ತು.

ಇವನ ಬದುಕಿನ ಮೂರನೇ ಹಂತದಲ್ಲಿ ದುಃಖಿಗಳನ್ನು ಸಂತೈಸುವ, ಮೂಢರನ್ನು ಎಚ್ಚರಿಸುವ, ಸಾಧಕರಿಗೆ ಸರಳ ಮಾರ್ಗ ತೋರುವ ಉಪದೇಶಕನಾದ. ತಾನು ಕಂಡ ಸಣ್ಣತನವನ್ನು ಕಟುವಾಗಿ ಟೀಕಿಸುತ್ತಾನೆ. ಒಳ್ಳೆಯದನ್ನು ಮೆಚ್ಚಿ ಗೌರವಿಸುತ್ತಾನೆ.

ಕಲ್ಯಾಣದಲ್ಲಿ ಅಲ್ಲಮ :

ಅಲ್ಲಮ ಕಲ್ಯಾಣದಲ್ಲಿ ಅಲವು ಕಾಲ ಇರುತ್ತಾನೆ. ಅಲ್ಲಿ ಶಿವಾನುಭವ ಗೋಷ್ಟಿಗಳಲ್ಲಿ ಕೇಂದ್ರ ವ್ಯಕ್ತಿಯಾಗಿದ್ದು, ಶಿವತತ್ವ ಉಪದೇಶಿಸುತ್ತಾನೆ. ಬಸವಣ್ಣ ಯೋಜಿಸಿಕೊಂಡಿದ್ದ ಆಂದೋಲನಕ್ಕೆ ತನ್ನ ಪೂರ್ಣ ಬೆಂಬಲ ಕೊಟ್ಟು ಪ್ರೋತ್ಸಾಹಿಸುತ್ತಾನೆ. ಅಷ್ಟೆಯಲ್ಲ ಸಿದ್ಧರಾಮನನ್ನು ಕಲ್ಯಾಣಕ್ಕೆ ಕರೆಸಿಕೊಂಡದ್ದು, ಕಲ್ಯಾಣಕ್ಕೆ ಬಂದ ಅಕ್ಕಮಹಾದೇವಿಯನ್ನು ಎಲ್ಲರ ಮುಂದೆ ಪ್ರಶ್ನಿಸಿ ಆಕೆಗೆ ಕಲ್ಯಾಣದಲ್ಲಿ ಅವಕಾಶ ಮಾಡಿಕೊಟ್ಟದ್ದು ಇವೆಲ್ಲವೂ ಕಲ್ಯಾಣದಲ್ಲಿ ಜ್ಞಾನ ಸೃಷ್ಟಿಯಾಗಲು ಕಾರಣವಾಗುತ್ತವೆ.

ಯೌಗಿಕ ಪ್ರತಿಭೆಯಿಂದ ಅಲ್ಲಮ ನಮ್ಮಿಂದ ದೂರ ನಿಲ್ಲುವಂತೆ ಭಾಸವಾಗುತ್ತದೆ. ಓದುಗರಿಗಷ್ಟೆಯಲ್ಲ, ಅಲ್ಲಮನ ವಚನಗಳ ಕುರಿತು ಬರೆಯುವವರು ಕೂಡ ಈ ಅಳುಕನ್ನು ಅನುಭವಿಸುತ್ತಾರೆ. ಈ ನಿಗೂಢತೆಗೆ ಮುಖ್ಯ ಕಾರಣ ಪರಿಚಿತವಲ್ಲದ ಅವನ ಮಾನಸಿಕ ಜಗತ್ತು. ಈತನಲ್ಲಿ ಮಾನಸಿಕ ತುಮುಲದ ವಚನಗಳು ಕಡಿಮೆ. ತನ್ನ ಹಿಂದಣ ಜಗತ್ತಿನ ಬಗ್ಗೆ ಹಾಗೂ ವಾಸ್ತವದ ಬಗ್ಗೆ ಅವನೇ ಚಕಿತನಾಗಿ

ಎತ್ತಣ ಮಾಮರ! ಎತ್ತಣ ಕೋಗಿಲೆ!
ಎತ್ತಣಿಂದೆತ್ತ ಸಂಬಂಧವಯ್ಯ
ಬೆಟ್ಟದ ನೆಲ್ಲಿಕಾಯಿ, ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯ!
ಗೋಗೇಶ್ವರ ಲಿಂಗಕ್ಕೆಯು ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ!

ಎಂದು ತನ್ನ ಬದುಕಿನಲ್ಲಾದ ಅನಿರೀಕ್ಷಿತ ಬದಲಾವಣೆಗಳನ್ನು ಕುರಿತು ಚರ್ಚಿಸುತ್ತಾನೆ. ಸಾಮಾಜಿಕ ಚಿಂತಕನಾಗಿ ಅಲ್ಲಮ : ತರ್ಕಬದ್ಧವಾಗಿ ಬದುಕುವ, ಪ್ರಶ್ನಿಸುವ ಈತ ಸಮಾಜದ ರಚನೆಯನ್ನು ಪೂರ್ಣವಾಗಿ ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಅವನಿಗಿರುವ ಕನಸುಗಳು ಸಮಾಜದಲ್ಲಿರುವುದಿಲ್ಲ. ಇಂತಹ ಸಮಾಜದಲ್ಲಿ ಸಮಾಜದ ಕೊಳಕುಗಳಾದ ಜಾತಿ, ಬಡತನ, ಅಜ್ಞಾನ, ದರ್ಪ ಇವೆಲ್ಲವೂ ಇವೆ ಮತ್ತು ಇವುಗಳನ್ನು

ಮುಂದುವರೆಸುವ ಹುನ್ನಾರಗಳು ನಡೆಯುತ್ತಿರುತ್ತವೆ. ಈ ಸಮಸ್ಯೆಗಳ ಹೋಗಲಾಡಿಸಲು ಕೆಲವರು ಆಗಾಗ ಮಾರ್ಗದರ್ಶಕರಾಗಿ ಕಾಣಿಸಿಕೊಳ್ಳುತ್ತಾರೆ. ಇಂತಹ ಸಮಸ್ಯೆಗಳು 12ನೇ ಶತಮಾನದಲ್ಲಿಯೆ ಕಾಣಿಸಿಕೊಂಡವು ಎಂದರೆ ತಪ್ಪಾಗಲಾರದು. ಈ ಕಾಲಘಟ್ಟದ ವ್ಯವಸ್ಥೆ ಧರ್ಮಕ್ಕೆ ಮುಖವಾಡ ತೊಡಿಸಿತ್ತು. ಮನುಷ್ಯನ ಸ್ವಾತಂತ್ರ್ಯವನ್ನು ನಾಶಮಾಡಿತ್ತು. ದೇವಸ್ಥಾನವಾಗಲೀ, ರಾಜಕೀಯ ವ್ಯವಸ್ಥೆಯಾಗಲೀ ಇವುಗಳಾವು ಶ್ರಮಕ್ಕೆ ತಕ್ಕ ಪ್ರತಿಫಲ ನೀಡಲಿಲ್ಲ. ದೇವರು ಕೂಡ ಸಾಮಾನ್ಯ ಜನರಿಂದ ದೂರ ಸರಿದು ಶಿಷ್ಟನಾಗಿಬಿಟ್ಟಿದ್ದ.

ಇಂತಹ ಹಲವು ಸಮಸ್ಯೆಗಳನ್ನು ಎದುರಿಸಿದವರಲ್ಲಿ 12ನೇ ಶತಮಾನದ ಹಲವರಿದ್ದರು. ಬಸವಣ್ಣ ನೇರವಾಗಿ ಸಾಮಾಜಿಕವಾದ ಪದ್ಧತಿಗಳನ್ನು ನೇರವಾಗಿ ಟೀಕಿಸುತ್ತಾನೆ. ಜೊತೆಗೆ ಅದರ ಪುನರ್‍ರಚನೆಗೂ ಮುಂದಾಗುತ್ತಾನೆ. ಆದರೆ ಅಲ್ಲಮ ನೇರವಾಗಿ ಮಾಡುವುದಿಲ್ಲ ಎಂಬುದನ್ನು ಕಾಣಬಹುದು. ಹಾಗಂತ ಎಲ್ಲೋ ಒಂದು ಕಡೆ ಅಲ್ಲಮ ಕುಳಿತುಕೊಳ್ಳುವುದಿಲ್ಲ. ಜೊತೆಗೆ ಅಲ್ಲಮನಿಗೆ ಯಾವುದೇ ಗೊಂದಲಗಳಿಲ್ಲದೆ ತನ್ನ ಚಿಂತನೆಗಳ ಬಗ್ಗೆ ಸ್ಪಷ್ಟತೆ ಇತ್ತು.

ಸುಳಿದೆಡೆ ನೆಟ್ಟಗೆ ಜಂಗಮನಾಗಿ ಸುಳಿಯಬೇಕು
ನಿಂದರೆ ನೆಟ್ಟಗೆ ಭಕ್ತನಾಗಿ ನಿಲ್ಲಬೇಕು
ಇವೆರಡೂ ಆಗದೇ ಇದ್ದಲ್ಲಿ ಉಭಯ ಭ್ರಷ್ಟನಾಗವ

ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಇದರಿಂದ ಸ್ವಸ್ಥ ಸಮಾಜ ನಿರ್ಮಾಣದ ಉದ್ದೇಶ ಇವನ ಕಲ್ಪನೆಯಾಗಿತ್ತು ಎಂಬುದು ಅರ್ಥವಾಗುತ್ತದೆ. ಈ ಕಾರಣಕ್ಕಾಗಿಯೇ ಮೊದಲು ಮನುಷ್ಯ ರಿಪೇರಿಯಾಗಬೇಕೆಂದು ಒತ್ತಾಯಿಸುತ್ತಾನೆ. ಈ ಮನುಷ್ಯನ ಆಂತರಿಕ ವಿಕಾಸ ಸಾಮಾಜಿಕ ವಿಕಾಸದಲ್ಲಿ ಲೀನಗೊಳ್ಳಬೇಕು. ಯಾವುದೇ ಆಧ್ಯಾತ್ಮ ಸಾಧನೆ ಸಾಮಾಜಿಕ ಕಳಕಳಿ ಆಗಬೇಕು. ಇಲ್ಲಿ ವಯುಕ್ತಿಕ ನೆಲೆ ಮತ್ತು ಸಾರ್ವತ್ರಿಕ ನೆಲೆ ಎರಡೂ ಬೆಸೆದುಕೊಳ್ಳಬೇಕು. ಆದರೆ ವೈದಿಕ ಮನುಷ್ಯನ ಆಧ್ಯಾತ್ಮಿಕ ವಿಕಾಸ ಎಂಬುದು ನಿರ್ಜನ ಅರಣ್ಯಗಳಲ್ಲಾಗುವಂತಹದ್ದು ಮತ್ತು ಅಲ್ಲಿಯೇ ಕೊನೆಗೊಳ್ಳುವಂತಹದ್ದು. ಅದಕ್ಕೆ ಅಲ್ಲಮ ಹೇಳುತ್ತಾನೆ

ಕೊಟ್ಟ ಕುದುರೆಯನೇರಲಾರದವ
ವೀರನೂ ಅಲ್ಲ ಧೀರನೂ ಅಲ್ಲ.

ಅಲ್ಲಮನ ಜೀವನದಲ್ಲಿ ಸಾವಾಜಿಕ ವ್ಯವಸ್ಥೆಯಲ್ಲಿ ಶಿಲಾ ವಿಗ್ರಹಗಳು, ದೇವಾಲಯಗಳಂತಹ ಬೇಜವಬ್ದಾರಿ ಘಟನೆಗಳು ಕಂಡು ಬಂದು ಇವುಗಳಿಂದ

ಮನುಷ್ಯನನ್ನು ನಿಯಂತ್ರಿಸುವುದಲ್ಲದೆ, ಆಂತರಿಕ ಶೋಧನೆಯನ್ನು ನಾಶಮಾಡುತ್ತವೆ ಎನ್ನುತ್ತಾನೆ. ಅದಕ್ಕಾಗಿಯೆ ಈತ

ಕಲ್ಲ ಮನೆಯ ಮಾಡಿ
ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕೆಡಹಿದರೆ
ನಿಮ್ಮ ದೇವರೆತ್ತ ಹೋದವೋ ಗುಹೇಶ್ವರ

ಎಂದು ಲೇವಡಿ ಮಾಡುತ್ತಾನೆ. ಆಧುನಿಕ ಕಾಲಕ್ಕು ಸಲ್ಲುವ ಈ ವಿಡಂಭನೆ ನಿಜಕ್ಕೂ ಮಹತ್ವವಾದುದು ಎನಿಸುತ್ತದೆ. ಬಾಹ್ಯ ವಸ್ತುಗಳಿಂದ ನಿರ್ಮಿತವಾದದ್ದರ ನಿಸ್ಸಾರವನ್ನು, ವಿನಾಶವನ್ನು ಅರಿಯದೇ ಅದನ್ನು ಮೀರದ ದೇವರ ಹುಡುಕಾಟ ಮತ್ತು ಸಂಕುಚಿತ ಸ್ಥಿತಿಯನ್ನು ಹೇಳುತ್ತದೆ. ಜ್ಞಾನಿಯಾದವನು ಇಂತಹ ಯಾವುದೇ ಬಾಹ್ಯ ಪರಿಕರವನ್ನು ಉಪೇಕ್ಷಿಸಿ ವಿಶ್ವದ ಸಮಷ್ಟಿಯನ್ನು, ದೇವರನ್ನು ತನ್ನಲ್ಲೇ ಕಾಣುತ್ತಾನೆ. ಆದರೆ ಮನುಷ್ಯನಲ್ಲಿ ಜ್ಞಾನಿಯಾಗಲು ಬಿಡದ ಕೃತಕ ಕಂಟಕಗಳು ದೇವಾಲಯವನ್ನು ಕಲ್ಲಿನಲ್ಲಿ ನಿರ್ಮಿಸುತ್ತವೆ. 'ಹೋದವಲ್ಲಾ ಮೀರಲಾದ ನಿರ್ಮಿತಂಗಳೆಲ್ಲಾ' ಎನ್ನುತ್ತಾನೆ. ಅಂದರೆ ಅಶಾಶ್ವತವೆಂಬುದನ್ನು ಶಾಶ್ವತವೆಂದು ಭ್ರಮಿಸುವ ಮನಸ್ಥಿತಿಗಳನ್ನು ಕುರಿತು ಮಾತನಾಡುತ್ತಾನೆ. ಅಸಹಜ ಹಾಗೂ ವಿರುದ್ಧ ಕ್ರಿಯೆಗೆ ತನ್ನನ್ನು ತೆತ್ತುಕೊಳ್ಳುತ್ತಾನೆ.

"ತಲೆಯಲಿಟ್ಟುಂಬುದ ಒಲೆಯಲಿಟ್ಟುಂಬರು
ಒಲೆಯಲಿಟ್ಟುಂಬುದ ಹೊಟ್ಟೆಯಲಿಟ್ಟುಂಬೈಸಕ್ಕರ
ಹೊಗೆ ಘನವಾಯ್ತು
ಇದ ಕಂಡು ಹೇಸಿ ಬಿಟ್ಟೆನು ಗುಹೇಶ್ವರ" ಎನ್ನುತ್ತಾನೆ.

ಅನ್ನ ಆಹಾರಗಳೇ ಪ್ರಮುಖವೆಂದು ಮನುಷ್ಯ ತೀರ್ಮಾನಿಸಿದಾಗ ದ್ವೇಷದ ಕಿಚ್ಚನ್ನು, ಹೊಟ್ಟೆ ಕಿಚ್ಚಿನ ಹೊಗೆಯನ್ನು, ಲೇವಾದೇವಿ ವಕ್ರತೆಯನ್ನು ಹೆಚ್ಚಿಸಿ ವೈಚಾರಿಕ ನೆಲೆ ಹಾಳು ಮಾಡಿದರು ಎನ್ನುತ್ತಾನೆ. ಸಮಾಜ ಒಂದು ಪರಂಪರೆಯಿಂದ ಬದುಕುತ್ತದೆ. ಈ ಪರಂಪರೆಯ ಬುನಾದಿ ಗಟ್ಟಿಯಾಗಿದ್ದಷ್ಟು ಅದರ ಆಯಸ್ಸು ಮತ್ತು ಆರೋಗ್ಯ ಸರಿಯಾಗಿಯೇ ಇರುತ್ತದೆ. ಮನುಷ್ಯನ ಆಸೆಬುರುಕತನ ಅರ್ಥರಹಿತ ಜೀವನಕ್ಕೆ ಕನ್ನಡಿ ಹಿಡಿದಂತೆ ಎನ್ನುತ್ತಾನೆ ಅಲ್ಲಮ.

ಧರೆಯ ಮೇಲುಳ್ಳ ಅರು ಹಿರಿಯರೆಲ್ಲರೂ
ಮರುಳು ಗೊಂಡಾಡುತ್ತಿದ್ದಾರೆ ನೋಡಾ
ಮಂಜಿನ ಮಡಕೆಯೊಳಗೆ ರಂಜನೆಯ ಭಂಡವ ತುಂಬಿ

ಅಂಜದೆ ಪಾಕವ ಮಾಡಿಕೊಂಡು
ಭಂಡವ ಮಾಡುತ್ತಿಪ್ಪರು ನೋಡಾ
ಸಂಜೀವಿನಿಯ ಬೇರೆ ಕಾಣದೆ
ಮರಣಕ್ಕೊಳಗಾದರು ಗುಹೇಶ್ವರನರಿಯದ
ಭವಭಾರತರೆಲ್ಲರೂ

ಎಂಬ ಅಲ್ಲಮನ ಮಾತುಗಳಲ್ಲಿ ಇಲ್ಲಿ ಯಾರೂ ಸರಿಯಿಲ್ಲ ಎನ್ನುತ್ತ ಮನುಷ್ಯನ ಗ್ರಹಿಕಯೆ ನಾಶವಾಗಿ, ಎಲ್ಲರೂ ಮರಣ ಪೀಡಿತರು, ತಪ್ಪಿಸಿಕೊಳ್ಳಲು ಎಷ್ಟೊಂದು ಪೂಜೆ ಮಾಡಿದರೂ ಮುಕ್ತರಾಗಲು ಯಾರಿಂದಲೂ ಸಾಧ್ಯವಿಲ್ಲ.

ಎಂಬತ್ತು ಲಕ್ಷ ಯೋನಿ ಮುಖ ಜೀವಿಗಳಿಗೆ
ಎಂಬತ್ತ ನಾಲ್ಕು ಲಕ್ಷಾರಾಧನೆ
ಒಂದೊಂದರಾರಾಧನೆಯ ನೊಂದೊಂದರಿಯದೆ
ಗೊಂದಣಗೊಂಡು ಲಯವಾದುವಲ್ಲಾ ಎನುತ್ತಾನೆ.

ಇಲ್ಲಿ ಯೋನಿ ಮುಖವೆಂಬ ರೂಪಕವೇ ಸಾಕು ಅದು ಸಮಾಜ ಎಂದು ತಿಳಿಯುತ್ತದೆ. ಅದರೊಳಗಿನ ಮಾನವ ಏನನ್ನು ಹುಡುಕುತ್ತಿದ್ದಾನೆ ಎಂಬುದನ್ನು ತಿಳಿಸುತ್ತದೆ. ನೋಟ, ಕಾಮದಾಟ, ಆರಾಧನೆ, ಅರ್ಥ, ಅನರ್ಥಗಳ ಗೊಂದಲಗಳೇ ಇಲ್ಲಿ ತುಂಬಿವೆ. ಒಟ್ಟಾರೆ ಲಯವಾಗುವ ಸಮಾಜ ಇದು ಎಂಬುದನ್ನು ಮಾರ್ಮಿಕವಾಗಿ ತಿಳಿಸುತ್ತಾನೆ.

ಅಲ್ಲಮನಿಗೆ ಒಂದು ಕನಸಿರುವುದಂತು ನಿಜ. ಆದರೆ ಆ ಕನಸಿಗೆ ತಕ್ಕ ಸಮಾಜ ಅಸ್ಥಿತ್ವದಲ್ಲಿಲ್ಲ ಎಂಬುದೇ ಚಿಂತೆ. ಯಾಕೆಂದರೆ ಮನುಷ್ಯನೇ ಸರಿಯಿಲ್ಲ. ಅಲ್ಲಮನ ಕನಸು ನಿಜವಾಗಬೇಕಾದರೆ ಕಟ್ಟು ನಿಟ್ಟಿನ ಏಕಾಗ್ರತೆಯ ಸಾಧನೆ ಬೇಕು. ತರ್ಕಬದ್ಧ ಬೆಳವಣಿಗೆಗೆ ಅದು ತರ್ಕಾತೀತವಾದುದು ಮತ್ತು ತರ್ಕದೊಳಗಿಂದನೇ ಬೆಳೆಯಬೇಕು. ಈ ನಿಗೂಢತೆಯನ್ನು ಅರ್ಥಮಾಡಿಸುವ ಸಲುವಾಗಿಯೇ ಈ ಜಗತ್ತನ್ನು ಅರಿಯ ಬೇಕು ಎನ್ನುತ್ತಾನೆ. ವೈದಿಕ ಮತ್ತು ಆಧ್ಯಾತ್ಮಿಕದ ಏಕಾಂಗಿತನಕ್ಕೆ ವಿರುದ್ಧವಾಗಿ ಅಲ್ಲಮನ ಆಧ್ಯಾತ್ಮಿಕತೆ ಕಾಣುತ್ತದೆ.

ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಬತ್ತವಿಲ್ಲದಿರ್ದಡೆ
ಆ ಬೆವಸಾಯದ ಘೋರವೇತಕಯ್ಯ – ಎನ್ನುವ ಮಾತಿನಲ್ಲಿ
ಹೊರ ಮತ್ತು ಒಳ ಜಗಗಳ (ಭಕ್ತ & ಕೃಷಿಕ) ಪ್ರಾಮುಖ್ಯತೆ ಗೊತ್ತಾಗುತ್ತದೆ. ಭಕ್ತನಾದವನು ವ್ಯವಸಾಯದಲ್ಲಿ ಭವದ ಕಳೆ ನಾಶಮಾಡ ಬೇಕೆಂದು ಹೇಳುತ್ತಾನೆ.

ಮುಂದುವರೆದು ನೀನೇನ ಕೊಟ್ಟು ಭಕ್ತನಾದೆ ಹೇಳು ಎಂದು ಪ್ರಶ್ನಿಸುತ್ತಾನೆ. ಅಲ್ಲಮನಿಗೆ ಹೊನ್ನು, ಹೆಣ್ಣು, ಮಣ್ಣು ಇವುಗಳು ಮಾಯೆಯಾಗಿ ಕಂಡು ಇವುಗಳಿಂದ ಹೊರ ಬರಬೇಕು ಎನ್ನುತ್ತಾನೆ. ಸಮಾಜವನ್ನು ಮೀರುವುದೆಂದರೆ ಸಮಾಜದ ಮೂಲಕವೇ ಮೀರ ಬೇಕೆನ್ನುತ್ತಾನೆ.

ಹಿಡಿವ ಕೈಯ ಮೇಲೆ ಕತ್ತಲೆಯಯ್ಯ
ನೋಡುವ ಕಂಗಳ ಮೇಲೆ ಕತ್ತಲೆಯಯ್ಯ
ಕತ್ತಲೆಯೆಂಬುದು ಇತ್ತಲೆಯಯ್ಯ ಎಂದು ಕೊಳ್ಳುತ್ತಾನೆ.

ಈತ ಸಮಾಜವನ್ನು ಹದಗೆಡಿಸಿದ ವೈಧಿಕ ಆಚರಣೆಗಳನ್ನಷ್ಟೆ ವಿರೋಧಿಸಿಲ್ಲ. ಯಾವ ಧರ್ಮದ ಆಚರಣೆಯೇ ಆಗಲೀ ಅದು ಸಾಮಾಜಿಕ ಬೆಳವಣಿಗೆಗೆ ತೊಡಕುಂಟುಮಾಡಿತೆಂದರೆ ಅದನ್ನು ಅಲ್ಲಮ ವಿರೋಧಿಸುತ್ತಾನೆ. ವಸ್ತುವಿನ ಒಳಗೆ ಅಲ್ಲಮ ಹೋಗಲಾರ.

ಹಾಲ ನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ
ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ
ಅಗ್ಗವಣಿಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ
ಪುಷ್ಪದ ನೇಮವ ಹಿಡಿದಾತ ತುಂಬಿಯಾಗಿ ಹುಟ್ಟುವ
ಇವು ಷಡ್ ಸ್ಥಲಕ್ಕೆ ಹೊರಗು
ನಿಜಭಕ್ತಿಯಿಲ್ಲದವರ ಕಂಡರೆ ಮೆಚ್ಚನು ಗುಹೇಶ್ವರ

ನಿಜಭಕ್ತಿ ಎಂಬುದು ಮಾತ್ರ ಬದುಕಿನ ವಿಧಾನ, ಇಲ್ಲಿ ತೋರಿಕೆಯಿಲ್ಲ. ಅಂತವನಿಂದ ಮಾತ್ರವೇ ಕೆಡುಕಿಲ್ಲದ ಸಮಾಜ ನಿರ್ಮಾಣ ಸಾಧ್ಯ. ನಿಜಭಕ್ತನೇ ಆರೋಗ್ಯಕರ ಸಮಾಜದ ಲಕ್ಷಣ.

ನಿಜ ಭಕ್ತಿಯಿಲ್ಲದಿದ್ದರೆ
ಉದಯವಾಯಿತ್ತ ಕಂಡು ಉದರಕ್ಕೆ ಕುದಿವರಯ್ಯ
ಕತ್ತಲೆಯಾಯಿತ್ತ ಕಂಡು ಮಜ್ಜನಕ್ಕೆರೆವರಯ್ಯ – ಎನ್ನುವ ಹಾಗೆ

ಇಬಂಧಿತನದಿಂದ ತೋಯ್ದಾಡುತ್ತಾರೆ. ಈ ಇಬ್ಬಂಧಿತನ ಎಂಬುದು ದೇಹ–ಜೀವಗಳ ಸಂಗಮವಲ್ಲ, ಬದಲಾಗಿ ಜಡತ್ವದ ಪರಮಾವಧಿ. ಆದ್ದರಿಂದ ಇವನು ಅರ್ಥಹೀನ ಆಚರಣೆಯನ್ನು ವಿರೋಧಿಸಿದ.

ಹೊಟ್ಟೆಯ ಮೇಲೊಂದು ಕಟ್ಮೋಗರದ
ಮೊಟ್ಟೆಯ ಕಟ್ಟಿದಡೇನು

ಹಸಿವು ಹೋವುದೇ?
ಲಿಂಗದ ಮೇಲೆ ಲಿಂಗ ಸ್ವಾಯತವಾದಡೇನು
ಭಕ್ತನಾಗಬಲ್ಲನೆ?
ಇಟ್ಟಕಲ್ಲು ಮೆಳೆಯ ಮೇಲೆ ಸಿಲಿಕಿದಡೆ
ಆ ಕಲ್ಲು ಲಿಂಗವೇ? ಆ ಮೆಳೆ ಭಕ್ತನೇ? ಇಟ್ಟಾತ ಗುರುವೇ? –

ಎನ್ನುತ್ತಾನೆ. ಇಲ್ಲಿ ಲಿಂಗವೆಂಬುದು ಚಲನೆಯ ಸಂಕೇತ. ಅಂತರಂಗದ ದೀಪ್ತಿಯದು. ಕಲ್ಲಿನಿಂದಾದ ಲಿಂಗ ಲಿಂಗವೇ ಅಲ್ಲ, ಅದೊಂದು ಬಾಹ್ಯ ಸಂಕೇತವಷ್ಟೆ. ಈ ಸಂಕೇತದ ಮೂಲಕ ಪ್ರಜ್ಞೆಯನ್ನು ಸಮೀಪಿಸುವ ಮಾರ್ಗ ಅಷ್ಟೆ ಎನ್ನುತ್ತಾನೆ. ಅದಕ್ಕೆ ಲಿಂಗ, ಜಂಗಮ ಭಕ್ತರನ್ನು ಅಲ್ಲಿನ ಭಿನ್ನ ನೆಲೆಯಲ್ಲಿ ಅರ್ಥೈಸಿದ್ದಾನೆ.

ಜಂಗಮ ಘನವೆಂಬೆನೆ? ಬೇಡಿ ಕಿರಿದಾಗಿತ್ತು
ಲಿಂಗ ಘನವೆಂಬೆನೆ?
ಕಲ್ಲುಕುಟುಕನ ಕೈಯಲ್ಲಿ ಮಾಡಿಸಿಕೊಂಡು ಕಿರಿದಾಗಿತ್ತು
ಭಕ್ತ ಘನವೆಂಬೆನೆ?
ತನು ಮನ ಧನದಲ್ಲಿ ವಂಚಕನಾಗಿ ಕಿರಿದಾದ
ಇಂತೀ ತ್ರಿವಿಧದಲ್ಲಿ ಪರಿಣಾಮವಿಲ್ಲ, ಪರಮಾರ್ಥವಿಲ್ಲ
ಘನವ ಬಲ್ಲವರಾರೋ ಗುಹೇಶ್ವರ.

ವೀರಶೈವಾಚರಣೆಯಲ್ಲಿ ಮುಖ್ಯವಾದ ಈ ಪರಿಕಲ್ಪನೆಯಲ್ಲಿ ಲೌಖಿಕವಾದ ಲಾಭದ ನೆಲೆಯಿಂದ ಬೇರ್ಪಡಿಸಿ, ಘನದ ನೆಲೆಗೆ ತಲುಪಿಸುವ ಅನುಭವವನ್ನು ಅಲ್ಲಮ ನಮಗೆ ಹೇಳುತ್ತಾನೆ. ಇಷ್ಟೆಲ್ಲಾ ಹೇಳಿದ ಮೇಲೂ ಅಲ್ಲಮನನ್ನು ಖಚಿತವಾಗಿ ಸಮಾಜ ಜೀವಿ ಎಂದು ಹೇಳಲು ಅಷ್ಟಾಗಿ ಸಾಧ್ಯವಾಗುವುದಿಲ್ಲ. ಬಸವಣ್ಣ ನೇರವಾಗಿ ಸಮಾಜ ಜೀವಿ. ಅವನು ಸರಳ ಮನಸ್ಸಿನವನು. ಆದರೆ ಅಲ್ಲಮ ಹಾಗಲ್ಲ, ಇವನು ಅಂತಿಮ ನಿರ್ಧಾರ ಹೇಳುವುದಿಲ್ಲ. ಆಗಂತ ಬಸವಣ್ಣನು ಕಟ್ಟುವುದನ್ನು ಕೆಡವಲು ಬಂದಿಲ್ಲ. ಬದಲಾಗಿ ಅದಕ್ಕೆ ತಾತ್ವಿಕ ಬುನಾದಿ ಹಾಕಲು ಅಲ್ಲಮ ಬಂದಿದ್ದಾನೆ.

ಅಲ್ಲಮನ ವಚನಗಳಲ್ಲಿ ತಾತ್ವಿಕ ಚಿಂತನೆಗಳು :

ಅಲ್ಲಮ ತಾನೊಬ್ಬನೆ ಆತ್ಮೋದ್ಧಾರ ಮಾಡಿಕೊಳ್ಳ ಬೇಕೆಂಬ ಸ್ವಾರ್ಥಿ ಆಗಿರಲಿಲ್ಲ. ಬದಲಾಗಿ ಲೋಕೋಪಕಾರದಲ್ಲಿ ತನ್ನನ್ನು ತಾನು ತೊಡಗಿಸಿ ಕೊಂಡವನಾಗಿದ್ದು, ಅಲ್ಲಮ ಲೋಕ ಸಂಚಾರಿಯಾಗಿದ್ದುಕೊಂಡು, ದೀನದಲಿತರನ್ನು ಸಂತೈಸುವ, ಅಜ್ಞಾನಿಗಳನ್ನು ಎಚ್ಚರಿಸುವ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿದ ಸಾಧಕರಿಗೆ ಮಾರ್ಗ

ತೋರುವವನಾಗಿದ್ದನು. ತನ್ನೊಂದಿಗೆ ಇಡೀ ಮಾನವ ಕೋಟಿ ಉದ್ಧಾರ ಆಗಬೇಕೆಂಬ ಉದ್ದೇಶ ಅವನದಾಗಿತ್ತು. ಮಾತೆಂಬುದು ಜ್ಯೋತಿರ್ಲಿಂಗ ಎಂಬ ಆತನ ಮಾತಿನಂತೆಯೇ ಅಲ್ಲಮನ ವಚನಗಳು ಅಂತರಂಗವನ್ನು ಬೆಳಗಿಸುವಂತಹವುಗಳಾಗಿದ್ದವು. ನಿಷ್ಠುರವಾದ ನುಡಿಗಳಿಂದ ಅಲ್ಲಮ ವಿಗ್ರಹಾರಾಧನೆ, ದೇವಾಲಯ ನಿರ್ಮಾಣ ಇಂತಹ ತೋರಿಕೆಯ ಭಕ್ತಿ, ಆಡಂಬರದ ಪೂಜೆ ಇವುಗಳನ್ನು ಖಂಡಿಸುತ್ತಾನೆ.

ಅನ್ನವನ್ನಿಕ್ಕಿ ನನ್ನಿಯ ನುಡಿದು
ಅರವಟ್ಟಿಗೆಯನಿಕ್ಕಿ ಕೆರೆಯ ಕಟ್ಟಿಸಿದರೆ
ಮರಣದಿಂದ ಮೇಲೆ ಸ್ವರ್ಗವುಂಟಲ್ಲದೆ
ಶಿವನ ನಿಜವು ಸಾಧ್ಯವಾಗದು
ಗುಹೇಶ್ವರನನರಿಯದ ಶರಣರಿಗೆ ಆ ಫಲವು ಸಿಗದು

ಅಂದರೆ ಅಲ್ಲಮನದು ಕರ್ಮಮಾರ್ಗವಲ್ಲ, ಜ್ಞಾನ ಮಾರ್ಗ. ಈತ ಬಾಹ್ಯ ಚಟುವಟಿಕೆಗಳನ್ನೆಲ್ಲಾ ಅಲ್ಲಗಳೆಯುತ್ತಾನೆ. ಅಂತರಂಗದ ಬೀಜ ಬಿತ್ತಲು ಯೋಗ್ಯವಾದ ಭೂಮಿಯನ್ನಾಗಿ ಪರಿವರ್ತಿಸುವುದೇ ಸಾಧಕನ ನಿಜವಾದ ಕರ್ತವ್ಯ ಎನ್ನುತ್ತಾನೆ.

ತನುವ ತೋಟವ ಮಾಡಿ ಮನವ ಗುದ್ದಲಿ ಮಾಡಿ
ಅಗೆದು ಕಳೆದೆನಯ್ಯ ಭ್ರಾಂತಿಯ ಬೇರೊಡೆದು
ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯ ಬ್ರಹ್ಮ ಬೀಜವ
ಸಮತೆ ಸೈರಣೆಗಳೆಂಬ ಬೇಲಿಯನಿಕ್ಕಿ
ಆವಾಗಳೂ ಈ ತೋಟದೊಳಗೆ ಜಾಗರವಿದ್ದು
ಈ ಸಸಿಯ ಸಲಹಿದೆ ಕಾಣ ಗುಹೇಶ್ವರ

ಅಂದರೆ ಸಾಮಾನ್ಯ ಭೂಮಿಯಂತಿದ್ದ ಅವನ ಅಂತರಂಗ ಸೊಗಸಾದ ತೋಟವಾಯಿತು. ಹಣ್ಣುಗಳಿಂದ ತುಂಬಿ ಕಂಗೊಳಿಸಿತು. ತನ್ನ ಸ್ವಪ್ರಯತ್ನದಿಂದ ಮತ್ತು ಅಪಾರ ಶ್ರಮದಿಂದ ಸಿದ್ಧಿ ಪಡೆದೆನು ಎನ್ನುತ್ತಾನೆ. ಮುಂದುವರೆದು ಸಂಸಾರ ಕುರಿತಂತೆ

ತೋಟವ ಮಾಡಿದರೆಮ್ಮವರು
ಕಾಹ ಕೊಟ್ಟವರು ಜವನವರು
ನಿತ್ಯವಲ್ಲದ ಸಂಸಾರ ವೃಥಾ ಹೋಯಿತಲ್ಲ
ಗುಹೇಶ್ವರನಿಕ್ಕಿದ ಕಿಚ್ಚು ಹೊತ್ತಿಕ್ಕಲುಂಟು ಅಟ್ಟುಣ್ಣಲಿಲ್ಲ॥

ಸಂಸಾರವೆಂಬ ಹೆಣ ಬಿದ್ದರೆ ತಿನಬಂದ ನಾಯಿ ಜಗಳ ನೋಡಿರೆ?

ನಾಯ ಜಗಳವ ನೋಡಿ ಹೆಣನೆದ್ದು ನಗುತಿರೆ

ಗುಹೇಶ್ವರನೆಂಬ ಲಿಂಗದಲ್ಲಿಲ್ಲ ಕಾಣಿರೆ

ಇಲ್ಲಿ ಅಲ್ಲಮ ಅಜ್ಞಾನಿಗಳ ಸಂಸಾರವನ್ನು ಕುರಿತು ಹೇಳುತ್ತಾನೆ. ಅಂದರೆ ಮಾನವನ ಉದ್ಧಾರಕ್ಕಾಗಿ ಸ್ಥಾಪಿತವಾದ ಸಂಸಾರ ವ್ಯವಸ್ಥೆಯಲ್ಲಿ ಜ್ಞಾನವಿಲ್ಲದಿದ್ದರೆ ಪರಮಾತ್ಮನು ಅಲ್ಲಿರಲು ಸಾಧ್ಯವಿಲ್ಲ ಎನ್ನುತ್ತಾನೆ. ಪರಮಾತ್ಮನನ್ನು ಅರಿಯದ ಅವಿವೇಕಿಗಳ ಕುರಿತು ಅಲ್ಲಮ ಸ್ವಲ್ಪ ನಿಷ್ಠುರನಾಗಿಯೇ ಇದ್ದಾನೆ.

ಎನಗೊಂದು ಲಿಂಗ ನಿನಗೊಂದು ಲಿಂಗ

ಮನೆಗೊಂದು ಲಿಂಗವಾಯಿತ್ತಾ ಹೋಯಿತಲ್ಲಾ ಭಕ್ತಿ ಜಲವ ಕೂಡಿ

ಉಳಿ ಮುಟ್ಟಿದ ಲಿಂಗವ ಮನ ಮುಟ್ಟ ಬಲ್ಲದೇ ಗುಹೇಶ್ವರ ಎನ್ನುತ್ತಾನೆ

ಪರಮಾತ್ಮ ಯಾರ ಸ್ವತ್ತು ಅಲ್ಲ. ಮಾನವ ನಿರ್ಮಿತವಾದ ಯಾವ ಸ್ವತ್ತಿನಲ್ಲೂ ಪರಮಾತ್ಮನನ್ನು ಇರಿಸಲು ಸಾಧ್ಯವಿಲ್ಲ. ಅಲ್ಲಮನು ಕತ್ತಲನ್ನೇ ಸೃಷ್ಟಿ ಮಾಡಿದ್ದ ವೇದ, ಶಾಸ್ತ್ರ, ಪುರಾಣಗಳನ್ನು ಧಿಕ್ಕರಿಸುತ್ತಾನೆ.

ವೇದವೆಂಬುದು ಓದಿನ ಮಾತು ಶಾಸ್ತ್ರವೆಂಬುದು ತಗರ ಹೋರಟೆ

ಪುರಾಣವೆಂಬುದು ಪುಂಡರ ಗೋಷ್ಟಿ, ತರ್ಕವೆಂಬುದು ಸಂತೆಯ ಸುದ್ದಿ

ಭಕ್ತಿ ಎಂಬುದು ತೋರಿ ಉಂಬ ಲಾಭ

ಗುಹೇಶ್ವರನೆಂಬುದು ಮೀರಿದ ಘನವು। ಎನ್ನುತ್ತಾನೆ.

ಅಲ್ಲಮನ ಪ್ರಕಾರ ಸಾಧನೆಯಿಂದ ಸಾಧ್ಯವಾಗಬೇಕಾದ್ದು ಬರೀ ಓದಿನಿಂದ ಸಾಧ್ಯವಾಗುವುದಿಲ್ಲ. ಜನರು ಹಿಂದಿನಿಂದ ನಂಬಿದಂತೆ ಜ್ಞಾನ ಎಂಬುದು ಯಾವುದರಿಂದ ಸಾಧ್ಯ ಎಂದು ಕೊಂಡಿದ್ದರೋ ಅದನ್ನು ಒಂದೇ ಮಾತಿನಲ್ಲಿ ಕೆಳಕ್ಕೆ ತಳ್ಳುತ್ತಾನೆ. ಅಲ್ಲಮನ ಗುಹೇಶ್ವರವು ಯಾವುದೇ ಬಾಹ್ಯ ದೇವರ ಪ್ರತಿನಿದಿಯಲ್ಲ, ಅದು ಜ್ಞಾನದ ಬೆಳಕಿನ ಪ್ರತಿನಿದಿ. ಅದುವೇ ಏಕೈಕವಾದ ಘನ (ಶಾಶ್ವತವಾದುದು). ಈ ಘನವನ್ನು ಸಂಪಾಧಿಸಿಕೊಳ್ಳುವುದೇ ನಿಜವಾದ ಅನುಭಾವ ಎನ್ನುತ್ತಾನೆ. ಈ ಘನವನ್ನು ಪಡೆಯುವುದು ಹೇಗೆ ಎಂಬುದನ್ನು

ಜಗವನೆಲ್ಲ ನೋರ(ಊರ)ಮಾಡಿ

ಊರನೆಲ್ಲವ ಮನೆಯ ಮಾಡಿ

ಹೊಗದೆಸೆಯಿಲ್ಲದ ಸುಳುವು ನೋಡಾ।

ಸುಳುಹಿನ ಬೇದವನರಿಯದ ಕಾರಣ ದೇವಲೋಕ

ಮರ್ತ್ಯಲೋಕವೆಲ್ಲ ಭ್ರಮೆಗೊಂಡಿತಲ್ಲಾ। – ಎನ್ನುತ್ತಾನೆ

ಹಾಗಾಗಿ ಮನುಷ್ಯ 'ಸುಳುಹು'(ಮಾರ್ಗ)ವನ್ನು ಕಂಡುಕೊಳ್ಳಬೇಕು. ಇಲ್ಲದೇ ಹೋದರೆ ಭ್ರಮೆಗೊಳಗಾಗಿ ಜಗತ್ತು ಅನ್ನ ಮತ್ತು ಹೇಸಿಗೆ ಎರಡು ಒಂದೇ ಎಂದು ಭಾವಿಸಬೇಕಾಗುತ್ತದೆ. ಜಗತ್ತಿಗೂ ಮತ್ತು ಜ್ಞಾನ ಮಾರ್ಗಕ್ಕೂ ಸೂಕ್ಷ್ಮವಾದ ಅಡ್ಡಗೆರೆಯೋದಿದೆ. ಆ ಸೂಕ್ಷ್ಮತೆಯನ್ನು ಅರ್ಥಮಾಡಿಕೊಂಡು ಮುನ್ನೆಡೆಯಬೇಕು ಎನ್ನುತ್ತಾನೆ. ಹಾಗಾಗಿ ಮನುಷ್ಯ ತನ್ನನ್ನು ತಾನು ಮೊದಲು ಅರಿಯಬೇಕು ಎನ್ನುತ್ತಾನೆ. ಅಲ್ಲಮ ಸ್ವತಃ ತಾನು ಶುದ್ಧ ಎಂದು ಹೇಳಿಕೊಳ್ಳುತ್ತಾ, ತನ್ನ ತಾನರಿದರೆ ಅದುವೇ ವ್ಯಕ್ತಿ ಸ್ವಾತಂತ್ರ್ಯದ ಪರಮಾವಧಿ ಎನ್ನುತ್ತಾನೆ. ಗುಹೇಶ್ವರ ಲಿಂಗವೇ ತಾನು ಎಂದುಕೊಳ್ಳಬೇಕು, ಏಕೆಂದರೆ ಗುಹೇಶ್ವರ ಅಂತರ್ಯಾಮಿಯಾದಂತಹದ್ದು. ಅದು ಹೇಗಿದೆ ಎಂದರೆ–

ಶಿಲೆಯೊಳಗಣ ಪಾವಕದಂತೆ (ಬೆಂಕಿ)
ಉದಕದೊಳಗಣ ಪ್ರತಿಬಿಂಬಂದಂತೆ
ಬೀಜದೊಳಗಣ ವೃಕ್ಷದಂತೆ
ಶಬ್ಧದೊಳಗಣ ನಿಶ್ಯಬ್ಧದಂತೆ – ಇದೆ ಎಂದು ಹೇಳುತ್ತಾನೆ

ಬದುಕಿನ ಬಂಡಿ ಸಮತೋಲನದಲ್ಲಿ ಇಲ್ಲದಿದ್ದರೆ ಅದರ ಅಚ್ಚು ಮುರಿಯುತ್ತದೆ. ಹಾಗೆಯೇ ಬಾಹ್ಯಹೀನ ಮನುಷ್ಯನ ಸ್ಥಿತಿಯು ಅದೇ ಆಗಿದೆ ಎನ್ನುತ್ತಾನೆ.

ಕರೆಯದೇ ಬಂದುದ
ಹೇಳದೇ ಹೋದುದ ಆರೂ ಅರಿಯರಲ್ಲ
ಅಂದಂದಿಗೆ ಬಂದ ಪ್ರಾಣಿಗಳ ಆರೂ ಅರಿಯರಲ್ಲ
ಗುಹೇಶ್ವರ ಲಿಂಗ ಉಣ್ಣದೇ ಹೋದುದ ಆರೂ ಅರಿಯಲಿಲ್ಲ.

ಹೀಗೆ ಅಲ್ಲಮ ಇಡೀ ಮನುಷ್ಯ ಬದುಕಿನ ಬಗೆಯನ್ನು ಸಮಾಜದ ಸ್ಥಿತಿಗತಿಗಳನ್ನು ತನ್ನ ನಿಗೂಢ ಶಬ್ಧ ಭಂಡಾರದ ಮೂಲಕ ಎಚ್ಚರಿಸು, ತಿದ್ದುವ, ತಿಳಿಹೇಳುವ ಕೆಲಸವನ್ನು ಸಾಮಾಜಿಕವಾಗಿ ಮತ್ತು ತಾತ್ವಿಕವಾಗಿ ಕಟ್ಟಿಕೊಟ್ಟಿದ್ದಾನೆ.

ಆಕರ ಗ್ರಂಥ :

1. ಚಂದ್ರಶೇಖರ ತಾಳ್ಯ, ಪ್ರಭು ಅಲ್ಲಮ, 2004, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು

ಪರಾಮರ್ಶನ ಗ್ರಂಥಗಳು :

1. ಅರವಿಂದ ಮಾಲಗತ್ತಿ (ಪ್ರಧಾನ ಸಂಪಾದಕರು), ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–4 ಪ್ರಾಚೀನ ಸಾಹಿತ್ಯ, 2014, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
2. ಗಂಗಾ ನಾಯಕ್ ಕೆ ಎನ್ (ಪ್ರಧಾನ ಸಂಪಾಧಕರು), ಕನ್ನಡ ಸಾಹಿತ್ಯ ಚರಿತ್ರೆ, ಸಪುಟ–4, 2012, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
3. ಗುರುರಾಜ ಮರಿಗುದ್ದಿ, ನಡುಗನ್ನಡ ಸಾಹಿತ್ಯ ಪರಿವೇಷ, 2009, ಪ್ರತಿಧ್ವನಿ ಪ್ರಕಾಶನ, ಬೆಂಗಳೂರು

***

ಮಂಕುತಿಮ್ಮನ ಕಗ್ಗದಲ್ಲಿ ಜೀವನ ಮೌಲ್ಯಗಳು

1

ನಾಗೇಂದ್ರ ಹೆಚ್. ಜಿ.[1]

ಸಹಾಯಕ ಪ್ರಾಧ್ಯಾಪಕರು.
ಕನ್ನಡ ವಿಭಾಗ,
ದಯಾನಂದ ಸಾಗರ್ ಯೂನಿವರ್ಸಿಟಿ.
ಬೆಂಗಳೂರು.

1

ಡಾ. ಸುಮ ಆರ್. [2]

ಪ್ರಾಧ್ಯಾಪಕರು.
ಕನ್ನಡ ವಿಭಾಗ
ಬಿ.ಜಿ.ಎಸ್. –ಬಿ– ಸ್ಕೂಲ್. ಬೆಂಗಳೂರು.

ಮಂಕುತಿಮ್ಮನ ಕಗ್ಗ ಎಂಬುದು ಡಿ.ವಿ.ಜಿ ಅವರು ರಚಿಸಿರುವ ಅತ್ಯಂತ ಅದ್ಭುತ ಪದ್ಯ ಪುಸ್ತಕ. ಚೌಪದಿಯ ಲಕ್ಷಣದಲ್ಲಿ ಕಾವ್ಯ ರಚನೆ ಹೊಂದಿರುವ ಈ ಪುಸ್ತಕವನ್ನು ಕನ್ನಡದ ಭಗವದ್ಗೀತೆ ಎಂದು ಸಹ ಶಿಷ್ಟ ಸಾಹಿತ್ಯದಲ್ಲಿ ಜನಪ್ರಿಯವಾಗಿದೆ. ಈ ಕೃತಿಯು ಅನೇಕ ಮರುಮುದ್ರಣ ಕಂಡಿರುವುದಲ್ಲದೆ ಇಂದಿಗೂ ಸಹ ಮರುಮುದ್ರಣ ಗೊಳ್ಳುತ್ತಲೇ ಇದೆ. ಅಷ್ಟೇ ಅಲ್ಲದೆ ಈ ಕೃತಿಯು ಇಂಗ್ಲಿಷ್ ಮತ್ತು ಹಿಂದಿ ಭಾಷೆಗೂ ಅನುವಾದಗೊಂಡಿರುವುದು ವಿಶೇಷವೆಂದೇ ಹೇಳಬಹುದು. ಜೊತೆಗೆ ಅನೇಕ ವಿದ್ವಾಂಸರುಗಳು ವೇದೋಪನಿಷತ್ತುಗಳಂತೆ ಭಾಷ್ಯ, ವ್ಯಾಖ್ಯಾನಗಳನ್ನು ಸಹ ಈ ಮುಕ್ತಕಗಳಿಗೆ ಕೊಟ್ಟಿದ್ದಾರೆ.

ಹಲವು ಸಂಗೀತಗಾರರು ಸುಗಮ ಸಂಗೀತದ ಮತ್ತು ಗಮಕಗಳ ಮುಖಾಂತರ ಹಾಡಿ ಈ ಮುಕ್ತಕಗಳಿಗೆ ಜನಪ್ರಿಯತೆಯನ್ನು ನೀಡಿದ್ದಾರೆ.

ಮಂಕುತಿಮ್ಮನ ಕಗ್ಗ ಕೇವಲ ಕಾವ್ಯದ ಭಾಗವಾಗಿರದೆ, ಅದರಲ್ಲಿ ಶಾಸ್ತ್ರ ಅಧ್ಯಯನ, ಕಾವ್ಯ ಮೀಮಾಂಸೆ, ಅಲಂಕಾರ, ಜೀವನ ಅನುಭವ, ಸೌಂದರ್ಯ ದೃಷ್ಟಿ, ತತ್ವ ಚಿಂತನೆಗಳಿಂದಲೂ ಕಗ್ಗ ಜನಪ್ರಿಯತೆಯನ್ನು ಗಳಿಸಿದೆ. ಜನರ ನಾಲಿಗೆಯ ಮೇಲೆ ಇವು ಜನಪದ ಸಾಹಿತ್ಯದಂತೆ ನಲಿದಾಡುತ್ತಿವೆ, ಎಂದರೆ ಅದು ಅತಿಶಯೋಕ್ತಿಯಲ್ಲ. ಕಗ್ಗಕ್ಕೆ ತನ್ನದೇ ಆದ ಶಿಷ್ಟ ಓದುಗ ಬಳಗವು ಒಂದಿದೆ. ಕಗ್ಗದ ಈ ಪರಿಯ ಖ್ಯಾತಿಗೆ ನಿರ್ದಿಷ್ಟ ಕಾರಣಗಳನ್ನು ಹೇಳುವುದು ಕಷ್ಟಕರ. ಆದರೆ 'ಕಗ್ಗ' ಎಂಬುದು ಜಾತಿ, ಮತ, ಪಂಥ, ಧರ್ಮಗಳನ್ನು ಮೀರಿದ, ಮಾರ್ಗದರ್ಶನವಿಲ್ಲದವರ, ಆದರ್ಶ ಕಳೆದುಕೊಂಡವರ, ಆತ್ಮೀಯತೆಯಿಂದ ದೂರಾದವರ, ನಿರ್ಭಾಗ್ಯವಂತರ ಬಾಳಿಗೆ ಬೆಳಕಾಗಿ ಮಾರ್ಗದರ್ಶನ ನೀಡುವ ಆಪ್ತ ಕೃತಿ. ಇದು ಪಂಡಿತ ಪಾಮರರಿಬ್ಬರನ್ನು ಒಲಿಸಿಕೊಂಡಿರುವ ಆದರ್ಶ ವಿಚಾರ ಚಿಂತನೆಗಳೆನ್ನಬಹುದು.

ಉತ್ತಮ ಸಮಾಜ ನಿರ್ಮಾಣವಾಗಬೇಕಾದರೆ ಉತ್ತಮ ವ್ಯಕ್ತಿತ್ವ ಹೊಂದಿರುವ ವ್ಯಕ್ತಿಗಳು ಮುಖ್ಯ. ಅವರುಗಳಲ್ಲಿ ಉತ್ತಮ ಮೌಲ್ಯಗಳು ಬೆಳೆಯಬೇಕು ಹೀಗಿದ್ದಾಗ ಮಾತ್ರ ಸಮಾಜದಲ್ಲಿ ಸುಭದ್ರತೆ ಸಾಧ್ಯವಾಗುತ್ತದೆ. ಮೌಲ್ಯಗಳು ಕಣ್ಣಿಗೆ ಕಾಣದಿದ್ದರೂ ಜೀವನದ ಅಸ್ತಿತ್ವಕ್ಕೆ ಈ ಅಂಶಗಳೇ ಮಹತ್ವದ ಪಾತ್ರ ವಹಿಸುತ್ತದೆ. ಒಬ್ಬ ವ್ಯಕ್ತಿಯ ಬಾಹ್ಯ ಸೌಂದರ್ಯ ಕ್ಕಿಂತ ಆಂತರಿಕ ಸೌಂದರ್ಯ ಅವನ ವ್ಯಕ್ತಿತ್ವವನ್ನು ನಿರೂಪಿಸುತ್ತದೆ. ವ್ಯಕ್ತಿಯ ನಡೆ–ನುಡಿಯಲ್ಲಿ ವಿನಯವಿದ್ದಾಗ ಆ ವಿನಯತೆಯು ಜೀವನದಲ್ಲಿ ವ್ಯಕ್ತಿಯನ್ನು ಉತ್ತುಂಗಕ್ಕೆ ಕೊಂಡೊಯುತ್ತದೆ. ಜೀವನ ಮೌಲ್ಯ ಎಂದಾಕ್ಷಣ ಕೆಲವರು ಅದನ್ನು ವೈಯಕ್ತಿಕವೆಂದು ಭಾವಿಸುತ್ತಾರೆ. ಆದರೆ ಅದು ಎಂದೂ ವೈಯಕ್ತಿಕವಲ್ಲ. ಏಕೆಂದರೆ ಜೀವನ ಮೌಲ್ಯಗಳ ಮೂಲ ಉದ್ದೇಶ ಸಮಾಜದ ಹಿತವಾಗಿರುತ್ತದೆ. ಒಂದು ಬಾರಿ ಸಮಾಜ ಜೀವನ ಮೌಲ್ಯಗಳನ್ನು ತಿರಸ್ಕರಿಸಿದರೆ ಆ ಸಮಾಜ ಬದುಕುಳಿಯಲಾರದು. ಸ್ವಲ್ಪ ಮಟ್ಟಿಗಾದರೂ ಸ್ವಾರ್ಥ ಚಿಂತನೆಯನ್ನು ಬದಿಗೊತ್ತಿ ಪರರ ಹಿತದ ಕಡೆಗೂ ಗಮನಿಸಬೇಕು. ಈ ಜೀವನದಲ್ಲಿ ನಿಸ್ವಾರ್ಥ ಪ್ರೀತಿ, ಶಾಂತಿ, ನೈತಿಕತೆಯನ್ನು ಬೆಳೆಸಲು ಎಲ್ಲರೂ ಮುಂದಾಗಬೇಕು.

ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು
ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ
ಜಸವು ಜನಜೀವನಕೆ – ಮಂಕುತಿಮ್ಮ

ನಮ್ಮ ಸಮಾಜದ ಸಂಸ್ಕೃತಿಯ ಬೆಳವಣಿಗೆಯ ಹಾದಿಯೂ ನಮ್ಮ ಪುರಾತನರು ಹಾಕಿಕೊಟ್ಟ ಹಾದಿಯಲ್ಲಿರಬೇಕು. ಇಂದಿನ ನವೀನತೆಗೆ ಅಂದಿನ ಪುರಾತನತೆ ಮೇಳೈಸಿದಾಗ ಮೂಲ ತತ್ವಗಳನ್ನು ಉಳಿಸಿಕೊಂಡು ಅದರ ಆಧಾರದ ಮೇಲೆ ಹೊಸ ಯುಕ್ತಿಗಳಿಂದ ಬೆಳೆಸಿಕೊಂಡ ನವ–ನವೀನತೆಯು ಸುಂದರವಾಗಿರುತ್ತದೆ. ಹಾಗಾಗದೆ ಹಳೆಯ (ಮೂಲ) ಬೇರಿನೊಡನೆ ಸಂಪರ್ಕ ಕಡಿದುಕೊಂಡರೆ ಮರವೇ ಸೊರಗುತ್ತದೆ. ಸೊರಗಿದ ಮರದಿಂದ ಚಿಗುರೂ ಇಲ್ಲ, ಹೂವೂ ಇಲ್ಲ. ನಮ್ಮ ಗುಣ ರೂಪಗಳೂ ಸಹ ವಂಶವಾಹಿನಿಗಳ ಮೂಲಕ ನಮ್ಮ ಹಳೆಯ ತಲೆಮಾರಿನ ಜನರಿಂದ ಹರಿದು ಬರುತ್ತದೆ. ಯಾರಿಂದ ಯಾವ ಗುಣ, ಯಾರಿಂದ ಯಾವ ರೂಪ ಯಾರಿಗೆ ಬರುತ್ತದೆ ಎಂದು ಹೇಳುವುದು ಕಷ್ಟ. ಅಂದರೆ ನಮ್ಮ ಇಂದಿನ ಗುಣ ರೂಪಗಳಿಗೆ 'ಮರದ ಹಳೆಯ ಬೇರಿನಂತೆ' ಅವುಗಳೇ ಮೂಲ. ಇದು ಒಂದು ಅನಿವಾರ್ಯತೆಯಿಂದ ನಮಗೆ ನಮ್ಮ ಮೂಲದೊಡನೆ ಸಂಪರ್ಕ ಹೊಂದಿದ ಹಾಗೆಯೇ ಅನಾದಿ ಕಾಲದಿಂದ ಬಂದ ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರಗಳು ಪರಮೋಚ್ಚ ಜ್ಞಾನದ ಆಧಾರದ ಮೇಲೆ ವಿಕಾಸವಾದ ಒಂದು ಸುಸಂಸ್ಕೃತ ಹಂತದಿಂದ ಬಂದದ್ದು. ನಮ್ಮ ಪೂರ್ವಜರ ಮೌಲ್ಯಾಧಾರಿತ ಸಮಾಜದಲ್ಲಿ ಇದ್ದ ಮೌಲ್ಯಗಳು ನೀತಿ–ನಿಯಮಗಳು ಉನ್ನತವಾಗಿದ್ದವು. ಅದೇ ನಮ್ಮ ಸಾಮಾಜಿಕ ಅಸ್ತಿತ್ವಕ್ಕೆ ಆಧಾರ. ಅದನ್ನು ತೊರೆದರೆ ತಲೆತಲಾಂತರದಿಂದ ಬಂದ ಕೊಂಡಿ ಕಳಚಿ ನಾವು ಅಧೋಗತಿಗೆ ಬೀಳುವ ಸಾಧ್ಯತೆ ಖಂಡಿತ ಇದೆ.

ಆದರೆ ಇಂದಿನ ಪರಿಸ್ಥಿತಿ ಬಹಳ ಭಿನ್ನವಾದ ಚಿಂತೆಗೆ ಕಾರಣವಾಗಿದೆ. ಪಾಶ್ಚಾತ್ಯ ನಡವಳಿಕೆಗಳ ಅಂಧಾನುಕರಣೆ ಮತ್ತು ನಮ್ಮ ಮೌಲ್ಯಾಧಾರಿತ ಸಂಸ್ಕೃತಿಯನ್ನು ಹೀಗೆಳೆಯುವುದು, ಈಗಿನ ನವೀನರ ಒಂದು ಹವ್ಯಾಸವಾಗಿದೆ. ವಿಜ್ಞಾನದ ಹತ್ತು ಹಲವಾರು ಸಂಶೋಧನೆಗಳು ನಮ್ಮನ್ನು ನಮ್ಮ ಬೇರಿಂದ ದೂರ ಮಾಡುವಂತಿದೆ. ನಮ್ಮ ಸಮಾಜದ ಆಧಾರವಾದ ಸಂಸ್ಕೃತಿಯನ್ನು ತೊರೆದು ಯಾವ ಮೌಲ್ಯಗಳೂ ಇಲ್ಲದ ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗಿರುವುದು ದುರಂತವೇ ಸರಿ. ಆಧುನಿಕತೆಯ ಎಲ್ಲ ಸೌಲಭ್ಯಗಳನ್ನೂ ಸಂಪೂರ್ಣವಾಗಿ ಉಪಯೋಗಿಸಿಕೊಂಡು ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರಗಳ ಪುನರ್ವಿಕಾಸಕ್ಕೆ ಸಮರೋಪಾದಿಯಲ್ಲಿ ಪ್ರಯತ್ನ ನಡೆಯಬೇಕು. ಹಾಗಾದಾಗ ಮಾನ್ಯ ಗುಂಡಪ್ಪನವರ ಈ ಮುಕ್ತಕದ ಆಶಯ ಸಾಕಾರವಾದೀತು.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ
ಎಲ್ಲರೊಳಗೊಂದಾಗು – ಮಂಕುತಿಮ್ಮ

ಜಗತ್ತಿನಲ್ಲಿ ಪ್ರಯೋಜಕರಾಗಿ ಬದುಕಬೇಕು ಎನ್ನುವುದು ನಮ್ಮ ಸಂಸ್ಕೃತಿಯ ಮತ್ತು ಸಂಸ್ಕಾರಗಳ ಆಶಯ. ಆದರೆ ಹೇಗೆ? ಎನ್ನುವುದೇ ಪ್ರಶ್ನೆ. ಬಹಳಷ್ಟು ಬಾರಿ ನಾವು ನಮಗೇ ಪ್ರಯೋಜನಕಾರಿಯಾಗಿ ವರ್ತಿಸುವುದಿಲ್ಲ, ಹಾಗಿರುವಾಗ ನಾವು ಜಗತ್ತಿಗೆ ಉಪಯೋಗಿಗಳಾಗಿ ಬದುಕುವುದು ಹೇಗೆ? ನಮ್ಮ ಅವಶ್ಯಕತೆಗಳನ್ನು ಕಡಿಮೆ ಮಾಡಿಕೊಂಡರೆ, ನಮ್ಮ ಕ್ಷಮತೆಯ ಸ್ವಲ್ಪ ಭಾಗವನ್ನು ಪರಹಿತಕ್ಕಾಗಿ ಬಳಸಬಹುದು. ಬೆಟ್ಟದಡಿಯ ಹುಲ್ಲು ತನ್ನಷ್ಟಕ್ಕೆ ತಾನು ಬೆಳೆದರೂ ಅದು ದನಕರುಗಳಿಗೆ ಮೇವಾಗುತ್ತದೆಯಲ್ಲಾ, ಆ ರೀತಿ ನಾವೂ ಸಹ ಬದುಕಬೇಕು ಎನ್ನುತ್ತಾರೆ ಡಿವಿಜಿ. 'ಮನೆಗೆ ಮಾರಿ ಪರರಿಗುಪಕಾರಿ' ಎನ್ನುವ ಗಾದೆ ಮಾತಿದೆ. ಹಾಗಲ್ಲದೆ ತನ್ನ ಮನೆಯವರೆಲ್ಲರಿಗೂ ಹಿತವ ನೀಡುತ್ತಾ, ತಾನಿರುವ ಮನೆ, ಸಮಾಜ, ದೇಶ ಮತ್ತು ಜಗತ್ತಿಗೆ, ಮಲ್ಲಿಗೆಯ ಸುಗಂಧದಂತೆ ಇದ್ದರೆ, ಎಲ್ಲರೂ ನಮ್ಮನ್ನು ಇಷ್ಟಪಡುವಂತೆ ಬದುಕಿದರೆ ಅದು ಸುಂದರ ಮತ್ತು ಸಾರ್ಥಕ ಬದುಕಾಗುತ್ತದೆ. ಇನ್ನು ಕಷ್ಟಗಳು ಬಾರದ ಜೀವಿ ಈ ಜಗತ್ತಿನಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಆದರೆ ಆ ಕಷ್ಟಗಳ ಭಾರದಿಂದ ಕುಗ್ಗುವವರೇ ಹೆಚ್ಚು. ಹಾಗೆ ಕುಗ್ಗಿದ ಮನಸ್ಸು ನಿಷ್ಕ್ರಿಯವಾಗಿ ಜೀವನ ನೀರಸವಾಗುತ್ತದೆ. ಆಗ ನಿರಾಶೆಗೊಳ್ಳದೆ ಮನಸ್ಸನ್ನು ಕಲ್ಲಿನಂತೆ ಗಟ್ಟಿಯಾಗಿಸಿ, ಮಾನಸಿಕ ಸಂತುಲನೆಯನ್ನು ಕಳೆದುಕೊಳ್ಳದೆ ಧೈರ್ಯವಾಗಿ ನಿಂತರೆ, ಎಂತಹ ಕಷ್ಟಗಳನ್ನೂ ಎದುರಿಸುವ, ಮತ್ತು ಗೆದ್ದು ಹೊರಬರುವ ಸಾಧ್ಯತೆಗಳು ಅಧಿಕ. ಅದಕ್ಕೊಂದು ಮಾರ್ಗವಿದೆ. ನಮ್ಮ ಕಷ್ಟವನ್ನು ನಮಗಿಂತ ತೀರ ಹೀನ ಗತಿಯಲ್ಲಿರುವ, ದೀನರ ಮತ್ತು ದೈನ್ಯರ ಕಷ್ಟಗಳಿಗೆ ಹೋಲಿಸಿಕೊಂಡಾಗ, ನಮ್ಮದು ಗೌಣವಾಗುತ್ತದೆ. ಅಂತಹವರಿಗೆ ಆಸರೆಯಾಗಿ, ಆಶ್ರಯವಾಗಿ ನಿಂತಾಗ ಅವರಿಗೆ ನಾವು 'ಇರುವೆಗಳಿಗೆ ಬೆಲ್ಲದಂತೆ' ಅವರಿಗೆ ಸನ್ನಿಹಿತರಾಗಬಹುದು ಮತ್ತು ಸವಿಯನ್ನು ಹಂಚಬಹುದು.

ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು
ಗುರುತಿಸೊಳಿತಿರುವುದನು ಕೇಡುಗಳ ನಡುವೆ
ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು
ಹರುಷಕ್ಕಿದೆ ದಾರಿಯೆಲೊ – ಮಂಕುತಿಮ್ಮ

ಜಗತ್ತಿನ ಪ್ರತೀ ಪ್ರಾಣಿಯೂ ಸಂತೋಷ ಅಥವಾ ಆನಂದದ ಹಿಂದೆಯೇ ಓಡುತ್ತದೆ. ಮನುಷ್ಯನೂ ಸಹ ಅಂತಹ ಓಟದಲ್ಲಿ ಅನಾದಿಕಾಲದಿಂದಲೂ ನಿರತನಾಗಿದ್ದಾನೆ. ಕಾಲಕಾಲಕ್ಕೆ ಇವನಿಗೆ ಸಂತೋಷವನ್ನು ಕೊಡುವ ವಸ್ತು ಮತ್ತು ವಿಷಯಗಳು ಬದಲಾಗಿವೆಯೇ ಹೊರತು ಇವನ ಓಟ ಮಾತ್ರ ನಿಂತೇ ಇಲ್ಲ. ಎಲ್ಲಿಯ ತನಕ ಮನುಷ್ಯ 'ನನಗೆ ಇಷ್ಟು ಸಾಕು' ಎಂದು ಒಂದು ತೃಪ್ತ ಭಾವದಿಂದ ಒಂದೆಡೆ ನಿಲ್ಲುತ್ತಾನೋ ಅಲ್ಲಿಯ ತನಕ ಇವನ ಓಟ ಸಾಗುತ್ತಲೇ ಇರುತ್ತದೆ ಮತ್ತು ಇವನು ಬಯಸುವ ಸುಖ ಇವನಿಗೆ ಸಿಗುವುದೇ ಇಲ್ಲ. ಏಕೆಂದರೆ ಇವನ ಬಯಕೆಗಳ, ಆಸೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. 'ಇಷ್ಟಾದರೆ ಮತ್ತಷ್ಟರಾಸೆ, ಅಷ್ಟಾದರೆ ಇನ್ನಷ್ಟರಾಸೆ' ಎನ್ನುವಂತೆ.

ಆದರೆ ಇಲ್ಲಿ ಒಂದು ಸಮಸ್ಯೆ ಇದೆ. ಮೊದಲನೆಯದಾಗಿ, ನಮಗೆ ನಿಜವಾದ ಸಂತೋಷವೇನೆಂದು ಗೊತ್ತಿಲ್ಲ. ಎರಡನೆಯದಾಗಿ ನಮಗೆ ಯಾವುದು ಸಂತೋಷ ನೀಡುವ ವಸ್ತು, ವ್ಯಕ್ತಿ ಅಥವಾ ವಿಷಯ ಎಂದೂ ಗೊತ್ತಿಲ್ಲ. ತೃಪ್ತಿ ಎಂದರೆ ಏನು ಮತ್ತು ಹೇಗಿರುತ್ತದೆ ಎನ್ನುವುದು ನಮಗೆ ಅರಿವಿಲ್ಲ. ಹೀಗಿರುವಾಗ ಸಂತೋಷ ಪಡುವುದೆಂತು. ಹಾಗಾಗಿ ಕೈಗೆ ಸಿಗದೇ ಇರುವುದರ ಲೆಕ್ಕಾಚಾರದಲ್ಲಿ ಕೈಲಿರುವುದನ್ನು ಮರೆಯದೆ ಇರು. ನಮಗೆ ಕಾಣುವ ಬಹಳಷ್ಟು ಕೇಡುಗಳ ಮಧ್ಯೆ ಒಳ್ಳೆಯದನ್ನು ಗುರುತಿಸು. ಕೈಗೆ ಸಿಗುವುದಿಲ್ಲ ಎಟುಕುವುದಿಲ್ಲ ಎನ್ನುವುದನ್ನು ಬಿಟ್ಟು ಕೈಯಲ್ಲೇ ಇರುವ ಭಾಗ್ಯವನ್ನು ತೃಪ್ತಿಯಿಂದ ಅನುಭವಿಸು. ಆನಂದಕ್ಕೆ, ಸಂತೋಷಕ್ಕೆ ಇದೇ ದಾರಿ ಎಂದು, ನಿಜವಾದ ಹರುಷಕ್ಕೆ ದಾರಿಯನ್ನು ತೋರಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು
ದೊರೆತುದು ಹಸಾದವೆಂದುಣ್ಣು ಗೊಣಗಿಡದೆ
ಧರಿಸು ಲೋಕದ ಭಾರವ ಪರಮಾರ್ಥವನು ಬಿಡದೆ
ಹೊರಡು ಕರೆ ಬರಲ್ ಅಳದೆ – ಮಂಕುತಿಮ್ಮ

ಪ್ರತಿಯೊಬ್ಬರೂ ಈ ಬದುಕಿನಲ್ಲಿ, ನಮಗರ್ಥವಾಗದ ವಿಧಿಯ ವಿನ್ಯಾಸದ ಪ್ರಕಾರ ನಮಗೆ ದೊರೆತ ಕೆಲಸವನ್ನು ಮಾಡುತ್ತಲೇ ಇರಬೇಕು. ಇದು ಸಣ್ಣದು ಇದು ದೊಡ್ಡದು ಎಂಬ ಭಾವವನ್ನು ಬಿಟ್ಟು ನಮಗೆ ದೊರೆತ ಕೆಲಸವನ್ನು ಮಾಡಲೇ ಬೇಕು, ಅನ್ಯತಾ ದಾರಿ ಇಲ್ಲ. ಹಾಗೆ ಕೆಲಸ ಮಾಡುವುದರಿಂದ ನಮಗೆ ಲಭಿಸುವ ಫಲವನ್ನು "ಇದು ಹೆಚ್ಚು– ಇದು ಕಡಿಮೆ" ಎನ್ನುವ ಭಾವದಿಂದ ಅಲ್ಲದೆ ಇದು

ನಮಗೆ ಸಿಕ್ಕ ಆ ಪರಮಾತ್ಮನ ಪ್ರಸಾದವೆಂದು ಬಗೆದು ಸ್ವೀಕರಿಸಬೇಕು. ಅಷ್ಟೇ ಅಲ್ಲ ಆ ಜಗತ್ತಿನಲ್ಲಿ ನಮ್ಮ ಪಾತ್ರ ಮುಗಿದು ಹೊರಡುವ ಸಮಯ ಬಂದಾಗ, ಗೋಳಾಡದೆ ಹೊರಡಬೇಕು.

ಆದರೆ ಹೀಗೆ ಇರುವುದು ಎಲ್ಲರಿಗೂ ಸಾಧ್ಯವೇ? ಎಂದರೆ ಸಾಧ್ಯ. ನಾವು ಈ ಬದುಕಿಗೆ ಬಂದಿದ್ದೇವೆ, ಆ ವಿಧಿರಾಯ, ನಮಗೆ ನಾವು ಇಲ್ಲಿರುವ ತನಕ ನಮಗೊಂದು ಕೆಲಸವನ್ನಿತ್ತಿದ್ದಾನೆ. ಅದನ್ನು ನಿಷ್ಠೆಯಿಂದ ಮತ್ತು ಸಂತೋಷದಿಂದ ನಿರ್ವಹಿಸುವುದೇ ನಮ್ಮ ಕರ್ತವ್ಯ, ಎಂದು ಅರಿವು ಮೂಡಿ, ನಾವು ಈ ಬದುಕಿಗೆ ಅಂಟದೆ ಬದುಕಿದರೆ, ಈ ಬಾಳು ಆ ಪರಮಾತ್ಮನ ಕೊಡುಗೆ, ಇಲ್ಲಿ ನಾವು ಮಾಡುವುದೆಲ್ಲವೂ ಆ ವಿಧಿಯ ನಿಯಮದಂತೆ, ನಮಗೆ ಸಿಗುವುದೆಲ್ಲವೂ ಆ ಪರಮಾತ್ಮನ ಪ್ರಸಾದ, ಈ ಪ್ರಪಂಚ ನಮ್ಮದಲ್ಲ, ಇದನ್ನು ನಾವು ಎಂದಾದರೂ ಒಂದು ದಿನ ಬಿಟ್ಟು ಹೋಗಲೇಬೇಕು, ಎಂದಾದ ಮೇಲೆ ಬಿಡುವಾಗ ನಾವು ದುಃಖಿಸಬಾರದು ಎಂದು ಅರಿತುಕೊಂಡು ಬಾಳಿದರೆ, ಬಾಳುವಾಗ ಮತ್ತು ಈ ಬಾಳನ್ನು ತೊರೆಯುವಾಗಲೂ ನೆಮ್ಮದಿಯಾಗಿ ಇರಬಹುದು. ಇದು ಎಲ್ಲರಿಗೂ ಸಾಧ್ಯ. ಪ್ರಯತ್ನ ಪಡಬೇಕು ಅಷ್ಟೇ. ವಿರಕ್ತ ಭಾವದಿಂದ ಅಂಟಿಕೊಂಡಿರಬೇಕು. ಇದ್ದೂ ಇಲ್ಲದಂತಿರಬೇಕು. ಹಾಗಿದ್ದರೆ ಸುಖ. ಹಾಗಿದ್ದರೆ ನೆಮ್ಮದಿ

ಶರಣುವೊಗು ಜೀವನರಹಸ್ಯದಲಿ ಸತ್ವದಲಿ
ಶರಣು ಜೀವನವ ಸುಮವೆನಿಪ ಯತ್ನದಲಿ
ಶರಣಂತರಾತ್ಮಗಂಭೀರ ಪ್ರಶಾಂತಿಯಲಿ
ಶರಣು ವಿಶ್ವಾತ್ಮದಲಿ – ಮಂಕುತಿಮ್ಮ

'ನಾನು' ಎಂಬುದನ್ನು ಬಿಟ್ಟು ನಾವು ಆ ರಹಸ್ಯವಾದ ಬ್ರಹ್ಮಾಂಡದ ಮೇಲೆ ಪ್ರಭಾವ ಬೀರುತ್ತಿರುವ ಆ ಪರಮ ಸತ್ವಕ್ಕೆ ಶರಣಾಗಬೇಕು. ನಾವು ಜಗತ್ತಿನ ಎಲ್ಲಾ ಅನುಭವಗಳನ್ನೂ ಪಡೆದು ನಂತರ ಅವುಗಳನ್ನು ತೊರೆದು ಅಂತರಂಗದಲ್ಲಿ ಸಂಪೂರ್ಣವಾಗಿ ಪರತತ್ವಕ್ಕೆ ಶರಣಾಗಬೇಕು.

ಜೀವನದ ಸತ್ವದ ರಹಸ್ಯಕ್ಕೆ ನೀನು ಶರಣಾಗು. ಈ ಜೀವನವನ್ನು ಹೂವಂತೆ ಸುಂದರವಾಗಿಸುವ ಪ್ರಯತ್ನಕ್ಕೆ ಶರಣಾಗು. ಅಂತರಂಗದ ಪ್ರಶಾಂತತೆಯಲ್ಲಿ ಗಂಭೀರವಾಗಿ ಪರತತ್ವಕ್ಕೆ ಶರಣಾಗು. ಜಗತ್ತಿನಲ್ಲಿರುವ ವಿಶ್ವಾತ್ಮಭಾವಕ್ಕೆ ಶರಣಾಗು ಎಂದು ನಾವು ನಮ್ಮ ನಮ್ಮ ಜೀವನಗಳಲ್ಲಿ ಅಂತಿಮವಾಗಿ ಸಾಧಿಸಬೇಕಾದ ಸ್ಥಿತಿಯನ್ನು ಸೂಚಿಸಿದ್ದಾರೆ. ಜೀವನವ 'ಸುಮವೆನಿಪ ಯತ್ನದಲಿ' ಎಂದರೆ ಬದುಕಿನ ಅನುಭವಗಳನ್ನು

ಹಗುರವಾಗಿ ತೆಗೆದುಕೊಂಡು ಹೇಗೆ ನಾವು ಹೂವಿನ ಸುಗಂಧವನ್ನು ಮಾತ್ರ ಹೀರುತ್ತೇವೋ ಹಾಗೆಯೇ ಜೀವನದ ಅನುಭವದ ಸಾರವನ್ನು ಮಾತ್ರ ತೆಗೆದುಕೊಂಡು, ಬದುಕನ್ನು ಜಗತ್ತಿಗೆ ಸುಗಂಧ, ಸುಫಲ ಮತ್ತು ಸುರುಚಿಯನ್ನು ನೀಡುವ ಹೂವಿನಂತಾಗಿಸುವ ನಮ್ಮ ಪ್ರಯುತ್ನದಲ್ಲಿ ನಾವು ಶರಣಾಗತರಾದಂತೆ ತೊಡಗಿಕೊಳ್ಳಬೇಕು ಎನ್ನುವ ಆಶಯ ಹೊತ್ತಿರಬೇಕು. ಇಂತಹ ಭಾವಗಳನ್ನು ಮನದಲ್ಲಿ ತುಂಬಿಕೊಂಡಾಗ, ಖಂಡಿತವಾಗಿಯೂ ಅಲ್ಲೊಂದು ಮೌನ ಮತ್ತು ಪ್ರಶಾಂತತೆ ತುಂಬಿಕೊಳ್ಳುತ್ತದೆ ಮತ್ತು ಪರತತ್ವವನ್ನೇ ಅನುಸಂಧಾನ ಮಾಡುವಂತಹ ಭೂಮಿಕೆ ನಮ್ಮ ಮನಸ್ಸುಗಳಲ್ಲಿ ಸಿದ್ಧವಾಗುತ್ತದೆ. ಆಗ ಜಗತ್ತಿನ ಎಲ್ಲ ಬೇಧಗಳೂ ಅಳಿಸಿಹೋಗಿ ವಿಶ್ವಾತ್ಮಭಾವ ನೆಲೆಯಾಗುತ್ತದೆ. ಅಂತಹ ನಿರ್ಮಲವಾದ ಸ್ಥಿತಿಗೆ ನೀನು ಶರಣಾಗಿ ಅಲ್ಲಿ ನೀನು ನೆಲೆನಿಲ್ಲು ಎನ್ನುವಂತಹ ಸಂದೇಶವನ್ನು ನೀಡಿದ್ದಾರೆ.

ನೂರಾರು ಮತವಿಹುದು ಲೋಕದುಗ್ರಾಣದಲಿ
ಆರಿಸಿಕೊ ನಿನ್ನ ರುಚಿಗೊಪ್ಪುವುದನದರೊಳ್
ಸಾರದಡುಗೆಯನೊಳವಿಚಾರದೊಲೆಯಲಿ ಮಾಡು
ಬೇರೆ ಮತಿ ಬೇರೆ ಮತ – ಮಂಕುತಿಮ್ಮ

ಈ ಜಗತ್ತಿನಲ್ಲಿ ನೂರಾರು ಮತಗಳಿವೆ. ನಿನ್ನ ಮನಸ್ಸಿಗೆ ಇಷ್ಟವಾದ ಯಾವುದಾದರೊಂದು ಮತವನ್ನು ನೀನು ಆರಿಸಿಕೋ. ನಿನ್ನ ಮನಸ್ಸಿನ ಒಲೆಯಲ್ಲಿ ಆ ವಿಚಾರವನ್ನು ಅಡುಗೆ ಮಾಡಿ ಸಾರವನ್ನು ಅನುಭವಿಸು. ಯಾರ ಬುದ್ಧಿ ಹೇಗಿರುತ್ತದೋ ಹಾಗೆ ಅವರ ಮತ, ಎಂದರೆ 'ಅಭಿಪ್ರಾಯ' ಹಾಗಿರುತ್ತದೆ. 'ಪರವಸ್ತು' ವನ್ನು ಅರಿಯುವ ಮಾರ್ಗಗಳು ಸಾವಿರಾರು. ಪ್ರತಿಯೊಬ್ಬನಿಗೂ ಅವನವನದೇ ರೀತಿಯಲ್ಲಿ ಅದನ್ನು ಕಂಡುಕೊಳ್ಳುವ ಅಧಿಕಾರ ಮತ್ತು ಸಂಪೂರ್ಣ ಸ್ವಾತಂತ್ರ್ಯ ಉಂಟು, ಪ್ರತಿಯೊಬ್ಬರ ದರ್ಶನವೂ ಅವರವರ ವಿಚಾರದ ಆಧಾರದ ಮೇಲೆ ಇರುತ್ತದೆ. ಇದನ್ನೇ 'ಅವರವರ ಭಾವಕ್ಕೆ ಅವರವರ ಬಕುತಿಗೆ ಅವರವರ ತೆರನಾಗಿ ಇರುತಿಹನು ಶಿವಯೋಗಿ, ಹರನ ಭಕ್ತರಿಗೆ ಹರ, ಹರಿಯ ಭಕ್ತರಿಗೆ ಹರಿ, ನರರೇನು ಭಾವಿಸುವರದರಂತೆ ಕಾಣುವನು', ಎಂದರು ಶಿವ ಶರಣರು. ಹಾಗಾಗಿ ಆ ಪರತತ್ವ ಎನ್ನುವುದು ಅವರವರ ಭಾವಕ್ಕೆ ಸಂಬಂಧಿಸಿದ್ದು, ಯಾವ ಪದ್ಧತಿಯನ್ನು ಅನುಸರಿಸಿ, ಯಾವುದೇ ಹೆಸರಿನಿಂದ ನಮಸ್ಕರಿಸಿದರೂ, ಆಕಾಶದಿಂದ ಬಿದ್ದ ಮಳೆಯ ನೀರು ಹರಿಯುವಾಗ ಬೇರೆ ಬೇರೆ ಹೆಸರಿನಿಂದ ಕರೆಯಲ್ಪಟ್ಟ ನದಿಗಳಾದರೂ ಸೇರುವುದು ಒಂದೇ ಕಡಲೆಂಬಂತೆ, ಆ ನಮಸ್ಕಾರ ದೇವರನ್ನೇ ಮುಟ್ಟುತ್ತದೆ ಎಂದು ಅರ್ಥ. ಪರತತ್ವ ವಿಚಾರದಲಿ ಅನ್ಯರೊಡನೆ ಅಭಿಪ್ರಾಯ ಭೇಧವಿದ್ದರೂ, ಎಲ್ಲರ ಅಭಿಪ್ರಾಯಗಳನ್ನು ಗೌರವಿಸುತ್ತಾ, ಮುಂದುವರೆಯುತ್ತಾ

ಹೋಗುವುದೇ ಜಾಣತನ.

ಜೋಳಿಗೆಯ ಪಿಡಿದು ನೀನೂರಿನೂರಿಗೆ ನಡೆದು
ಹೇಳುತ್ತ ಹಾಡುಗಳ, ಭಾರಗಳ ಮರೆತು
ಬೀಳು ಮೇಲುಗಳೆಣಿಕೆಯಿಂ ಮನವನಲುಗಿಸದೆ
ಬಾಳ ನಡಸುವುದೆಂದೊ? – ಮಂಕುತಿಮ್ಮ

ಬದುಕಿನಲ್ಲಿ ಎಲ್ಲಕ್ಕೂ ಅಂಟಿಕೊಂಡು, ಸಂಬಂಧಗಳನ್ನು ಕಟ್ಟಿಕೊಂಡು ಮತ್ತು ಕಟ್ಟಿಕೊಂಡ ಸಂಬಂಧಗಳನ್ನು ಸಮರ್ಪಕವಾಗಿ ನಿಭಾಯಿಸಲು ಆಗದೆ, ಓಡಿಹೋಗುವುದು ಪಲಾಯನ. ಅದು ಹೇಡಿಗಳ ಹಾದಿ. ಆದರೆ ಬದುಕಿನ ಏಳು–ಬೀಳುಗಳನ್ನೆಲ್ಲಾ ಎದುರಿಸಿ, ಕಷ್ಟಸುಖಗಳನ್ನೆಲ್ಲಾ ಅನುಭವಿಸಿ ಪಕ್ವಗೊಂಡು, ಬದುಕಿನ ಸತ್ವ ಹೀನತೆಯನ್ನು ಮನಗಂಡು, ತತ್ವದ ಅನುಸಂಧಾನ ಮಾಡಿ, ಸ್ವಾರ್ಥ ತೊರೆದು ಜಗಕೆ ಉಪಕರಿಸುವ ಮನಸ್ಸುಂಟಾಗಿ, ತಾನು ಮನಗಂಡ ಸತ್ವವನ್ನು ತತ್ವರೂಪದಲ್ಲಿ ಲೋಕಕ್ಕೆ ಹಂಚುವ ಜೋಗಿಯಂತಾಗಬೇಕು ಎನ್ನುವುದೇ ಈ ಮುಕ್ತಕದ ಆಶಯ.

ಬದುಕಿನ ಅಂಟು ಬಹಳ ಗಟ್ಟಿ, ಇಂದು ಮಾರುಕಟ್ಟೆಯಲ್ಲಿ ಸಿಗುವ 'ಫೇವಿಕೋಲ್, ಕ್ವಿಕ್ ಫಿಕ್ಸ್' ನಂತಹ ಅಂಟುಗಳಿಗಿಂತ ಸಾವಿರ–ಸಾವಿರ ಪಟ್ಟು ಹೆಚ್ಚು ಗಟ್ಟಿಯಾದುದು. ನಾವು ಅದರಿಂದ ಬಿಡಿಸಿಕೊಳ್ಳುವ ಪ್ರಯತ್ನವನ್ನು ಪಟ್ಟರೂ, ಸಹ ಅದೇ ನಮ್ಮನ್ನು ಬಿಡದ ಹಾಗೆ ಆಂಟಿಕೊಂಡಿರುತ್ತದೆ. ಅದರಿಂದ ಬಿಡಿಸಿಕೊಳ್ಳುವ ಪ್ರಯತ್ನವನ್ನು ಮಾಡಿ, ಆ ಪ್ರಯತ್ನದಲ್ಲಿ ಬರುವ ಕ್ಲಿಷ್ಟತೆಗಳನ್ನು ಎದುರಿಸಲು ಮತ್ತು ನಿವಾರಿಸಲು ಸಾಧ್ಯವಾಗದಿದ್ದಾಗ, ಕೈಬಿಟ್ಟು, ಒಂದು ರೀತಿಯ 'ವೈರಾಗ್ಯ' ವನ್ನು ಕೆಲವರು ತಾಳುತ್ತಾರೆ. ಕೆಲವೇ ಕೆಲವು ಜನ, ಛಲ ಬಿಡದೆ ಆ ಮಾರ್ಗದಲ್ಲಿ ಬರುವ ಎಲ್ಲಾ ಏಳು ಬೀಳುಗಳನ್ನೂ ದಾಟಿ ಮುಂದುವರೆಯುತ್ತಾರೆ. ಅವರುಗಳು ನಿಜಾರ್ಥದಲ್ಲಿ ವಿರಾಗಿಗಳು, ವಿರಕ್ತರು. "ನೀನು, ಕಷ್ಟ ಸುಖಗಳ ಗೆರೆಯನ್ನು ದಾಟಿದ ಮನಸ್ಸನ್ನು ಹೊಂದಿದ ಜೋಗಿಯಂತೆ, ಜೋಳಿಗೆಯನು ಹಿಡಿದು, ಊರಿಂದ ಊರಿಗೆ ಹಾಡುತ್ತಾ, ಬದುಕಿನ ಭಾರವನು ಮರೆತು ಬಾಳನ್ನು ನಡೆಸುವುದು ಎಂದೋ?" ಎಂದು ಕೇಳಿಕೊಳ್ಳುತ್ತಾ, ಅಂತಹ ಮುಕ್ತ ಭಾವದ ಬದುಕನ್ನು ನಡೆಸಿದರೆ ಚೆನ್ನ ಎನ್ನುವಂತಹ ಸಂದೇಶವನ್ನು ನೀಡಿದ್ದಾರೆ.

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದತಿಶಯದ ಧರ್ಮ
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ
ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ

ಇಡೀ ಸೃಷ್ಟಿಯಲ್ಲಿ ಪ್ರಾಣಿ ಸಂಕುಲದಲ್ಲಿ 'ನಗಲು' ಸಾಧ್ಯವಾಗುವುದು, ಕೇವಲ

ಮನುಷ್ಯ ಪ್ರಾಣಿಗೆ. ಅದು ಮನುಷ್ಯನ ಸಹಜ ಗುಣ, ಆದ್ದರಿಂದ ಮನುಷ್ಯರಿಗೆ ನಗುವುದು ಸಹಜ ಧರ್ಮ. ಅಕಸ್ಮಾತ್ ಯಾರಾದರೂ ನಗದೇ ಇದ್ದರೆ, ಅವರಲ್ಲಿ ಏನೋ ಕೊರತೆ ಎಂದೇ ಅರ್ಥ. ಹಾಗಾಗಿ, ನಾವು ನಗುವುದು, ಅನ್ಯರನ್ನು ನಗಿಸುವುದು ಅಥವಾ ಅನ್ಯರ ನಗುವನ್ನು ಕಂಡು ನಾವು ನಗುವುದು, ಎಲ್ಲವೂ ಮನುಷ್ಯರ ' ನಗೆ' ಯ ಧರ್ಮದಲ್ಲಿ, ಪರಿಭಾಷೆಯಲ್ಲಿ ಬರುತ್ತವೆ. ಆದರೆ ನಮ್ಮಲ್ಲಿ ಕೆಲವರು ನಗುವುದೇ ಇಲ್ಲ. ಮಾನಸಿಕ ರೋಗದಿಂದ ಬಳಲುವ ಅವರಿಗೆ, ಯಾವುದೇ ವಿಷಯವು ಆನಂದ ಅಥವಾ ಸಂತೋಷವನ್ನು ಕೊಡುವುದಿಲ್ಲ, ಹಾಗಾಗಿ ಅವರು ನಗುವುದಿಲ್ಲ. ಕೆಲವರು "ನಾವು ಬಹಳ ಉತ್ತಮರು, ಅನ್ಯರ ಹಾಗೆ ಅಲ್ಲ. ಅವರೆದುರು ನಾವು ನಕ್ಕರೆ, ಸದರವಾಗಿ ಬಿಡುತ್ತೇವೆ" ಎನ್ನುವಂತಹ ದುರ್ಭಾವದ ಬಿಗುಮಾನದಿಂದ ನಗುವುದಿಲ್ಲ. ಇದೂ ಒಂದು ರೀತಿಯ ಮಾನಸಿಕ ರೋಗವೇ. ಮತ್ತೂ ಕೆಲವರಿಗೆ ಬದುಕಿನ ಕಾರ್ಪಣ್ಯಗಳ ನಡುವೆ ನಲುಗಿ, ನೊಂದು, ಬೆಂದು, ಪಾಪ ನಗೆಯೆನ್ನೇ ಕಳೆದುಕೊಂಡು ಬಿಟ್ಟಿರುತ್ತಾರೆ. ಕೆಲವು ಅತಿಶಯದ ವ್ಯಕ್ತಿಗಳಿದ್ದಾರೆ. ಇವರುಗಳು ಮನಸ್ಸಿನಲ್ಲಿ ಎಷ್ಟೇ ನೋವು, ಕಷ್ಟ ಮತ್ತು ದುಃಖವಿದ್ದರೂ, ಎಂತಹ ಸಂದರ್ಭದಲ್ಲೂ ತಾವೂ ನಗುತ್ತಾ, ಅನ್ಯರನ್ನೂ ನಗಿಸುತ್ತಾ, ಪರರ ನಗೆಯಲ್ಲಿ ತಾವೂ ಭಾಗಿಯಾಗುವ ಮನೋಭಾವ ಇಟ್ಟುಕೊಂಡಿರುತ್ತಾರೆ. ಅಂತಹವರು ಅತೀ ಉತ್ತಮರು.

ಕೆಲವರದು ಗಹಗಹಿಸುವ ನಗೆ, ಕೆಲವರದು ಮುಗುಳುನಗೆ, ಕೆಲವರದು ಮೃದು ಮಂದಹಾಸ, ಮತ್ತೆ ಕೆಲವರದು ತುಟಿಯಂಚಿನ ಕಿರುನಗೆ. ನಗೆ ಹೇಗಾದರೂ ಇರಲಿ, ಮನಸ್ಸು ಸಂತೋಷಪಡುವುದು ಮುಖ್ಯ. ಮನಸ್ಸಿಗೆ ಸಂತೋಷವಾದಾಗ ನಗುವುದು ಮನುಷರ ಸಹಜ ಧರ್ಮ. ಹಾಗೆ ತಾವು ನಗುವಾಗ, ತಮ್ಮ ನಗುವಿನ ಕಾರಣವನ್ನು ಇತರರೊಡನೆ ಹಂಚಿಕೊಂಡು, ಅವರನ್ನೂ ನಗಿಸುವುದು, ಪರಧರ್ಮ, ಎಂದರೆ ಪರರಿಗಾಗಿ ನಾವು ಆಚರಿಸಬೇಕಾದ ಧರ್ಮ. ಹಾಗೆಯೇ, ಮತ್ತೊಬ್ಬರು ನಗುತ್ತಿರುವಾಗ, ಅವರ ನಗುವಿನ ಕಾರಣವನ್ನು ನಮ್ಮ ಮನದಲ್ಲಿ ಅನುಭವಿಸಿ, ಅವರ ನಗುವನ್ನು ಕೇಳುತ್ತಾ, ನಾವೂ ನಗುವುದು, ಅತಿಶಯದ ಧರ್ಮ ಎಂದಿದ್ದಾರೆ.

ಬರಿಯ ಪೊಳ್ಳುವಿಚಾರ ಮಾನುಷವ್ಯಾಪಾರ
ಪರಿಕಿಸಲು ಪುಣ್ಯವೆಂಬುದುಮಹಂಕಾರ
ಅರಳಿ ಮೊಗವನಿನಿತಿನಿತು, ನಕ್ಕು ನಗಿಸಿರೆ ಸಾರ
ಹೊರೆ ಮಿಕ್ಕ ಸಂಸಾರ – ಮಂಕುತಿಮ್ಮ

ಸಾಮಾನ್ಯವಾಗಿ ಲೋಕದ ಜನರ ಜೀವನವನ್ನು ಗಮನಿಸಿದರೆ, ಎಲ್ಲೋ

ಕೆಲವರನ್ನು ಬಿಟ್ಟರೆ ಮಿಕ್ಕೆಲ್ಲರೂ ಬದುಕುವುದು ಸಾಧಾರಣ ಬದುಕು. ಹುಟ್ಟಿದಾರಭ್ಯ ಏನನ್ನೋ ಕಲಿತು ಯಾವುದೋ ವೃತ್ತಿಯಲ್ಲಿ ತೊಡಗಿ, ಹಣ ಸಂಪಾದನೆ ಮಾಡಿ, ಮನೆ, ಮಡದಿ ಅಥವಾ ಗಂಡ, ಮಕ್ಕಳು, ಎಂದು ಸಂಸಾರದಲ್ಲಿ ಮುಳುಗಿ, ತಿಂದು, ಉಂಡು, ಮಲಗಿ, ಬೆಳಗು–ಬೈಗುಗಳನ್ನು, ಕಳೆಯುತ್ತಾ ಆಯುಸ್ಸನ್ನು ಕಳೆದು, ಕಡೆಗೊಂದು ದಿನ ಕೃಶವಾದ ದೇಹವನ್ನು ತೊರೆದು ಪ್ರಾಣತ್ಯಾಗ ಮಾಡಿ, ಒಂದು ಜನ್ಮವನ್ನು ಸಂಪೂರ್ಣಗೊಳಿಸಿವುದು. ಅಂತಹ ಬದುಕಿನಲ್ಲಿಯ ಸಾಧನೆ ಸೊನ್ನೆ. ಇನ್ನೂ ಕೆಲವರಿದ್ದಾರೆ, ಏನನ್ನಾದರೂ ಹೊಸತನ್ನು ಮಾಡುತ್ತಲೇ ಇರಬೇಕು, ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಬೇಕು ಎನ್ನುವ ತುಡಿತದ ಕಾರಣ, ಅವರ ದುಡಿಮೆ, ಹಣ ಸಂಪಾದನೆ, ಆಸ್ತಿ ಸಂಚಯನ, ಹಲವಾರು ತಲೆಮಾರುಗಳಿಗಾಗುವಷ್ಟು ಸಂಪತ್ತಿನ ಶೇಕರಣೆ ಮಾಡಿದರೂ, ಎಲ್ಲವನ್ನೂ ಇಲ್ಲಿಯೇ ಬಿಟ್ಟು ಹೊರಡಬೇಕಾದುದ್ದರಿಂದ, ಆ ಸಾಧನೆಯ ಸಾರ್ಥಕ್ಯವೂ ಶೂನ್ಯ. ಮತ್ತೂ ಕೆಲವರು, ಸಮಾಜ ಸೇವೆಯನ್ನು ಮಾಡುತ್ತಾರೆ ಮತ್ತು ಬಹಳಷ್ಟು ಬಾರಿ ತಮ್ಮನ್ನು ನಂಬಿದ ಮತ್ತು ತಮ್ಮ ಮೇಲೆ ಆಧಾರಪಟ್ಟಿರುವವರನ್ನು ಕಡೆಗಣಿಸಿ, ತಮಗೂ ಹಾನಿ ಮಾಡಿಕೊಂಡು, ತಮ್ಮ ಸುಖವನ್ನೂ ತ್ಯಜಿಸಿ ಅನ್ಯರಿಗುಪಕಾರ ಮಾಡುವ ಕೆಲಸವನ್ನು ಮಾಡುತ್ತಾರೆ. ಇಂತಹವರನ್ನು 'ಮನೆಗೆ ಮಾರಿ, ಪರರಿಗುಪಕಾರಿ' ಎನ್ನುತ್ತಾರೆ. ಹಾಗೆ ಮಾಡುವಾಗ ಅವರಿಗೆ ಅದೇನೋ ಒಂದುರೀತಿಯ ಸಂತೋಷ, ಆನಂದ. ಅದು ಪುಣ್ಯ ಕೆಲಸವಾದರೂ 'ನಾನು' ಅಂತಹ ಕೆಲಸವನ್ನು ಮಾಡಿ ಪುಣ್ಯ ಸಂಪಾದಿಸುತ್ತೇನೆ, ಅನ್ಯರಿಗುಪಕಾರ ಮಾಡುವ ಭಾಗ್ಯ 'ನನ್ನದು' ಎಂದು ಬೀಗುತ್ತಾರೆ. ಹಾಗೆ ಮಾಡುವುದೂ ಸಹ ಕೇವಲ 'ಅಹಂ'ಕಾರದ ಭಾವದಿಂದಾಗುತ್ತದಾದ್ದರಿಂದ ಅದೂ ಸಹ ಸರಿಯಲ್ಲ. ಈ ಜಗತ್ತಿನಲ್ಲಿ ಮನುಷ್ಯ ಮನುಷ್ಯರ ನಡುವೆ ನಡೆಯುವುದೆಲ್ಲಾ ಹುರುಳು–ತಿರುಳು ಇಲ್ಲದ ಪೊಳ್ಳುವಿಚಾರ. ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದರೆ ಪುಣ್ಯವೆಂಬುದೂ ಸಹ ಅಹಂಕಾರದ ಮಾತು. ಮುಖವನ್ನು ಪ್ರಸನ್ನವಾಗಿಟ್ಟುಕೊಂಡು ತಾನೂ ನಕ್ಕು, ಇತರರನ್ನೂ ನಗಿಸಿದರೆ, ಬದುಕು ಸತ್ವಯುತವಾಗಿರುತ್ತದೆ. ಮಿಕ್ಕ ಸಂಸಾರವೆಲ್ಲ ಕೇವಲ ಭಾರವಾದ ಹೊರೆಯಾಗಿರುತ್ತದೆ ಎನ್ನುತ್ತಾರೆ.

ತತ್ವ ಸಾಕ್ಷಾತ್ಕಾರ ಚಿತ್ತಶುದ್ಧಿಯಿನಹುದು
ಚಿತ್ತಶೋಧನೆ ಮತಿಚಮತ್ಕಾರವಲ್ಲ
ಬಿತ್ತರದ ಲೋಕಪರಿಪಾಕದಿಂ, ಸತ್ಕರ್ಮ
ಸಕ್ತಿಯಿಂ ಶುದ್ಧತೆಯೊ – ಮಂಕುತಿಮ್ಮ

ಚಿತ್ತ ಶುದ್ಧಿಯಿಲ್ಲದ ಮನಸ್ಸಿಗೆ ತತ್ವ ಸಾಕ್ಷಾತ್ಕಾರವಾಗುವುದು ಅಸಾಧ್ಯ. ಕಾರಣವೇನೆಂದರೆ, ಶುದ್ಧ ಮತ್ತು ಅಶುದ್ಧ ಎಂಬ ವಿಚಾರಗಳು ಕೇವಲ ಬುದ್ಧಿವಂತಿಕೆಯ ಚಮತ್ಕಾರದಿಂದ ಅದು ಅರ್ಥವಾಗುವುದಿಲ್ಲ. ಅದು ನಮಗೆ ನಮ್ಮ ಜೀವನದ ಅನುಭವದಿಂದ ಗೊತ್ತಾಗುತ್ತದೆ. ನಮ್ಮನ್ನು ನಾವು ಬದುಕಿನ ಅನುಭವಗಳಿಗೆ ಒಡ್ಡಿಕೊಂಡರೆ, ತೆರೆದುಕೊಂಡರೆ ಮಾತ್ರ ಸಾಧ್ಯ. ತತ್ವದ ಅರಿವು ಕೇವಲ ಮನದ ಶುದ್ಧಿಯಿಂದ ಆಗುತ್ತದೆ. ಚಿತ್ತದಲ್ಲಿನ ಕಶ್ಮಲಗಳನ್ನು ತೆಗೆಯುವುದು ಕೇವಲ ಬುದ್ಧಿವಂತಿಕೆಯ ಕೆಲಸವಲ್ಲ. ಆಸಕ್ತಿಯಿಂದ ಕರ್ಮಗಳನ್ನು ಮಾಡುತ್ತಾ ಬದುಕಿನ ಅನುಭವವನ್ನು ಪಡೆದು ಮತ್ತು ಆ ಅನುಭವದ ಸಾರವನ್ನು ಅಂತರಂಗಕ್ಕೆ 'ಪಾಕ'ದಂತೆ ಇಳಿಸಿದಾಗ, ಚಿತ್ತದ ಶುದ್ಧತೆ ಸಿದ್ಧಿಸುತ್ತದೆ ಎಂದು ಉಲ್ಲೇಖಮಾಡಿದ್ದಾರೆ. ಕರ್ಮ ಅಥವಾ ಸತ್ಕರ್ಮಗಳೆಂದರೆ ವಿದ್ಯೆ, ಸಂಸ್ಕಾರ, ಸತ್ಸಂಗ, ಸದಾಚಾರ ಎಲ್ಲವನ್ನೂ ಅನುಸರಿಸಬೇಕು. 'ಸತ್' ಯಾವುದು 'ಅಸತ್' ಯಾವುದು ಎಂದು, ನಮ್ಮ ಗುರು ಹಿರಿಯರ ಮಾರ್ಗದರ್ಶನದಿಂದ ಕಲಿಯಬೇಕು. ಒಟ್ಟಾರೆ ಹೇಳಬೇಕಾದರೆ ನಾವು ಉತ್ತಮರಾಗಲು, ಹಲವಾರು ಮಾರ್ಗಗಳಿವೆ. ಅವುಗಳಲ್ಲಿ ಯಾವುದನ್ನಾದರೂ ಆಯ್ದುಕೊಂಡು, ಆಸಕ್ತಿಯಿಂದ ಮುನ್ನಡೆದರೆ, ನಮ್ಮ ಉದ್ಧಾರದ ಬಾಗಿಲುಗಳು ತಾವೇ ತಾವಾಗಿ ತೆರೆದುಕೊಂಡು, ನಮ್ಮೊಳಕ್ಕೆ ಇಳಿಯುತ್ತದೆ. ಅಲ್ಲಿ ನಮಗೆ ಶುದ್ಧ ತತ್ವದ ಸಾಕ್ಷಾತ್ಕಾರವಾಗುತ್ತದೆ. ಪ್ರಯತ್ನ ಪಟ್ಟರೆ ಎಲ್ಲರಿಗೂ ಸಾಧ್ಯ.

ಸುಮ್ಮನೆ ಬದುಕುವುದಕ್ಕಿಂತ ಬದುಕಿನ ಪ್ರತೀ ಪ್ರಸಂಗವನ್ನೂ ಅನುಭವಿಸಬೇಕು ಮತ್ತು ಆ ಅನುಭವದ ಸಾರವನ್ನು ಅಂತರಂಗಕ್ಕೆ ಇಳಿಸಿಕೊಳ್ಳಬೇಕು. ರುಚಿಯಾದ ಊಟ ಮಾಡಿದಾಗ ಅದರ ಸವಿಯನ್ನು, ಒಂದು ಸುಗಂಧಭರಿತ ಹೂವನ್ನು ನೋಡಿದರೆ ಅದರ ಸುಗಂಧವನ್ನು, ಪ್ರಕೃತಿಯನ್ನು ನೋಡಿದರೆ ಅದರ ರಮಣೀಯತೆಯನ್ನು, ಒಬ್ಬರಿಗೆ ಉಪಕಾರ ಮಾಡಿದಾಗ ನಮ್ಮ ದೈನ್ಯತೆ ಮತ್ತು ಧನ್ಯತೆಯ ಭಾವವನ್ನು, ಮತ್ತೊಬ್ಬರು ನಮಗುಪಕಾರ ಮಾಡಿದರೆ ಅವರ ಹಿರಿಮೆಯನ್ನು ಮತ್ತು ನಮ್ಮ ಕೃತಜ್ಞತೆಯನ್ನು, ಹೀಗೆ ಪ್ರತೀ ಪ್ರಸಂಗದ ಅನುಭವದಿಂದ ಉಂಟಾಗುವ ಭಾವವನ್ನು ಒಳಗೆ ತುಂಬಿಕೊಳ್ಳಬೇಕು. 'ಬಿತ್ತರದ ಲೋಕಪರಿಪಾಕದಿಂ' ಎಂದರೆ ವಿಸ್ತೃತವಾದ ಮತ್ತು ಧೀರ್ಘ ಕಾಲದ ಅನುಭವದಿಂದ ನಾವು ಪಕ್ವವಾಗಬೇಕು. ಹಾಗೆ ಪಕ್ವವಾದಾಗ, ಮನಸ್ಸಿನಲ್ಲಿ ಇರುವ ಹೊಲಸನ್ನು ಹೊರತಳ್ಳಿ ತತ್ವವನ್ನು ಸತ್ವರೂಪದಿ ಬಟ್ಟಿ ಇಳಿಸಿಕೊಳ್ಳಲು ಸಹಾಯವಾಗುತ್ತದೆ.

ತನ್ನಯ ಮನೋರಥಂಗಳ ಚಕ್ರವೇಗದಿನೆ

ತನ್ನ ಮಣಿಹಾರಗಳ ಸಿಕ್ಕು ಬಿಗಿತದಿನೇ
ತನ್ನ ಸಂಕಲ್ಪ ವಿಪರೀತದಿನೆ ಮಾನವನ
ಬೆನ್ನು ಮುರಿದೀತೇನೊ – ಮಂಕುತಿಮ್ಮ

ಸಾಧ್ಯಾಸಾಧ್ಯತೆಗಳ ವಿವೇಚನೆ ಇಲ್ಲದೆ, ಅತಿವೇಗವಾಗಿ ಓಡುವ ನಮ್ಮ ಮನಸ್ಸು, ಅತೀ ಉತ್ತಮವಾದ ಇಚ್ಚೆಗಳನ್ನೇ ಹಾರಗಳಂತೆ ತೊಟ್ಟು, ನಮ್ಮ ಕ್ಷಮತೆಗೂ ಮೀರಿದ ಮತ್ತು ವಿಪರೀತವಾದ ಕೆಲಸವನ್ನು ಸಾಧಿಸಲು ಪ್ರಯತ್ನಪಡುವ ನಾವು, ಆ ವಿಪರೀತ ಪ್ರಯತ್ನದಿಂದಲೇ ಪತನವಾಗುವ ಸಾಧ್ಯತೆ ಇದೆ. ಆದ್ದರಿಂದ, ನಾವು ಅತಿಯಾಗಿ ಯೋಚಿಸುವುದು ಮತ್ತು ಯೋಜಿಸುವುದನ್ನ ಬಿಟ್ಟು, ಬದಲಾವಣೆಯನ್ನು ಅತಿ ಶೀಘ್ರವಾಗಿ ತರಬೇಕೆಂಬ ಆತುರದ ತುಡಿತವಿಲ್ಲದೇ, ಸಮಾಧಾನವಾಗಿ ನಿರಂತರ ಕಾರ್ಯದಿಂದ ಬದಲಾವಣೆ ಅಥವಾ ಸುಧಾರಣೆಯನ್ನು ತರಬಹುದು ಎಂಬ ನಂಬಿಕೆ ಸೂಕ್ತ ಫಲಿತಾಂಶವನ್ನು ನೀಡುತ್ತದೆ.

ಮನಸ್ಸಿಗೆ ಯೋಚನೆಯ ವೇಗ ಅಧಿಕ. ಕ್ಷಣಾರ್ಧದಲ್ಲಿ ಸಾವಿರ ಮಾರು ದೂರ ಯೋಚಿಸುವ ಕ್ಷಮತೆ ಮನಸ್ಸಿಗೆ ಇದೆ. ಆದರೆ ನಮ್ಮ ಮನಸ್ಸಿನ ಆಲೋಚನೆಯನ್ನು ಕಾರ್ಯಗತಗೊಳಿಸುವ ನಮ್ಮ 'ದೇಹ'ದ ವೇಗ, ಒಂದು 'ಮಾರೂ' ಇಲ್ಲ. ಹಾಗಾಗಿ ನಮ್ಮ ಯೋಚನೆ ಮತ್ತು ಕೆಲಸಗಳ ನಡುವೆ ಅಗಾಧ ಅಂತರ ಇರುತ್ತದೆ. ಮನಸ್ಸು ಕಲ್ಪನಾಲೋಕದಲ್ಲಿ ಬೇಗ ಬೇಗ ಮುಂದೆ ಓಡುತ್ತದೆ. ಜಗತ್ತನ್ನು ಬದಲಿಸುವ ಮತ್ತು ಪ್ರಗತಿಯನ್ನು ಕಾಣುವ ಸಲುವಾಗಿ ಯೋಜನೆಗಳನ್ನು ಹಾಕುವುದು ನಮ್ಮ ಮನಸ್ಸು. ಆದರೆ ಮನಸ್ಸಿನ ವೇಗದಲ್ಲಿ ಬದಲಾವಣೆ ಆಗುವುದೇ ಇಲ್ಲ. ಮನಸ್ಸಿನ ಆಲೋಚನೆ ವಾಸ್ತವವಾಗಿ ಆಗಬೇಕಾದರೆ, ಅದಕ್ಕೆ ಪೂರಕವಾಗಿ ಹತ್ತು ಹಲವಾರು ವಿಷಯಗಳ ಸಹಕಾರ ಬೇಕಾಗುತ್ತದೆ. ಯಾವುದೂ ಮನಸ್ಸಿನ ಯೋಚನೆಯಷ್ಟು ವೇಗವಾಗಿ ಬದಲಾಗುವುದಿಲ್ಲವಾದ್ದರಿಂದ, ನಾವು ಮಾಡಿದ ಸಂಕಲ್ಪಗಳು ಬಹಳ ವಿಪರೀತವಾಯಿತೇನೋ ಎಂದು ಅನ್ನಿಸಿ, ಮನಸ್ಸು ಕುಗ್ಗಿ, ಸೊರಗುತ್ತದೆ. ಹಾಗೆ ಆಗುವುದಕ್ಕೆ ಮನಸ್ಸಿನ ವಿಪರೀತ ಆಲೋಚನೆಯೇ ಕಾರಣ. ಅಣುಶಕ್ತಿಯನ್ನು ಕಂಡುಕೊಂಡ ಮಾನವ ಅದರ ದುರುಪಯೋಗವನ್ನು ತಡೆಯಲಿಕ್ಕಾಯಿತೇ.

ಲೋಕದಲಿ ಭಯವಿರಲಿ, ನಯವಿರಲಿ, ದಯೆಯಿರಲಿ
ನೂಕುನುಗ್ಗುಗಳತ್ತ, ಸೋಂಕುರೋಗಗಳು
ಸಾಕಿ ಸಲಹುವರುಮ್ ಅತ್ತಲೆ ನಿನಗೆ; ನಿನ್ನೆಲ್ಲ
ಲೋಕ ಮೂಲವು ನೋಡೊ – ಮಂಕುತಿಮ್ಮ

ಈ ಲೋಕದಲ್ಲಿ ನಾವಿರುವಾಗ ನಮ್ಮ ನಡವಳಿಕೆಯಿಂದ ಅನ್ಯರಿಗೆ ತೊಂದರೆಯಾದೀತೇನೋ ಎಂಬ ಭಯವಿರಬೇಕು. ಅಂತಹ ಸಾತ್ವಿಕ ಭಯವನ್ನು ನಾವು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಆ ಭಯವೇ ನಮ್ಮನ್ನು ಬಹಳಷ್ಟು ಕೆಲಸಗಳಿಗೆ 'ಮಾರ್ಗದರ್ಶಿ' ಯಾಗುತ್ತದೆ. ಕೇವಲ ಭಯವಲ್ಲ 'ನಯ'ವೂ ಬೇಕು. ಏಕೆಂದರೆ ಈ ಜಗತ್ತೇ ಒಂದು ಕನ್ನಡಿಯಂತೆ. ನಾವು ಇತರರೊಡನೆ ನಯವನ್ನು ತೋರಿದರೆ ಇತರರಿಂದ ನಾವು ಅಪೇಕ್ಷೆಪಡುವ ನಯವು ನಮಗೆ ಸಿಕ್ಕೀತು. ನಾವು 'ಒರಟಾ'ದರೆ ನಮಗೆ ದಕ್ಕುವುದು ಏನು ಎಂದು ಇಂದಿನ ಸಮಾಜದಲ್ಲಿ ಬಹುಶಃ ಎಲ್ಲರಿಗೂ ಗೊತ್ತಿದೆ. ಇನ್ನು ದಯೆ ಬೇಕು ಎಂದಿದ್ದಾರೆ. ಹೌದು ಎಲ್ಲರಿಗೂ ಸಮನಾದ ದೈಹಿಕಬಲ, ಆರ್ಥಿಕಬಲ ಮತ್ತು ಮಾನಸಿಕ ಬಲವಿರುವುದಿಲ್ಲ. ನಮಗಿಂತ ಬಲಹೀನರನ್ನು ಕಂಡು ನಮ್ಮಲ್ಲಿ ಸದಾಕಾಲ ದಯೆಯ ಭಾವ ಬೇಕು. "ದಯೆಯೇ ಧರ್ಮದ ಮೂಲವಯ್ಯಾ" ಎಂದಿದ್ದಾರೆ ಮಾನ್ಯ ಜಗಜ್ಯೋತಿ ಬಸವಣ್ಣನವರು. ಮಾನವೀಯತೆಯೇ ಮಾನವನ ಮೂಲ ಧರ್ಮ. ಅ ಧರ್ಮದ ಪಾಲನೆಯಾಗಬೇಕಾದರೆ ಸೃಷ್ಟಿಯ ಸಕಲ ಪ್ರಾಣಿಗಳಲ್ಲೂ ನಮ್ಮ ಮನಸ್ಸಿನಲ್ಲಿ ದಯೆಯ ಭಾವವಿರಬೇಕು.

ಜೀವಿಸುವ ಕಲೆಯನ್ನು ಮುಂದುವರೆಸುತ್ತಾ, ಜಗತ್ತಿನಲ್ಲಿ ನಮ್ಮ ಸುತ್ತ ಬಹಳಷ್ಟು ಜನರಿರುತ್ತಾರೆ. ಪ್ರತಿಯೊಬ್ಬರದೂ ಬೇರೆ ಬೇರೆ ಮನೋಭಾವ. ಗುಂಪಿನಲ್ಲಿ ಇದ್ದಾಗ ಒಂದು ರೀತಿ ಮತ್ತು ಏಕಾಂತದಲ್ಲಿ ಒಂದು ರೀತಿ. ಗುಂಪಿನಲ್ಲಿ ಎಲ್ಲರೂ ಒಂದು ಉನ್ಮಾದದ ಸ್ಥಿತಿಯಲ್ಲಿರುತ್ತಾರೆ. ನಾವೂ ಸಹ ಗುಂಪಿನಲ್ಲಿ ಒಬ್ಬರಂತೆ ಬದುಕಿದರೆ ಆ 'ಉನ್ಮಾದ' ದ ಸೊಂಕುರೋಗ ನಮ್ಮನ್ನು ಅಂಟಿಕೊಂಡು ನಾವು ಆ ಬದುಕಿನಲ್ಲಿ ಕೊಚ್ಚಿಕೊಂಡು ಹೋಗುತ್ತೇವೆ. ಇದು, ನಮ್ಮನ್ನು ಹೆತ್ತು, ಹೊತ್ತು, ಸಾಕಿ ಸಲುಹಿದವರಿಗೂ ಅನ್ವಯವಾಗುತ್ತದೆ. ಅವರಲ್ಲಿ ಪ್ರೀತಿ ಪ್ರೇಮವನ್ನು ಕೇವಲ ಕರ್ತವ್ಯದಂತೆ ನಡೆಸಿದರೆ, ನಾವು ನಮ್ಮ ಬದುಕಿನ ಗುರಿಯನ್ನು ಅರಿಯಬಹುದು ಮತ್ತು ಗುರಿ ಮುಟ್ಟಲು ಪ್ರಯತ್ನಿಸಲೂಬಹುದು. ಅವರ ಪ್ರೇಮ, ಪ್ರೀತಿ ಇತ್ಯಾದಿ ಭಾವಗಳ ಬಂಧನದಲ್ಲಿ ಸಿಲುಕಿಕೊಂಡರೆ, ಅದರಿಂದ ಬಿಡಿಸಿಕೊಂಡು ನಾವು ಬೆಳೆಯುವುದು ಕಷ್ಟವಾಗುತ್ತದೆ. ಹೀಗಾಗಿ ಉತ್ತಮರಾಗಲು ಪ್ರಾಮಾಣಿಕ ಪ್ರಯತ್ನಮಾಡಿದರೆ, ಬದುಕು ಉತ್ತಮವಾಗಿ, ಸಾರ್ಥಕವಾಗುತ್ತದೆ. ಇದು ಜೀವನದ ಕಲೆಯನ್ನು ಅರಿತುಕೊಳ್ಳುವ ವಿಧಾನ. ಪ್ರಯತ್ನಪಟ್ಟರೆ ಎಲ್ಲರೂ ಉತ್ತಮಜೀವಿಗಳಾಗಬಹುದು.

ಕಲೆಗಳಲಿ ಪರಮಕಲೆ ಜೀವನದ ಲಲಿತ ಕಲೆ

ಕಲಿಸಲದನಳವಲ್ಲ ಬಾಹ್ಯಬೋಧನೆಯಿಂದ

ಒಲಿದೊಲಿಸಿಕೊಳುವ ಲೌಕಿಕನಯದ ಸೊಗಸ ನೀಂ

ತಿಳಿವುದೊಳಹದದಿಂದ – ಮಂಕುತಿಮ್ಮ

ಜಗತ್ತಿನಲ್ಲಿರುವ ಎಲ್ಲಾ ಕಲೆಗಳಲ್ಲಿ ಅತೀ ಉತ್ತಮವಾದ ಕಲೆ ಎಂದರೆ 'ಬದುಕುವ' ಕಲೆ. ಇದನ್ನು ಹೊರ ಬೋಧನೆಯಿಂದ ಕಲಿಸಲು ಸಾಧ್ಯವಿಲ್ಲ. ನಾವು ಜಗತ್ತಿಗೆ ಒಲಿದು, ಜಗತ್ತನ್ನು ನಾವು ಒಲಿಸಿಕೊಳ್ಳುವುದೇ ಬದುಕಿನ ಸೊಗಸು. ಇದನ್ನು ನೀನು ನಿನ್ನ ಅಂತರಂಗದ ಮಂಥನದಿಂದ ಅರಿತುಕೊಳ್ಳಬೇಕು. ಬದುಕುವ ಕಲೆಯೆಂದರೆ, "ಹೇಗೆ ಬದುಕಬೇಕು? ಏನನ್ನು ಮತ್ತು ಎಷ್ಟನ್ನು ಮಾತಾಡಬೇಕು? ಕೇಳಿದ ಯಾವುದಕ್ಕೆ ಎಷ್ಟು ಮಹತ್ವವನ್ನು ನೀಡಬೇಕು? ಕಂಡದ್ದನ್ನು ಹೇಗೆ ಅರ್ಥೈಸಿಕೊಳ್ಳಬೇಕು? ಅರ್ಥೈಸಿಕೊಂಡದ್ದನ್ನು ಹೇಗೆ ಜೀರ್ಣಿಸಿಕೊಳ್ಳಬೇಕು? ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಮತ್ತು ಸಿಕ್ಕ ಉತ್ತರಗಳನ್ನು ಹೇಗೆ ಬದುಕಿಗೆ ಅಳವಡಿಸಿಕೊಳ್ಳುವುದು ಎಂದು ಅರಿತುಕೊಳ್ಳವುದೇ 'ಜೀವನದ ಕಲೆ'. ಇದು ಕೇವಲ ಬುದ್ಧಿಯ ಕೆಲಸವಲ್ಲ. ಇದು ಹೃದಯದ ಕೆಲಸ. ಇದು ಅಂತರಂಗದ ಕೆಲಸ. ಅನುಭವಗಳನ್ನು ಅಂತರಂಗದೊಳಕ್ಕೆ ಇಳಿಸಿಕೊಂಡು, ಬುದ್ಧಿ ಮತ್ತು ವಿವೇಕದ ಕಡೆಗೋಲಿಂದ ಮಂಥನ ಮಾಡಿ ಸತ್ವವೆಂಬ ಬೆಣ್ಣೆಯನ್ನು ತೆಗೆಯುವ ಕೆಲಸವಾಗಬೇಕು. ಜೀವಿಸುವುದು ಒಂದು ಕಲೆ. ಅದು ವಿದ್ಯೆಯ 64 ಕಲೆಗಳಿಗಿಂತ ಅತ್ಯುತ್ತಮವಾದ ಕಲೆ. ಈ ಕಲೆ ಕರಗತವಾದರೆ ಅವನಷ್ಟು ಪರಮ ಸುಖಿ ಇನ್ನೊಬ್ಬನಿರಲಾರ. ಇದನ್ನು ಪರಮ ಕಲೆ ಎಂದಿದ್ದಾರೆ. ಆದರೆ ಇದನ್ನು ಒಬ್ಬರು ಇನ್ನೊಬ್ಬರಿಗೆ ಕಲಿಸಲು ಸಾಧ್ಯವಿಲ್ಲ. ಅನುಭವದಿಂದ ಮಾತ್ರ ಕಲಿಯಲು ಸಾಧ್ಯ, 'ಹೇಳಿಕೊಟ್ಟ ಬುದ್ಧಿ ಮತ್ತು ಕಟ್ಟಿಟ್ಟ ಬುತ್ತಿ ಎಷ್ಟು ದಿವಸ ಬರುತ್ತದೆ' ಎನ್ನುವ ಗಾದೆಯೊಂದಿದೆ. ಹಾಗೆಯೇ ಬದುಕುವುದನ್ನು ಹೇಳಿಕೊಟ್ಟು ಕಲಿಸಲಾಗುವುದಿಲ್ಲ. ಬದುಕಿನ ಅನುಭವದಿಂದಲೇ ಕಲಿಯಬೇಕು. ಕಷ್ಟ–ಸುಖಗಳ, ನೋವು–ನಲಿವುಗಳ ಅನುಭವದಿಂದ ಬದುಕಿನ ಸತ್ವವನ್ನು ಗ್ರಹಿಸಿ, ಅದರಿಂದ ಯಾವುದು ಸೂಕ್ತ, ಯಾವುದು ಸೂಕ್ತವಲ್ಲ ಎಂದು ವಿಶ್ಲೇಷಿಸಿ, ಸೂಕ್ತವಾದದ್ದನ್ನು ಅನುಸರಿಸುವ ಗುಣ ನಮ್ಮದಾದರೆ ' ಜೀವಿಸುವ ಕಲೆ' ನಮಗೆ ಒಲಿದಂತೆಯೇ. ಈ ಕಲೆಯನ್ನು ನಾವು ನಮ್ಮೊಳಗೇ ಒಲಿಸಿಕೊಂಡು, ಹಾಗೆ ಒಲಿದ ಕಲೆಯಿಂದ ಲೌಕಿಕ ಜಗತ್ತನ್ನು ನಮಗನುಗುಣವಾಗಿ ಒಲಿಸಿಕೊಳ್ಳುವುದೇ 'ಜೀವನದ ಕಲೆ' ಯ ಪರಮ ಗುರಿ.

ಬಿಟ್ಟೆನೆಲ್ಲವನೆಂಬ ಹೃದಯಶೋಷಣೆಬೇಡ

ಕಟ್ಟಿಕೊಳ್ಳುವ ಶಿರಃಪೀಡೆಯುಂ ಬೇಡ

ತೊಟ್ಟು ನಿರಹಂಕೃತಿಯ ಕವಚವನು ನೀಂ ಪೋರು
ಮುಟ್ಟದಿಳೆಯಸಿ ನಿನ್ನ – ಮಂಕುತಿಮ್ಮ

ಅಯ್ಯೋ ನನಗೇನೂ ಬೇಡ. ನಾನು ಎಲ್ಲವನ್ನೂ ಬಿಟ್ಟಿದ್ದೇನೆ, ಈ ಜಗತ್ತಿನಿಂದ ನನಗೇನೂ ಆಗಬೇಕಿಲ್ಲ" ಎಂದು ಹೊರಗೆ ಹೇಳಿ ಮತ್ತು ನಿಶ್ಚಯಿಸಿಕೊಂಡರೂ, ಮನಸ್ಸಿನ ಅಂತರಾಳದಲ್ಲಿ ಮತ್ತೆ ಮತ್ತೆ ಚಿಗುರುವ ಬೀಜಗಳನ್ನಿಟ್ಟುಕೊಂಡಿದ್ದರೆ, ಒಳಗಿನಿಂದ ಆಸೆಗಳು ಚಿಗುರೊಡೆಯುವುದು. ಹೊರಗಿನಿಂದ ಅದನ್ನು ಬೇಡವೆಂದುಕೊಂಡಿದ್ದರೆ ಮನಸಿನಂಗಳದಲ್ಲಿ ಒಂದು ದ್ವಂದ್ವ ಅಥವಾ ತಿಕ್ಕಾಟಕ್ಕೆ ಕಾರಣವಾಗಿ ಹೃದಯವನ್ನು ಶೋಷಣೆ ಮಾಡುತ್ತದೆ. ಚಿಗುರುವ ಸಾಮರ್ಥ್ಯವಿರುವ ಬೀಜಗಳನ್ನು ಕಿತ್ತು ಹೊರಹಾಕದ ಹೊರತು ಈ ಹೃದಯ ಶೋಷಣೆ ನಿಲ್ಲದು. ಬಿಡದಿದ್ದರೂ ಬಿಟ್ಟಂತಿರಬೇಕು. ಇದೇ ರೀತಿ ಎಲ್ಲವನ್ನೂ ಕಟ್ಟಿಕೊಂಡು, ಯಾವುದನ್ನೂ ಸಮರ್ಪಕವಾಗಿ ಸರಿತೂಗಿಸಲು ಆಗದೆ, ಬಿಡಲೂ ಆಗದೆ ತಲೆನೋವನ್ನು ತಂದುಕೊಳ್ಳುವುದೂ ಬೇಡ. ಜಗತ್ತಿನಲ್ಲಿ ಇದ್ದ ಮೇಲೆ ಕಟ್ಟಿಕೊಳ್ಳದೆ ಇರಲು ಸಾಧ್ಯವಿಲ್ಲ. ಜಗತ್ತಿನ ಬದುಕಿಗೆ ಬಂದಾದ ಮೇಲೆ ಬದುಕು ಹಿತವಾಗಿರಬೇಕಾದರೆ ಆಸೆಗಳನ್ನು ಬಿಡಬೇಕು, ಆದರೆ ಬಿಡಲಾಗುವುದಿಲ್ಲ, ಲೋಕವ್ಯವಹಾರವನ್ನು ಕಟ್ಟಿಕೊಳ್ಳಬೇಕು ಆದರೆ ಸಹಿಸಲಾಗುವುದಿಲ್ಲ. ನನಗಾಗಿ, ನನ್ನಿಂದ, ನಾನೇ 'ಎನ್ನುವ ಭಾವಗಳನ್ನು ತೊರೆದು ಅಹಂಕಾರ ರಹಿತವಾದ 'ನಿರಹಂಕಾರದ ಕವಚ' ವನ್ನು ತೊಟ್ಟು ಜಗತ್ತಿನ ಹೋರಾಟವನ್ನು ಎದುರಿಸಿದರೆ ಆಗ ನಮ್ಮನ್ನು ಕೊಯ್ಯುವ ಕತ್ತಿಗಳಾಗಿ ನಾವು ಪಡುವ ಆಸೆಗಳಿಂದಾಗಲೀ ಅಥವಾ ನಮ್ಮ ಲೋಕವ್ಯವಹಾರದಿಂದಾಗಲೀ ಹೃದಯಕ್ಕೆ ಪೀಡೆಯಾಗದು. ಎಲ್ಲದರಲ್ಲಿ ಇದ್ದೂ ಇಲ್ಲದಂತೆ ಸಂತೋಷವಾಗಿ ಎಲ್ಲವನ್ನೂ ಒಂದು 'ಪರತತ್ವ' ಎಂಬಂತೆ ನೋಡುತ್ತಾ, ಮಿತವಾಗಿ ಅನುಭವಿಸುತ್ತಾ, ನಿರ್ಮೋಹದಿಂದ ಜೀವನವನ್ನು ನಡೆಸಬಹುದು. ನಿರ್ಮಮಕಾರದ, ನಿರ್ಮೋಹದ ಮತ್ತು ನಿರಹಂಕಾರದ ಸ್ಥಿತಿ ಬಹಳ ಉತ್ತಮವಾದ ಸ್ಥಿತಿ. ಪರತತ್ವಕ್ಕೆ ಬಹಳ ಹತ್ತಿರವಾದ ಸ್ಥಿತಿ. ಮನಸ್ಸು ಬುದ್ಧಿಗಳ ನಿರಂತರ ತರಬೇತಿಯಿಂದ ಆ ಸ್ಥಿತಿಗೆ ತಲುಪುವ ಸಾಧನೆಯನ್ನು ಯಾರು ಬೇಕಾದರೂ ಮಾಡಬಹುದು. ಪ್ರಯತ್ನಪಡಬೇಕು ಅಷ್ಟೇ.

ಪರಾಮರ್ಶನ ಗ್ರಂಥಗಳು

1. ಮಂಕುತಿಮ್ಮನ ಕಗ್ಗ., ತಾತ್ಪರ್ಯ (2018), ಶ್ರೀ ಹೆಚ್.ವಿ. ಶ್ರೀಕಾಂತ್, ಶ್ರೀರಂಗ ಪ್ರಿಂಟರ್ಸ್, ಬೆಂಗಳೂರು.
2. ಕಗ್ಗ ರಸಧಾರೆ : ಸಂಪುಟ – 1 (2013), ರವಿ ತಿರುಮಲೈ, ವಿಜಯ ರವಿ ಪ್ರಕಾಶನ, ಬೆಂಗಳೂರು.
3. ಕಗ್ಗ ರಸಧಾರೆ : ಸಂಪುಟ – 2 (2014), ರವಿ ತಿರುಮಲೈ, ವಿಜಯ ರವಿ ಪ್ರಕಾಶನ, ಬೆಂಗಳೂರು.
4. ಚಿಂತನಾ ಲೇಖನಗಳು, (2017), ಡಾ. ಬಸವರಾಜ ಸಬರದ, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

***

ಕನ್ನಡ ಸಾಹಿತ್ಯದಲ್ಲಿ ಶ್ರೀರಾಮ

1

ಅಶ್ವತ್ಥ.ಎಸ್, [1]

ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, &
ಸ್ನಾತಕೋತ್ತರ ಕೇಂದ್ರ,
ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ.

1

ಡಾ. ಸುಮ ಆರ್. [2]

ಕನ್ನಡ ಪ್ರಾಧ್ಯಾಪಕರು,
ಬಿ.ಜಿ.ಎಸ್. –ಬಿ– ಸ್ಕೂಲ್, ಕೆಂಗೇರಿ.

.

ಭಾರತೀಯ ಸಂಸ್ಕೃತಿಯಲ್ಲಿ ಅತ್ಯುನ್ನತ ಸ್ಥಾನದಲ್ಲಿರುವ ಶ್ರೀರಾಮ ಕ್ರಿ.ಪೂ.7ನೆಯ ಶತಮಾನದಿಂದ ಕ್ರಿ.ಪೂ.3ನೆಯ ಶತಮಾನದವರೆಗೆ ಜೀವಿಸಿದ್ದನೆಂದು ನಂಬಲಾಗಿದೆ. ಭಾರತ ದೇಶದ ಕೋಸಲ ಎಂಬ ಪ್ರದೇಶದಲ್ಲಿ ದಶರಥ–ಕೌಶಲ್ಯೆಯ ಸುಪುತ್ರನಾಗಿ, ರಾಮ ಜನ್ಮ ತಾಳುತ್ತಾನೆ. ಹಿಂದೂ ಧರ್ಮದಲ್ಲಿ ಪ್ರಮುಖ ದೇವತೆ ವಿಷ್ಣುವಿನ ಏಳನೆಯ ಅವತಾರವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ರಾಮನಿಗೆ ಅತ್ಯಂತ ಪೂಜ್ಯನೀಯ ಸ್ಥಾನವಿದೆ. ಭಾರತವಲ್ಲದೇ ನೇಪಾಳ, ಟಿಬೇಟ್, ಇಂಡೋನೇಷ್ಯಾ ಮುಂತಾದ ದೇಶಗಳಲ್ಲಿ ರಾಮನನ್ನು ಅತ್ಯಂತ ಶ್ರದ್ಧಾ–ಭಕ್ತಿಯಿಂದ ಪೂಜಿಸುತ್ತಾರೆ. ರಾಮನನ್ನು ಆದರ್ಶ ಪುರುಷ, ಮರ್ಯಾದಾ ಪುರುಷ, ಮರ್ಯಾದಾ ಪುರೋಷೋತ್ತಮ ಪಿತೃ ಪರಿಪಾಲಕ, ಪ್ರಜಾ ಪರಿಪಾಲಕ, ನಿಸ್ವಾರ್ಥ ಹೃದಯ ವೈಶಾಲ್ಯವುಳ್ಳವನು ಹೀಗೆ

ಭಾರತೀಯ ಸಂಸ್ಕೃತಿಯಲ್ಲಿ ರಾಮನ ಆದರ್ಶ ಗುಣಗಳು ಪರಂಪರೆಯಾಗಿ ಮುಂದುವರೆಯುತ್ತಿದೆ.

ಜೈನ ಮತ್ತು ಬೌದ್ಧ ಧರ್ಮದ ಪಠ್ಯಗಳಲ್ಲಿಯೂ ರಾಮನ ಬಗ್ಗೆ ಅನೇಕ ದಂತಕಥೆಗಳು ಕಂಡುಬರುತ್ತವೆ. ಜೈನ ಗ್ರಂಥಗಳು ರಾಮನನ್ನು ಅರತ್ತಮೂರು ಸಲಾಕ ಪುರುಷರಲ್ಲಿ ಎಂಟನೆಯ ಬಲಭದ್ರನೆಂದು ಉಲ್ಲೇಖಿಸಲಾಗಿದೆ. ಕನ್ನಡದ ಮೊಟ್ಟ ಮೊದಲ ಉಪಲಬ್ಧ ಕೃತಿಯಾದ ಶ್ರೀವಿಜಯನ ಕವಿರಾಜಮಾರ್ಗದಲ್ಲಿ ರಾಮಾಯಣದ ಒಂದು ಪದ್ಯವನ್ನು ಉಲ್ಲೇಖ ಮಾಡಿರುವುದನ್ನು ಕಾಣಬಹುದಾಗಿದೆ. ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಅಭಿನವ ಪಂಪನೆಂದು ಪ್ರಖ್ಯಾತಿಯಾಗಿರುವ ನಾಗಚಂದ್ರನ ಜೈನ ರಾಮಾಯಣವಾದ ರಾಮಚಂದ್ರಪುರಾಣ ಅತ್ಯಂತ ಮೌಲ್ಯಭರಿತ ಕೃತಿಯಾಗಿದೆ. ಈ ಕೃತಿಯಲ್ಲಿ ಪಾತ್ರಗಳನ್ನು ಕವಿ ತನ್ನ ಅನುಕೂಲಕ್ಕೆ ತಕ್ಕಂತೆ ಚಿತ್ರಿಸಿದ್ದಾನೆ. ಕನ್ನಡ ಸಾಹಿತ್ಯದಲ್ಲಿ ಪ್ರಧಾನವಾಗಿ 14 ಮತ್ತು 15ನೆಯ ಶತಮಾನಗಳಲ್ಲಿ ಜೀವಿಸಿದ್ದ ಕನ್ನಡದ ಶ್ರೇಷ್ಠ ಕವಿ ಕುಮಾರವ್ಯಾಸ ಕರ್ಣಾಟ ಭಾರತ ಕಥಾಮಂಜರಿಯಲ್ಲಿ ರಾಮಾಯಣವನ್ನು ಕುರಿತು, ಸೂಕ್ಷ್ಮವಾಗಿ ಈ ರೀತಿಹೇಳುತ್ತಾನೆ:

“ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ
ತಿಂತಿಣೀಯ ರಘುವರ ಚರಿತೆಯಲ್ಲಿ ಕಾಲಿಡಲು ತೆರಪಿಲ್ಲ
ಬಣಗು ಕವಿಗಳಲೆಕ್ಕಿಪನೆ ಸಾಕೆಣಿಸದಿರು ಶುಕರೂಪನಲ್ಲವೇ
ಕುಣಿಸಿನಗನೇ ಕವಿ ಕುಮಾರವ್ಯಾಸನುಳಿದವರ”

ರಾಮಾಯಣವನ್ನು ಬರೆದ ಅನೇಕ ಕವಿಗಳ ಭಾರವನ್ನು ಹೊರಲು ಕಷ್ಟವಾಗಿ, ಆದಿಶೇಷನು ತಿಣುಕುತ್ತಿದ್ದಾನೆ. ಶ್ರೀ ರಾಮನ ಚರಿತ್ರೆಯಲ್ಲಿ ಕಾಲಿಡುವುದಕ್ಕೂ ಜಾಗವಿಲ್ಲ. ಅಂದರೆ ಅನೇಕ ಕವಿಗಳು ರಾಮಾಯಣವನ್ನು ಕಾವ್ಯ ವಸ್ತುವನ್ನಾಗಿರಿಸಿ ರಚಿಸಿ, ಕಾವ್ಯಗಳ ಭಾರ ಹೆಚ್ಚಾಗಿ ಆದಿಶೇಷ ನಿಟ್ಟುಸಿರು ಬಿಡುತ್ತಿದ್ದಾನೆ. ರಾಮಾಯಣ ಎಂದರೆ ಒಂದೇ ಅಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಮೂನ್ನೂರಕ್ಕೂ ಅಧಿಕ ರಾಮಾಯಣಗಳಿವೆಯೆಂದು ಜನಪದ ಕಥೆಗಳ ಬೆನ್ನುಹತ್ತಿದ ಎ.ಕೆ. ರಾಮಾನುಜನ್ ಹೇಳಿದ್ದಾರೆ. ಹದಿನೈದನೆಯ ಶತಮಾನದಲ್ಲಿದ್ದ ಕವಿ ಕುಮಾರ ವಾಲ್ಮೀಕಿ, ವಾಲ್ಮೀಕಿ ರಾಮಾಯಣದಲ್ಲಿ ಮೊದಲ ಬಾರಿಗೆ ಕನ್ನಡಕ್ಕೆ ತಂದ. ಕುಮಾರವ್ಯಾಸ ಭಾರತ ಪ್ರೇರಣೆಯಾಗಿ ಗದುಗಿನ ನಾರಾಯಣಪ್ಪನ ಶೈಲಿಯಲ್ಲಿಯೇ ಕೃತಿಯ ರಚನೆಯನ್ನು ಭಾಮಿನೀ ಷಟ್ಪದಿಯಲ್ಲಿ ಮಾಡಿ ರಾಮಾವತಾರದ ಮಹತ್ವವನ್ನು ಹಾಗೂ ರಾಮಭಕ್ತಿಯ ಅಲೆಗಳನ್ನು ವಿಶಿಷ್ಟವಾಗಿ ಪಸರಿಸುವ ಉದ್ದೇಶದಿಂದ ಅತ್ಯಂತ ಸರಳವಾದ ಮತ್ತು

ಸುಲಲಿತವಾದ ಕಾವ್ಯವನ್ನು ರಚಿಸಿದ್ದಾನೆ. ತೊರವೆ ರಾಮಾಯಣದಲ್ಲಿ 112 ಸಂಧಿಗಳು ಅಲಂಕಾರಗಳನ್ನು 5079 ಶ್ಲೋಕಗಳಲ್ಲಿ ರಚಿಸಿದ್ದಾನೆ. ಈ ಕಾವ್ಯದ ಶ್ರೇಷ್ಠತೆ, ಕಾವ್ಯಗುಣಕ್ಕಿಂತ ಭಕ್ತಿಯ ಪರವಶತೆ ಹೆಚ್ಚಾಗಿ ಎದ್ದು ಕಾಣುತ್ತದೆ. ಕುಮಾರವ್ಯಾಸ ಭಾರತದ ಕರ್ತೃ, ಕುಮಾರವ್ಯಾಸನ ಮತ್ತು ಸಂಸ್ಕೃತದ ಆದಿಕವಿ ಕಾಳಿದಾಸನ ಪ್ರಭಾವಗಳು ಈ ಕಾವ್ಯದಲ್ಲಿ ಎದ್ದು ಕಾಣುತ್ತವೆ. ತೊರವೆ ರಾಮಾಯಣದಲ್ಲಿ ಎಲ್ಲಾ ಪಾತ್ರಗಳೂ ಕೂಡ ಸೂತ್ರಧಾರನಾದ ರಾಮನ ಕೈಯಲ್ಲಿ ಅವನು ಬಯಸಿದಂತೆ ನಡೆಯುತ್ತವೆ ಎಂಬುದನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾನೆ.

ಹೊಸಗನ್ನಡದ ಮುಂಗೋಳಿ ಎನಿಸಿಕೊಂಡಿರುವ ಮುದ್ದಣ್ಣ ಶ್ರೀರಾಮನನ್ನು ಕುರಿತು 03 ಕಾವ್ಯಗಳಲ್ಲಿ ಮನದುಂಬಿ ಬರೆದಿದ್ದಾನೆ. ಅದ್ಭುತ ರಾಮಾಯಣ, ಶ್ರೀರಾಮಪಟ್ಟಾಭಿಷೇಕ ಮತ್ತು ಶ್ರೀರಾಮಾಶ್ವಮೇಧ ಎಂಬ ಕೃತಿಗಳಲ್ಲಿ ಅತ್ಯಂತ ಸುಂದರವಾಗಿ ರಾಮನನ್ನು ಕುರಿತಾಗಿ ಕಥೆಗಳನ್ನು ನಿರೂಪಿಸಿದ್ದಾನೆ ಮುದ್ದಣ್ಣ. ವಿಶೇಷವಾಗಿ ಶ್ರೀರಾಮಾಶ್ವಮೇಧ ಕೃತಿಯಲ್ಲಿ ಮುದ್ದಣ್ಣ ಮನೋರಮೆಯರ ಸುಂದರವಾದ ನಿರೂಪಣೆಯಿದೆ. ಮಳೆಗಾಲದ ವರ್ಣನೆ ನಿರಂತರವಾಗಿ ಮಳೆ ಸುರಿಯುತ್ತಿದ್ದರಿಂದ, ಮನೆಯಲ್ಲಿ ಬೇಸರವಾಗಿದ್ದ ಮನೋರಮೆ ತನ್ನ ಗಂಡನ ಆಗಮನಕ್ಕಾಗಿ, ಅತ್ಯಂತ ಕಾತರದಿಂದ ಕಾಯುತ್ತಿರುವುದು, ಗಂಡನ ಆಗಮನದ ನಂತರ ಅತ್ಯಂತ ಪ್ರೀತಿಯಿಂದ ಉಪಚರಿಸಿ, ಪ್ರೀತಿಯ ಗಂಡನೊಂದಿಗೆ ಸಂವಾದ ಮಾಡುತ್ತಾ, ಒಂದು ಸುಂದರವಾದ ಕಥೆಯನ್ನು ಹೇಳುವಂತೆ, ಕೇಳುತ್ತಾಳೆ. ಮುದ್ದಣ್ಣ ಯಾವ ಕಥೆಯನ್ನು ಹೇಳಬೇಕೆಂದು ಕೇಳಿದಾಗ, ಯಾವುದಾದರೂ ಸುಂದರವಾದ ರಾಮನ ಕಥೆಯನ್ನು ಹೇಳು ಎಂದು, ಮನೋರಮೆ ಕೇಳುವುದು ಅತ್ಯಂತ ಸುಂದರವಾಗಿ ಮೂಡಿಬಂದಿದೆ.

ಕನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ, ಇಪ್ಪತ್ತನೆಯ ಶತಮಾನದಲ್ಲಿ ಕುವೆಂಪು ಅವರ ಶ್ರೀರಾಮಾಯಣದರ್ಶನಂ ಅತ್ಯಂತ ಮಹತ್ವದ ಮಹಾ ಕಾವ್ಯವಾಗಿದೆ. ಹೊಸಗನ್ನಡದ ಸಾಹಿತ್ಯದ ಕಾಲಘಟ್ಟದಲ್ಲಿ ಮಹಾಕಾವ್ಯಗಳ ಕಾಲ ಮುಗಿದೇ ಹೋಯಿತು ಎನ್ನುವ ಸಂದರ್ಭದಲ್ಲಿ ಕುವೆಂಪು ಅವರಿಂದ ರಚಿತವಾದ ಆಧುನಿಕ ಸಾಹಿತ್ಯದ ಲೋಕೋತ್ತರ ಕೃತಿ ಶ್ರೀರಾಮಾಯಣದರ್ಶನಂ , ಹಳೆಯ ಕಥೆ ಹೊಸ ಯುಗಧರ್ಮವನ್ನು ಮೈಗೂಡಿಸಿಕೊಂಡು, ಎಷ್ಟರ ಮಟ್ಟಿಗೆ ಹೊಸದಾಗಬಹುದೆಂಬುದಕ್ಕೆ ಈ ಮಹಾಕಾವ್ಯ ಉಜ್ವಲ ಉದಾಹರಣೆಯಾಗಿದೆ. ಜಗತ್ತಿನ ಶ್ರೇಷ್ಠ ಕವಿ ಜಾನ್ ಮಿಲ್ಟನ್‌ನ 'ದಿ ಪ್ಯಾರಡೈಸ್ಲಾಸ್ಟ್' ಆದ ಮೇಲೆ ಮಹಾಕಾವ್ಯಗಳು ಕಂಡು ಬರುವುದಿಲ್ಲ.

ಇಂತಹ ಕಾಲದಲ್ಲಿ ಕುವೆಂಪು ಅವರ ಮಹಾಕಾವ್ಯ ಜಗತ್ತಿನ ಶ್ರೇಷ್ಠ ಕೃತಿಯಾಗಿ ಕಂಡುಬರುತ್ತದೆ. ದೇ. ಜವರೇಗೌಡರು ರಾಷ್ಟ್ರಕವಿಯೊಂದಿಗೆ ಸಂದರ್ಶನ ಎಂಬ ಕಾರ್ಯಕ್ರಮದಲ್ಲಿ ಕುವೆಂಪುರವರನ್ನು ಶ್ರೀರಾಮಾಯಣದರ್ಶನಂ ಕುರಿತು ಸುದೀರ್ಘ ಸಂದರ್ಶನ ಮಾಡಿದಾಗ, ಇಪ್ಪತ್ತನೆಯ ಶತಮಾನದ ಆಧುನಿಕ ಸಾಹಿತ್ಯದ ಹೊಸ ಅಲೆಗಳಿಗೆ ಹೆಚ್ಚು ಹೊಂದಿಕೊಂಡಿರುವ ಕಾವ್ಯವಾಗಿದೆ. ಇಂತಹ ಸಂದರ್ಭದಲ್ಲಿ ಹೆಚ್ಚಿನ ಕವಿಗಳು ಪಾಶ್ಚಾತ್ಯರ ಪ್ರಭಾವದಿಂದ ಅತ್ಯಂತ ಕಡಿಮೆ ಸಮಯದಲ್ಲಿ ಓದಬಹುದಾದ ಭಾವಗೀತೆಗಳು, ಕಥೆಗಳು, ಸಣ್ಣಕಥೆಗಳು, ಕಾದಂಬರಿಗಳು, ವಿಮರ್ಶೆ ಮುಂತಾದವುಗಳಿಗೆ ಹೆಚ್ಚಿನ ಆಸಕ್ತಿ ತೋರುತ್ತಿರುವಾಗ, ನೀವು ರಾಮಾಯಣದರ್ಶನಂ ಎಂಬ ಮಹಾಕಾವ್ಯವನ್ನು ಬರೆಯಲು ಕಾರಣವೇನು? ಅಲ್ಲದೇ, ಜಗತ್ತಿನ ಶ್ರೇಷ್ಠ ವಿಮರ್ಶಕ ಎ.ಸಿ. ಬ್ರಾಡ್ಲೇ ಅವರು, ಮಹಾಕಾವ್ಯಗಳ ಯುಗ ಮುಗಿಯಿತು, ಇನ್ನೂ ಸಮಾಧಿ ಮಾಡುವುದು ಮಾತ್ರ ಬಾಕಿಯಿದೆ ಎನ್ನುತ್ತಾರೆ.. ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು? ಎಂದು ಜವರೇಗೌಡರು ಪ್ರಶ್ನಿಸುತ್ತಾರೆ ಈ ಮಾತಿಗೆ ಶ್ರೀಕುವೆಂಪುರವರು, ಈ ರೀತಿ ನುಡಿಯುತ್ತಾರೆ.

ನನಗೆ, ನನ್ನದೇ ಆದ ಆಲೋಚನೆಗಳಿವೆ, ನನ್ನ ಭಾವನೆಗಳಿಗೆ ನನ್ನದೇ ಆದದರ್ಶನವಿದೆ, ಅನುಭವಗಳಿವೆ, ಇವೆಲ್ಲದ್ದಕ್ಕೂ, ಹೊಂದಬಹುದಾದಂತಹ ವಸ್ತುವಿಗಾಗಿ ಹುಡುಕಾಟ ಮಾಡುತ್ತಿದ್ದಾನೆ. ಈ ಹುಡುಕಾಟ ಎಲ್ಲಿ ಅಂತ್ಯಗೊಂಡಿತೆಂದರೆ, ಸಾವಿರಾರು ವರ್ಷಗಳಿಂದ ಭಾರತೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಹಳ್ಳಿಯಲ್ಲಿರುವ ಪ್ರತಿಯೊಬ್ಬನಿಗೂ ರಾಮಾಯಣದ ಕಥೆ ಚೆನ್ನಾಗಿಯೇ ಗೊತ್ತು, ರಾಮಾಯಣದ ಪಾತ್ರಗಳು ಗೊತ್ತು, ಅಲ್ಲಿರುವ ಅನೇಕ ಪಾತ್ರಗಳನ್ನು ವರ್ತಮಾನದ ಸಂದರ್ಭಗಳಲ್ಲಿ ಹೆಸರುಗಳನ್ನು ಇಟ್ಟುಕೊಂಡು, ಪಾಲಿಸುತ್ತಿದ್ದಾರೆ. ಆದ್ದರಿಂದ ಭಾರತೀಯ ಸಂಸ್ಕೃತಿಯನ್ನು, ಅದರ ಪರಂಪರೆಯನ್ನು ಮತ್ತು ಸಂಸ್ಕೃತಿಯ ಸಾರವನ್ನು ಕಾವ್ಯದ ಮೂಲಕ ಹೇಳಬೇಕೆಂದರೆ, ರಾಮಾಯಣವೇ ಅತ್ಯಂತ ಶ್ರೇಷ್ಠವಾದ ವಸ್ತುವೆಂದು ನನಗೆ ಅರಿವಾಯಿತು. ಆದ್ದರಿಂದ ರಾಮಾಯಣವನ್ನು ಬರೆದೆ ಎಂದು ವಿವರಿಸುತ್ತಾರೆ. ಸಾಮಾನ್ಯವಾಗಿ ಕುವೆಂಪು ಅವರ ಪ್ರತಿಭೆಯ ಲಕ್ಷಣಗಳು ಮೂರು. ಒಂದು ಅದಮ್ಯ ನಿಸರ್ಗ ಪ್ರೀತಿ, ಎರಡು ವೈಚಾರಿಕತೆ, ಮೂರು: ಆಧ್ಯಾತ್ಮ. ಇವೆಲ್ಲವನ್ನೂ ಎಷ್ಟು ಸಾಧ್ಯವೋ ಅಷ್ಟು ರಾಮನನ್ನು ವರ್ಣಿಸುವ ವಿವಿಧ ಸಂದರ್ಭಗಳಲ್ಲಿ ಕಾವ್ಯದಲ್ಲಿ ಅಳವಡಿಸಿದ್ದಾರೆ. ಹೀಗೆ ಕುವೆಂಪು ಅವರ ಶ್ರೀರಾಮಾಯಣದರ್ಶನಂ ಮಹಾಕಾವ್ಯವನ್ನು ಅರ್ಥಮಾಡಿಕೊಳ್ಳಲು,

ಸರ್ವೋದಯ, ಸಮನ್ವಯ ಮತ್ತು ಪೂರ್ಣ ದೃಷ್ಟಿ ಇರಬೇಕು. ಈ ಕೃತಿಯಲ್ಲಿ ಒಟ್ಟು ನಾಲ್ಕು ಸಂಪುಟಗಳಿದ್ದು, ಐವತ್ತು ಸಂಚಿಕೆಗಳಿವೆ. ಆರಂಭದಲ್ಲಿ ಕುವೆಂಪುರವರು ವಾಲ್ಮೀಕಿ, ಗದುಗಿನ ನಾರಾಯಣಪ್ಪ ಮುಂತಾದವರನ್ನು ಮುಂತಾದವರನ್ನು ಸ್ಮರಿಸುತ್ತಾರೆ. ಈ ರೀತಿ ಭಾರತೀಯ ಸಂಸ್ಕೃತಿಯಲ್ಲಿ ಶ್ರೀರಾಮಾಯಣದರ್ಶನಂ ಕೃತಿಗೆ ಶ್ರೇಷ್ಠವಾದ ಸ್ಥಾನ ಇರವುದನ್ನು ಕಾಣಬಹುದಾಗಿದೆ. ಈ ಕೃತಿಯ ಮಹತ್ವದಿಂದ ಭಾರತೀಯ ಸಾಹಿತ್ಯದ ಅತ್ಯುನ್ನತ ಪ್ರಶಸ್ತಿಯಾದ ಜ್ಞಾನಪೀಠ ಪ್ರಶಸ್ತಿ ಲಭಿಸಿರುವುದು ಕನ್ನಡ ಸಾಹಿತ್ಯದ ಹೆಗ್ಗಳಿಕೆಯಾಗಿದೆ.

ಇದಲ್ಲದೇ ಜವರೇಗೌಡರ ಶ್ರೀರಾಮಾಯಣ ವಚನ ಚಂದ್ರಿಕೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಶ್ರೀರಾಮಾಯಣ ಪಟ್ಟಾಭಿಷೇಕ, ಹೆಚ್.ಎಸ್. ವೆಂಕಟೇಶಮೂರ್ತಿಯವರ ಶ್ರೀರಾಮ ಚಾರಣ, ವಿ. ಸೀತಾರಾಮಯ್ಯನವರ ವಾಲ್ಮೀಕಿ ರಾಮಾಯಣ, ಎಂ. ವೀರಪ್ಪಮೊಯ್ಲಿಯವರ ಶ್ರೀರಾಮಾಮಹಾನ್ವೇಷಣಂ ಮೊದಲಾದ ಕೃತಿಗಳು ಕನ್ನಡ ಸಾಹಿತ್ಯದ ಶ್ರೇಷ್ಠರಾಮಾಯಣದ ಕೃತಿಗಳಾಗಿವೆ. ಬಹುತೇಕ ಎಲ್ಲಾ ಕೃತಿಗಳಲ್ಲಿ ರಾಮನ ಆದರ್ಶ ವ್ಯಕ್ತಿತ್ವ, ಉದಾರತೆ, ದೂರದೃಷ್ಠಿ, ನಿಷ್ಪಕ್ಷ ಪಾತತೆ, ನಿಸ್ವಾರ್ಥ ಚಿಂತನೆ ಮೊದಲಾದ ಉತ್ಕೃಷ್ಟ ಗುಣಗಳಿಂದ ಕೂಡಿವೆ.

ಒಟ್ಟಾರೆಯಾಗಿ, ಮಾನವ ಕುಲವು ಎಂದೆಂದಿಗೂ ಗ್ರಹಿಸಬಹುದಾದ ಅತ್ಯುನ್ನತ ತತ್ತ್ವಶಾಸ್ತ್ರದಿಂದ ರಾಮಾಯಣವು ಗರ್ಭಧರಿಸಿದೆ. ದೈವಿಕ ಅಸ್ತಿತ್ವ ದನಿಯಮದ ಆಧಾರವಾಗಿರುವ ಸದಾಚಾರದ ಆಧಾರದ ಮೇಲೆ, ಜೀವನದ ಶ್ರೇಷ್ಠತೆಯನ್ನು ಪ್ರತಿಪಾದಿಸುವುದು ರಾಮಾಯಣದ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ಶ್ರೀರಾಮನು ಆದರ್ಶ ಮಗ, ಆದರ್ಶ ಸಹೋದರ, ಆದರ್ಶ ಪತಿ ಎಲ್ಲಕ್ಕಿಂತ ಮಿಗಿಲಾಗಿ, ಆದರ್ಶ ರಾಜನನ್ನು ಪ್ರತಿನಿಧಿಸುತ್ತಾನೆ. ಭಕ್ತಿಯೋಗ ಮತ್ತು ಕರ್ಮ ಮತ್ತು ಜ್ಞಾನವನ್ನು ರಾಮಾಯಣದ ಕೃತಿಗಳಲ್ಲಿ ಬೆಸದುಗೊಂಡಿವೆ. ವ್ಯಕ್ತಿಯ ಸಾಮಾಜಿಕ ಜೀವನವನ್ನು ಒತ್ತಿ ಹೇಳಲಾಗಿದೆ. ದೇವರ ಅನುಗ್ರಹವಿಲ್ಲದೇ ಯಾವುದೇ ವ್ಯಕ್ತಿ ಮತ್ತು ಯಾವುದೇ ಸಮಾಜವು ಪ್ರಗತಿ ಹೊಂದಲು ಸಾಧ್ಯವಿಲ್ಲ. ಶ್ರೀರಾಮನ ಸರ್ಕಾರವು ಆದರ್ಶ ಆಡಳಿತದ ಮಾದರಿಯಾಗಿದೆ. ರಾಮಾಯಣದ ನಾಯಕ ಶ್ರೀರಾಮ ಅಂತಹ ಚತುರ ಆಡಳಿತಗಾರ. ವಾಸ್ತವಿಕವಾಗಿ ನೋಡುವುದಾದರೆ, ರಾಮಾಯಣದಲ್ಲಿ ಪ್ರಸ್ತುತಪಡಿಸಲಾದ, ಆದರ್ಶ ರಾಜ್ಯದ ದೃಷ್ಠಿಕೋನವು ಪ್ರಾಚೀನ ಕಾಲದಿಂದ ಇಂದಿನವರೆಗೆ ಭಾರತೀಯ ರಾಜಕೀಯ ಚಿಂತನೆಯ ಪ್ರಮುಖ ಅಂಶವಾಗಿದೆ.

ಸಮಕಾಲೀನ ರಾಜಕೀಯ ಚಿಂತಕ ಮಹಾತ್ಮ ಗಾಂಧೀಯವರು ತಮ್ಮ ಆದರ್ಶ ರಾಜ್ಯದ ಪರಿಕಲ್ಪನೆಗೆ ರಾಮರಾಜ್ಯ ಎಂಬ ಪದವನ್ನು ಬಳಕೆ ಮಾಡಿದ್ದಾರೆ. ರಾಮಾಯಣದಲ್ಲಿ ರಾಜತ್ವದ ಪ್ರತಿಪಾದನೆಯು ಅಂತಿಮವಾಗಿ ಮಾನವತಾವಾದಿಯ ನಿಲುವುಗಳನ್ನು ಆಧರಿಸಿದೆ.

ಆಕರ ಗ್ರಂಥಗಳು:

1. ಕುಮಾರವ್ಯಾಸಭಾರತದ ಆದಿಪರ್ವ
2. ಕುವೆಂಪುಅವರ ಶ್ರೀರಾಮಾಯಣದರ್ಶನಂ
3. ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ
4. ಡಾ. ಬೈರಮಂಗಲ ರಾಮೇಗೌಡ ಅವರ ವಿಶೇಷ ಉಪನ್ಯಾಸಕ ಮಾಲಿಕೆ, ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು.

***

ಹೊಸ ತಲೆಮಾರಿನ ಕನ್ನಡ ಕತೆಗಳಲ್ಲಿ ಮನುಷ್ಯ ಸಂಬಂಧಗಳು

1
ಡಾ. ಕಿರಣಕುಮಾರ್ ಹೆಚ್.ಜಿ.
ಸಹಾಯಕ ಪ್ರಾಧ್ಯಾಪಕರು
ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯ
ಕೆ. ನಾರಾಯಣಪುರ, ಬೆಂಗಳೂರು

ಪ್ರಮುಖ ಪದಗಳು :
ಕಥಾ ಸಾಹಿತ್ಯ, ನವೋದಯ, ಮನುಷ್ಯ ಸಂಬಂಧ, ಊಳಿಗಮಾನ್ಯ, ಅಧಿಕಾರಶಾಹಿ

ಕನ್ನಡ ಕಥಾಲೋಕವು ಪ್ರಾಚೀನ ಕಾಲದಿಂದಲೂ ಅತ್ಯಂತ ಪ್ರಖರತೆಯನ್ನು, ವೈಶಿಷ್ಟ್ಯತೆಯನ್ನು ಹೊಂದಿವೆ. ಆರಂಭದ ಕಾಲಘಟ್ಟದಲ್ಲಿ ಧಾರ್ಮಿಕ ಹಿನ್ನೆಲೆಯಿಂದಲೂ, ಆನಂತರದಲ್ಲಿ ಹಾಸ್ಯ ಹಾಗೂ ನೈತಿಕ ಜವಾಬ್ದಾರಿಯನ್ನು ಹೊತ್ತು ಸಮಾಜವನ್ನು ರೂಪಿಸುವ ಹೊಣೆಗಾರಿಕೆಯ ನೆಲೆಯಲ್ಲಿ ಕಥಾಲೋಕವು ಮುನ್ನೆಲೆಗೆ ಬಂದಿತು. ಆದರೆ ಹಳಗನ್ನಡ ಕಾವ್ಯಗಳಲ್ಲಿ ಕತೆಯನ್ನು ಕೂಡ ಕಾವ್ಯದ ಹಿನ್ನೆಲೆಯಿಂದಲೇ ಪ್ರಸ್ತಾಪಿಸುವುದರಿಂದ ಕನ್ನಡ ಕಥಾಲೋಕವು ಕಾವ್ಯದೊಳಗೆ ಬೆಸೆದುಬಂದಿದ್ದನ್ನು ಕಡೆಗಣಿಸಲಾರದು. ಕಾವ್ಯಮೀಮಾಂಸೆಯ ದೃಷ್ಟಿಕೋನದಿಂದ ಇಲ್ಲಿ ಕತೆ ಎನ್ನುವುದು ಕಾವ್ಯದ ಮೇಲ್ಮೈಯನ್ನು ಹೊದ್ದುಕೊಂಡು ರೂಪುಗೊಂಡದ್ದು ಇತಿಹಾಸ. ಆದರೆ ಕಾವ್ಯಮೀಮಾಂಸೆಯ ಹಿನ್ನೆಲೆಯಿಂದ ಬೆಳೆದರೂ ಪ್ರತೀ ಹಳಗನ್ನಡದ ಕಾವ್ಯಗಳನ್ನು

ಸೂಕ್ಷ್ಮವಾಗಿ ಅವಲೋಕಿಸಿದಾಗ ಅಲ್ಲೆಲ್ಲ ಮುಖ್ಯವಾಗಿ ಕಥಾಹಂದರವೊಂದು ಮೈದಾಳಿರುವುದು ವಿಶೇಷ ಹಾಗೂ ವಿಸ್ಮಯ. ಈ ಹಿನ್ನೆಲೆಯೊಂದಿಗೆ ಮುಂದುವರೆದ ಕಥಾಸಾಹಿತ್ಯಕ್ಕೆ ಮುಖ್ಯ ಭಿತ್ತಿಯೊಂದು ದೊರೆತದ್ದು 18ನೇ ಶತಮಾನದ ಈಚೆಗೆ. ಬ್ರಿಟಿಷ್ ಆಳ್ವಿಕೆಯಲ್ಲಿ ಆರಂಭವಾದ ಇಂಗ್ಲಿಷ್ ಸಾಹಿತ್ಯವು ಅನುಸರಿಸಿ ಅನುಕರಿಸಿದ ಕನ್ನಡ ಸಾಹಿತ್ಯವು ಕೇವಲ ಕಾವ್ಯದ ವಸ್ತು, ಆಶಯ, ಶೈಲಿಯನ್ನು ಮಾತ್ರವಲ್ಲದೇ ಅದರ ಜೊತೆಜೊತೆಗೆ ಅಲ್ಲಿನ ಹೊಸ ಹೊಸ ಪ್ರಕಾರಗಳನ್ನು ಕಂಡುಕೊಂಡು ಅದನ್ನು ಕನ್ನಡ ಸಾಹಿತ್ಯಕ್ಕೆ ತಂದುಕೊಂಡದ್ದು ಇಂದಿನ ಕಥಾಸಾಹಿತ್ಯದ ಬೆಳವಣಿಗೆಗೆ ಹಾಕಿದ ಮುನ್ನುಡಿ ಎಂದರೂ ತಪ್ಪಾಗಲಾರದು.

'ಆಧುನಿಕ' ಕನ್ನಡ ಕಥಾಸಾಹಿತ್ಯವು ಅಂದರೆ ಇಂಗ್ಲಿಷ್ ಸಾಹಿತ್ಯದ ಪ್ರಭಾವ ಮತ್ತು ಪ್ರೇರಣೆಯಿಂದ ಬೆಳೆದುಬಂದ ಕಥಾಸಾಹಿತ್ಯವು ಈ ಹಿಂದಿನ ಕಥಾಸಾಹಿತ್ಯಕ್ಕಿಂತ ಭಿನ್ನವಾಗಿದೆ. ಇಲ್ಲಿ ಕಥಾಸಾಹಿತ್ಯಕ್ಕೆ ನಿರ್ದಿಷ್ಟವಾದ ಚೌಕಟ್ಟು ಹಾಗೂ ರೂಪುರೇಷೆಯೂ ಉಂಟಾಯಿತು. ನವೋದಯ ಪೂರ್ವ, ನವೋದಯ, ಪ್ರಗತಿಶೀಲ ಹಾಗೂ ದಲಿತ–ಬಂಡಾಯ ನಾಲ್ಕು ಕನ್ನಡದ ಕಾಲಘಟ್ಟಗಳಲ್ಲಿ ಆಯಾ ಸಂದರ್ಭದ ಅನಿವಾರ್ಯತೆಗಳಿಗೆ ಅನುಗುಣವಾಗಿ ಕನ್ನಡ ಕತೆಗಳು ರಚನೆಗೊಂಡಿವೆ. ಸಣ್ಣಕತೆಯ ವ್ಯಾಪ್ತಿಯು ಕೂಡ ಚಿಕ್ಕದು. ಒಂದೆರೆಡು ಗಂಟೆಗಳಲ್ಲಿ ಚಿಕ್ಕ ವಸ್ತುವಿನಿಂದ ಹಿಡಿದು ಅಗಾಧ ಗಂಭೀರವಾದ ವಸ್ತುವಿಷಯಗಳನ್ನು ಕೂಡ ಮುಟ್ಟಿಸಬಲ್ಲ ಶಕ್ತಿಯುತವಾದ ಪ್ರಕಾರವು ಕನ್ನಡ ಕಥಾಸಾಹಿತ್ಯಕ್ಕಿದೆ. ಕಥಾ ಸಂವಿಧಾನ, ಕತೆಗಳ ನಿರೂಪಣೆ, ಪಾತ್ರಗಳ ಬೆಳವಣಿಗೆ ಹೀಗೆ ನಾನಾ ವಿಷಯಗಳಲ್ಲಿ ಕನ್ನಡದ ಕತೆಗಳು ಸ್ವರೂಪದಲ್ಲಿ ಹಾಗೂ ದೃಷ್ಟಿಕೋನದಲ್ಲಿ ಭಿನ್ನವಾಗಿಯೂ ಹಾಗೂ ವೈವಿಧ್ಯಮಯವಾಗಿಯೂ ಬೆಳೆದಿವೆ. ವಸಾಹತುಶಾಹಿಯ ಶಿಕ್ಷಣದ ಪರಿಣಾಮಗಿ ಉಂಟಾದ ಭಿನ್ನ ಆಲೋಚನೆಗಳು, ವೈವಿಧ್ಯಮಯ ದೃಷ್ಟಿಕೋನದ ವಸ್ತು–ವಿಶೇಷತೆಯಿಂದ ಇಲ್ಲಿ ಕಥಾಸಾಹಿತ್ಯದ ರಚನೆಯೆ ವಿಭಿನ್ನವಾಗಿದೆ. ಭಾರತೀಯ ಸಾಂಪ್ರದಾಯಿಕ ಸಮಾಜದಲ್ಲಿದ್ದ ನೂರಾರು ರೀತಿಯ ಸಮಸ್ಯೆಗಳು, ಅಂಧಚಾರ, ಮೂಢನಂಬಿಕೆ, ಬಾಲ್ಯವಿವಾಹ, ವಿಧವಾ ವಿವಾಹ, ಜಾತಿ, ಮತ, ಧರ್ಮ, ಮೇಲು–ಕೀಳು, ಬಡವ–ಶ್ರೀಮಂತ ಹೀಗೆ ನಾನಾ ವಿವಿಧ ಸಮಸ್ಯೆಗಳನ್ನು ಕೇಂದ್ರಿಕರಿಸಿ ಕತೆಗಳು ಹುಟ್ಟಿಕೊಂಡವು. ಇಂತಹ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿ ಕನ್ನಡದ ಕತೆಗಳು ಅದನ್ನು ತಮ್ಮ ಕಥಾಸಾಹಿತ್ಯದ ಭಿತ್ತಿಯನ್ನಾಗಿ ರೂಪಿಸಿಕೊಂಡವು.

ಈ ಕಾಲಘಟ್ಟಗಳನ್ನು ಮೀರಿ 1990ರ ನಂತರದಲ್ಲಿನ ಸಾಹಿತ್ಯ ಕಾಲವನ್ನು ಯಾವುದೇ ನಿರ್ದಿಷ್ಟವಾದ ಹೆಸರಿನೊಂದಿಗೆ ಸೂಚಿಸಲು ಸಾಧ್ಯವಾಗಿಲ್ಲ. ಇಲ್ಲಿ ಅನೇಕ ರೀತಿಯ ಭಿನ್ನ ಭಿನ್ನ ವಸ್ತು, ವಿಷಯುಗಳು, ದೃಷ್ಟಿಕೋನ, ನಿರೂಪಣೆ ಹಾಗೂ ಪ್ರಾದೇಶಿಕವಾಗಿಯೂ ಕೂಡ ಲೇಖಕರು ಬರವಣಿಗೆಯಲ್ಲಿ ತೊಡಗಿರುವುದು, ಜೊತೆಗೆ ಕೇವಲ ಸಾಹಿತ್ಯದ ಆಸಕ್ತಿಯಿದ್ದವರೂ ಮಾತ್ರ ಕತೆಗಳನ್ನು ಈ ನಿರ್ದಿಷ್ಟ ಕಾಲಘಟ್ಟದಲ್ಲಿ ಬರವಣಿಗೆಗೆ ತೊಡಗಿಲ್ಲ. ಇಲ್ಲಿ ಬೇರೆ ಬೇರೆ ಜ್ಞಾನಶಿಸ್ತುಗಳಲ್ಲಿ ಅಧ್ಯಯನ ಮಾಡಿದ, ಬೇರೆ ಬೇರೆ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಅನೇಕ ಯುವಪೀಳಿಗೆಯ ಲೇಖಕರು ಕನ್ನಡ ಕಥಾಸಾಹಿತ್ಯದ ಸೃಷ್ಟಿಯಲ್ಲಿ ತೊಡಗಿರುವುದು ವಿಶೇಷ. ಆದ್ದರಿಂದ ಇಲ್ಲಿ ವಸ್ತು ಈ ಹಿಂದಿನ ಕಾಲಘಟ್ಟದಂತೆ ಏಕಮುಖವಾಗಿರದೆ ಅಂದರೆ ನವೋದಯ ಎಂದರೆ ಅಲ್ಲಿ ರಮ್ಯತೆ, ಪ್ರಗತಿಶೀಲ ಎಂದರೆ ಸಾಮಾಜಿಕ ಸಿದ್ಧಾಂತ, ನವ್ಯ ಎಂದರೆ ವ್ಯಕ್ತಿನಿಷ್ಠತೆ ಹಾಗೂ ದಲಿತ–ಬಂಡಾಯ ಎಂದರೆ ಇದುವರೆಗೂ ಸಮಾಜದಲ್ಲಿ ಎಲ್ಲಾ ಹಂತಗಳಿಂದಲೂ ಅಂಚಿಗೆ ತಳ್ಳಲ್ಪಟ್ಟಿದ್ದ ವರ್ಗದವರ ಒಳನೋಟಗಳನ್ನು ಸಾಹಿತ್ಯದಲ್ಲಿ ಹೊರತರುವ ಕೆಲಸವನ್ನು ಕಥಾಸಾಹಿತ್ಯವು ಮಾಡಿದೆ. ಆದರೆ ಈ ನಂತರದ ಕಥಾಸಾಹಿತ್ಯಕ್ಕೆ ಯಾವುದೇ ನಿರ್ದಿಷ್ಟ ಚಳುವಳಿಯ ಪ್ರಭಾವವಾಗಲೀ, ಪ್ರೇರಣೆಯಾಗಲೀ ಇಲ್ಲದಿರುವುದರಿಂದ ಅವರು ತಮ್ಮ ಅನುಭವಕ್ಕೆ ದಕ್ಕಿದ ವಸ್ತುವನ್ನು ಕೇಂದ್ರಿಕರಿಸಿಕೊಂಡು ಕತೆಗಳನ್ನು ಸೃಷ್ಟಿಸಲು ಪ್ರಾರಂಭಿಸಿದರು.

ಆಧುನಿಕ ಜಾಗತೀಕರಣದ ಈ ಸಂದರ್ಭದಲ್ಲಿ ಮನುಷ್ಯನಿಗೆ ಅನೇಕ ರೀತಿಯ ಸಮಸ್ಯೆಗಳು ಎದುರಾದವು. ಈ ಹಿಂದೆ ಇದ್ದ ಸಮಸ್ಯೆಗಳನ್ನು ಮೀರಿ ಅವನು ಏಕಾಂಗಿಯಾಗಿ ಬದುಕಲು ಯತ್ನಿಸುತ್ತಿದ್ದಾನೆ. ಇಂದಿನ ಆರ್ಥಿಕ ವ್ಯವಸ್ಥೆಯ ನೀತಿಗಳಿಂದಾಗಿ ಹಣವೇ ಮುಖ್ಯ ಎಂಬುದಾಗಿ ತಿಳಿದು ಅದರ ಬೆನ್ನು ಬಿದ್ದು ಮನುಷ್ಯ ಸಂಬಂಧಗಳನ್ನು ಕಳೆದುಕೊಳ್ಳುತ್ತಿದ್ದಾನೆ. ಜೊತೆಗೆ ಅವನ ಸ್ವಾರ್ಥ ಬದುಕು, ವೈಯಕ್ತಿಕ ಹಿತಾಸಕ್ತಿಗಳಿಂದ ಎಲ್ಲ ಸಂಬಂಧಗಳನ್ನು ಮೀರಿ ಒಬ್ಬನೇ ಬದುಕಲು ಎಣಗಾಡುತ್ತಿದ್ದಾನೆ. ಇಂತಹ ಸಂದರ್ಭದ ಸನ್ನಿವೇಶಗಳನ್ನು ಕನ್ನಡ ಕತೆಗಳು ಗುರ್ತಿಸಿವೆ. ಹಾಗೆ ಮನುಷ್ಯ ಸಂಬಂಧಗಳ ಜೊತೆಗೆ ಭಾವನಾತ್ಮಕ ಸಂಬಂಧಗಳನ್ನು ಅವನು ವಿಸ್ತರಿಸಿಕೊಂಡಿರುವುದನ್ನು ಇಲ್ಲಿ ಕಾಣಲು ಸಾಧ್ಯ. ಗಿಡ, ಮರ, ಪ್ರಾಣಿ ಹಾಗೂ ವಸ್ತುಗಳ ಮೇಲಿನ ಬಾಂಧವ್ಯವನ್ನು ಕೂಡ ಇಲ್ಲಿ ಸಂಬಂಧಗಳಂತೆ ನಿರ್ವಚಿಸಿಕೊಂಡಿದ್ದಾರೆ.

ಮಾನವ ತನ್ನ ಸಮಾಜದಲ್ಲಿ ಬದುಕಲು ಹೊರಟ ನಂತರದಲ್ಲಿ ಅವನಿಗೆ ಅನೇಕ ಸಮಸ್ಯೆಗಳು ಕಾಡಿರಬಹುದು. ಕುಟುಂಬ ಎಂಬ ಸಂಸ್ಥೆಯನ್ನು ಮಾಡಿಕೊಂಡ ನಂತರದಲ್ಲಿ ಅವನು ಸಮಾಜದಲ್ಲಿ ಬದುಕಬೇಕಾದಾಗ ಅವನಿಗೆ ಸ್ನೇಹಿತರು, ಬಂಧುಗಳು ಮುಂತಾದವರು ಅವನಿಗೆ ಅವಶ್ಯವೆನಿಸಿದೆ. ಜೊತೆಗೆ ಅವನು ವಾಸಿಸುತ್ತಿರುವ ಸುತ್ತಮುತ್ತಲಿನ ಪರಿಸರದ ಜೊತೆಗೂ ಭಾವನಾತ್ಮಕವಾದ ಸಂಬಂಧವನ್ನು ಬೆಳೆಸಿಕೊಂಡಿರುತ್ತಾನೆ. ಇಂತಹ ತನ್ನ ಅಕ್ಕಪಕ್ಕದ ನೆರೆಹೊರೆಯ ಸ್ನೇಹಿತರ, ಬಂಧುಗಳ, ಸಮಾಜದಲ್ಲಿರುವ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ನೋಡಬಹುದು. ಜನರು ತಮ್ಮ ಅಕ್ಕಪಕ್ಕದ ಜನರೊಂದಿಗೆ ಅನ್ಯೋನ್ಯತಾಭಾವವನ್ನು ಹೊಂದಿದ್ದರು. ಅಷ್ಟೆಂದ ಮಾತ್ರಕ್ಕೆ ಅವರಲ್ಲಿ ಮನುಷ್ಯ ಸಹಜ ಗುಣಗಳಿರಲಿಲ್ಲ ಎಂದಲ್ಲ. ಆದರೆ ಅವರು ಅದೆಲ್ಲದರ ಹೊರತಾಗಿಯೂ ಇಂದಿನ ಹೊತ್ತಿನಲ್ಲಿ ಕಾಣುತ್ತಿರುವ ಪರಿಣಾಮಗಳ ದೃಷ್ಟಿಯಿಂದ ಸಂಬಂಧಗಳನ್ನು ಹಾಳುಮಾಡಿಕೊಂಡಿರಲಿಲ್ಲ. ಅಲ್ಲದೇ ಸಂಬಂಧಗಳಲ್ಲಿ ಬಿರುಕುಗಳನ್ನು ಕಂಡರೆ ಅದನ್ನು ಹಬ್ಬಗಳಲ್ಲಿ, ಜಾತ್ರೆಗಳಲ್ಲಿ, ಉತ್ಸವಗಳಲ್ಲಿ ಅದನ್ನು ಮರೆಯುವ ಮತ್ತೆ ಒಂದಾಗುವ ಮನೋಧೋರಣೆಯನ್ನು ಹೊಂದಿರುತ್ತಿದ್ದರು. ಹೀಗಾಗಿ ಅಂದಿನ ಕಾಲದ ಜನರು ಒಗ್ಗಟ್ಟು, ಪ್ರೀತಿ, ಸಹಬಾಳ್ವೆಯ ಗುಣಗಳನ್ನು ಇಟ್ಟುಕೊಂಡಿದ್ದರು. ಆದರೆ ಇಂದು ಜಾಗತೀಕರಣ ಸಂದರ್ಭದಲ್ಲಿ ಮನುಷ್ಯರ ಸಂಬಂಧಗಳಲ್ಲಿ ಅಷ್ಟೇ ಅಲ್ಲದೇ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಕೂಡಾ ಅನೇಕ ಬದಲಾವಣೆಗಳು ಉಂಟಾಗುತ್ತಿವೆ. ಕುಟುಂಬಗಳನ್ನೇ ಮರೆತು ಯಾಂತ್ರಿಕ ಜೀವನದ ಭಾಗವಾಗಿ ಬದಲಾಗುತ್ತಿರುವ ಇಂತಹ ಅತಂತ್ರ ಪರಿಸ್ಥಿತಿಯಲ್ಲಿ ಮನುಷ್ಯ ಕುಟುಂಬೇತರ ಸಂಬಂಧಗಳಲ್ಲಿ ಕೂಡಾ ಅವನ ಬದಲಾವಣೆಗಳನ್ನು ಗುರ್ತಿಸುವುದು ಇಲ್ಲಿ ಮುಖ್ಯವಾಗುತ್ತದೆ.

ಜಯಂತ್ ಕಾಯ್ಕಿಣಿ ಅವರ 'ಕನ್ನಡಿ ಇಲ್ಲದ ಊರಲ್ಲಿ' ಕತೆಯು ಇಂತಹದ್ದೇ ಒಂದು ಪ್ರಸಂಗ ಬರುತ್ತದೆ. ಮುಖ್ಯ ಪಾತ್ರವಾದ ಸತ್ಯಜಿತನಿಗೆ ಮದುವೆಯಾಗಿಲ್ಲ ಎನ್ನುವ ಕಾರಣದಿಂದ ಇಡೀ ಸಮಾಜವೇ ಅವನನ್ನು ಇನ್ನೂ ಏಕೆ ಮದುವೆಯಾಗಿಲ್ಲ ಎಂಬ ಪ್ರಶ್ನೆಯೊಂದನ್ನು ಕೇಳುತ್ತಿರುತ್ತದೆ. ಈ ಜಂಜಾಟದಿಂದ ತಪ್ಪಿಸಿಕೊಳ್ಳಲು ಸತ್ಯಜಿತನಿಗೆ ಸಾಧ್ಯವಾಗದೇ ದಾರಿಯಲ್ಲಿ ಬರುತ್ತಿರುವಾಗ ದೂರದ ಊರುಗಳಿಗೆ ಹೋಗುವ ಖಾಸಗೀ ಲಕ್ಸುರಿ ಬಸ್ಸುಗಳ ನಿಲ್ದಾಣ ಕಾಣುತ್ತದೆ. ಅಲ್ಲಿ ಒಬ್ಬ ಹುಡುಗ ನಿಂತು ಬರುವ ಬಸ್ಸುಗಳಿಗೆ 'ಕಡಪಾ ಜಾತಾ ಹೈ ಕ್ಯಾ?' ಅಂತ ಕೇಳುತ್ತಿದ್ದ. ಆದರೆ ಬಸ್ಸಿನಲ್ಲಿದ್ದ ಕ್ಲೀನರ್ ಇವನನ್ನು ಅಪಹಾಸ್ಯ ಮಾಡುತ್ತಾ ಹಂಗಿಸುತ್ತಾ 'ಹೌದು

ಬರ್ತೀಯಾ? ಕಾಸಿದೆಯಾ? ಎಂದು ಗಹಗಹಿಸಿ ನಗುತ್ತಿದ್ದರು. "ಬಸ್ಸಿನ ಡ್ರೈವರು ಮಾತ್ರ ವಿಚಿತ್ರವಾದ ಲೇವಡಿಯ ಪ್ರಶ್ನೆ ಕೂಗಿದ–'ಇಲ್ಲಿ ಮಣ್ಣು ತಿಂತೀಯಲ್ಲಾ ಬಚ್ಚೂ... ನಿನ್ನ ಆ ಕಡಪಾದಲ್ಲಿ ಏನಿದೆ? ಚಿನ್ನದ ಅರಮನೆ? ಏನಿದೆ ನಿನ್ನ ಕಡಪಾದಲ್ಲಿ?' ಬಸ್ಸಿನ ಎಡಬದಿಯಲ್ಲಿ ಕೂತವರಿಂದ ಹಿಡಿದು ಫುಟಪಾತಿನ ಮೇಲೆ ನಿಂತವರೆಲ್ಲ ಈಗ ಆ ಪೋರನನ್ನೇ ನೋಡುತ್ತಿದ್ದರು. ಅವನು ತನ್ನ ಸರಳ ಗತ್ತಿನಲ್ಲೇ 'ಮೇರಾ ಬಾಪ್ ಹೈ... ವಹಾಂ' ಎಂದು ಕ್ಯಾನನ್ನು ಕಾಲಿಂದ ಮುಂದುವರೆಸಿಕೊಂಡು ಬೇರೆ ದಿಕ್ಕಿನಲ್ಲಿ ಹೊರಟುಹೋದ."[1]

ಅಂದರೆ ಇಲ್ಲಿ ಸತ್ಯಜಿತ ಆ ಹುಡುಗನನ್ನು ಕಂಡು ಅವನಲ್ಲಿರಬಹುದಾದ ಆ ಶಕ್ತಿಯನ್ನು ಹೀಗೆ ಗುರ್ತಿಸುತ್ತಾನೆ. ಅದನ್ನು ಅವನದೇ ಮಾತಿನಲ್ಲಿ ಅದನ್ನು ನೋಡುವುದಾದರೆ "ಬೀದಿ ಹುಡುಗನಾದರೇನಾಯಿತು. ನಿಮ್ಮೆಲ್ಲರಂತೆ ನನ್ನದೂ ಒಂದು ಊರು ಇದೆ, ಅಪ್ಪ ಇದ್ದಾನೆ ಎಂಬ ವರಸೆಯಲ್ಲಿದ್ದ 'ಮೇರಾ ಬಾಪ್ ಹೈ ವಹಾಂ' ಕೇಳಿ ಸತ್ಯಜಿತನ ಮೈ ಜುಮ್ಮೆಂದಿತು. ಎಲ್ಲಾ ಆಟಗಳನ್ನು ದಾಟಿಸುವಂತಿತ್ತು ಆ ಉತ್ತರ. ಇದು ಸುಳ್ಳಾಗಿದ್ದರೂ ದಾರುಣವಾಗಿತ್ತು. ನಿಜವಾಗಿದ್ದರೂ ದಾರುಣವಾಗಿತ್ತು. ಅಪ್ಪನನ್ನು ಎಂದೋ ಬಿಡುಗಡೆ ಮಾಡಿದಂತಿತ್ತು."[2] ಎನ್ನುವ ಮಾತುಗಳು ಕುಟುಂಬದ ಪರಿಕಲ್ಪನೆಯೇ ಇಲ್ಲದಿರುವ ಅನಾಥನೊಬ್ಬ ಇಂದಿನ ವರ್ತಮಾನದಲ್ಲಿ ತನ್ನ ಅಪ್ಪ ಅಲ್ಲಿರಬಹುದು ಎನ್ನುವ ಆತ್ಮವಿಶ್ವಾಸವನ್ನು ಹೊಂದಿ ಅದಕ್ಕಾಗಿ ಹೋರಾಡುವ ಇಡೀ ಸಮಾಜಕ್ಕೊಂದು ಪ್ರತಿಕ್ರಿಯೆಯನ್ನು ತೋರುವ ಮೂಲಕ ತಾನು ಕುಟುಂಬವಿಲ್ಲದ ಅನಾಥನಲ್ಲ ಎನ್ನುವುದನ್ನು ಕತೆಯ ಮೂಲಕ ವ್ಯಕ್ತಪಡಿಸಲಾಗಿದೆ.

ಅಲ್ಲದೇ ಅಮರೇಶ ನುಗಡೋಣಿ ಅವರ 'ಪಕ್ವಕ್ಕಲ್ಲದೇ ಪರಿಣಾಮ ಕಾಣಿಸದು' ಕತೆಯಲ್ಲಿ ಶರಭನಗೌಡ ತನ್ನ ಕುಟುಂಬವನ್ನು ಮಾತ್ರ ಕಳೆದುಕೊಂಡು ಒಂಟಿಯಾಗಿಲ್ಲ. ಅವನಿಗೆ ಇಡೀ ತನ್ನ ಬದುಕಿನ ಭಾಗಗಳನ್ನು ಅನೇಕ ಕಾರಣಗಳಿಂದ ಕಳೆದುಕೊಂಡು ಒಂಟಿಯಾಗಿದ್ದಾನೆ. ಅಲ್ಲದೇ ಕುಟುಂಬೇತರ ಸಂಬಂಧಗಳ ಮೌಲ್ಯವನ್ನು ಈ ಶರಭನಗೌಡ ಪಾತ್ರದ ಮೂಲಕ ಚಿತ್ರಿಸಲಾಗಿದೆ. ನಾವು ಕುಟುಂಬ ಅಥವಾ ಕುಟುಂಬೇತರ ಸಂಬಂಧಗಳು ಅಂದರೆ ಕೇವಲ ಹೆಂಡತಿ, ಮಕ್ಕಳು, ಅಕ್ಕಪಕ್ಕದವರು, ಬಂಧುಗಳು ಎಂದು ತಿಳಿದಿದ್ದೇವೆ. ಆದರೆ ಕತೆಯಲ್ಲಿ ಶರಭನಗೌಡ ಇಂತಹ ಸಂಬಂಧಗಳ ಜೊತೆಗೆ ಅವನು ಬಾಳಿ ಬದುಕುತ್ತಿರುವ ಮನೆ, ದನ, ಕರು, ಅವನ ಜಮೀನಿನಲ್ಲಿ ಕೆಲಸ ಮಾಡುವ ಆಳುಗಳೊಂದಿಗೆ ಅವನ ಜೀವನಕ್ರಮವಿದೆ.

ಆದರೆ ಆಧುನಿಕವಾದ ತಂತ್ರಜ್ಞಾನದಿಂದ ವ್ಯವಸಾಯ ಸಂಸ್ಕೃತಿ ಬದಲಾವಣೆಗೆ

ಒಳಪಡುತ್ತಿದೆ ಎಂಬುದನ್ನು ಕತೆಯ ಮೂಲಕ ನೊಡುವುದಾದರೆ "ಟ್ರ್ಯಾಕ್ಟರ್ ತಂದರು. ಎತ್ತುಗಳಿಂದ ವ್ಯವಸಾಯ ನಿಂತಿತು. ಮನೆಯಲ್ಲಿ ಎತ್ತುಗಳು, ದನಕರುಗಳು ಕಮ್ಮಿಯಾದವು. ಜೀತದಾಳುಗಳಲ್ಲಿ ಅನೇಕರನ್ನು ಕೈಬಿಟ್ಟರು. ಕಲ್ಲಿನ ದೊಡ್ಡಮನೆಗೆ ಕರೆಂಟು ಬಂತು"[3] ಎಂಬ ಮಾತುಗಳು ಬದಲಾವಣೆಯ ಮೂಲಕ ವಸ್ತು, ಪ್ರಾಣಿ, ಮನುಷ್ಯರೊಂದಿಗೆ ಸಂಬಂಧ ಹೊಂದಿದ್ದ ಗೌಡನು ಇಂತಹ ಅನುಭವಗಳಿಂದ ಏಕಾಂಗಿಯಾದೆ ಎನ್ನುವ ಮನೋಭಾವನೆಯನ್ನು ತೋರುತ್ತಾನೆ. ಅಲ್ಲದೇ ಗೌಡನಿಗೆ ಈ ನೆಲೆಯ ಯಾಂತ್ರಿಕವಾದ ಬದುಕು ಅವನಿಗೆ ಸರಿಹೊಂದುತ್ತಿರಲಿಲ್ಲ. "ಗೌಡರ ಸ್ವಭಾವವೆಂದರೆ ಜೀತದಾಳುಗಳ ಜತೆ ತಮಾಸೆ ಮಾಡಿಕೊಂಡು ಅಡ್ಡಾಡುವುದು ತಪ್ಪಿ ಹೋಯಿತು. ಮನೆಯಲ್ಲಿ ಕಣ್ಣುಕುಕ್ಕುವ ಲೈಟಿನ ಬೆಳಕು ಗೌಡನಿಗೆ ಆಗಿಬರಲಿಲ್ಲ."[4] ಇಂತಹ ಹಲವಾರು ಬದಲಾವಣೆಗಳು ಗೌಡನಿಗೆ ಏಕಾಂಗಿತನದ ಅನುಭವವನ್ನು ನೀಡಿದವು. ಹೆಂಡತಿ, ಮಕ್ಕಳನ್ನು ವಿದೇಶಕ್ಕೆ ಕಳುಹಿಸಿದಾಗ ಇರದ ಈ ರೀತಿಯ ಏಕಾಂಗಿಭಾವ ತನ್ನ ದಿನನಿತ್ಯದ ಬದುಕಿನಲ್ಲಾದ ಬದಲಾವಣೆಗಳಿಂದ ಅವನನ್ನು ಕಾಡಲು ಶುರುಮಾಡಿತು ಎನ್ನುವ ಮಾತುಗಳು ನಿಜಕ್ಕೂ ಕುಟುಂಬದಾಚೆಗೂ ಗೌಡನು ಬದುಕಿನಲ್ಲಿ ಹೊಂದಿದ್ದ ಸಂಬಂಧಗಳ ಪರಿಚಯವನ್ನು ಮತ್ತು ಅದು ಜೀವನಕ್ರಮವನ್ನು ತಿಳಿಸುವ ನೆಲೆಯಾಗಿ ವಿಸ್ತರಿಸಿಕೊಳ್ಳುತ್ತದೆ.

ಅಲ್ಲದೇ 'ತಮಂಧದ ಕೇಡು' ಕತೆಯಲ್ಲೂ ಸಹ ಇಂತಹದ್ದೇ ಆದ ಸನ್ನಿವೇಷವಿದೆ. ಆದರೆ ಅದರ ಸ್ವರೂಪ ಬೇರೆಯದ್ದಾಗಿದೆ. ಇಲ್ಲಿ ಗೌಡನಾದ ಶಾಂತಗೌಡ ತನ್ನ ಆಳಾದ ದುರುಗನ ಮೇಲೆ ಬಹಳ ಪ್ರೀತಿ, ವಿಶ್ವಾಸವನ್ನು ಇಟ್ಟುಕೊಂಡಿರುತ್ತಾನೆ. ಗೌಡನ ಜೀವನದ ಒಂದು ಭಾಗವಾದ ದುರುಗನು ತನ್ನ ಮಗನಾದ ಚೆನ್ನನು ಗೌಡನ ಮಗಳಾದ ಅಕ್ಕಮ್ಮನ ಬಗ್ಗೆ ತೋರುವ ಪ್ರೀತಿಯ ಮೂಲಕ ಸಂಬಂಧಗಳ ಹೊರತಾಗಿಯೂ ನಿಷ್ಠೆಯನ್ನು ತೋರಬೇಕೆಂದು ಚೆನ್ನನಿಂದ ದುರುಗ ಬಯಸುತ್ತಾನೆ. ಚೆನ್ನ ಮಾಡಿದ ಕುತ್ತು ಯಾರಿಗೆ ಉರುಲಾದೀತೋ ಎಂಬ ಭಯದಿಂದ ದುರುಗ ಹೆದರಿದ್ದ. ಅಲ್ಲದೇ ಈ ವಿಷಯವನ್ನು ಊರಿನ ಬಸಣ್ಣ ದೇವರ ಗುಡಿ ಪೂಜಾರಿ ಆದ ಬೂದೆಣ್ಣನು 'ಏನು ದುರುಗಣ್ಣ ನಿನ್ನ ಮಗ ದೊಡ್ಡದ್ಕ ಕೈಯಾಕ್ಯಾನ ಬುಡು' ಎಂದ ಮಾತುಗಳು ದುರುಗನನ್ನು ಚಿಂತೆಗೀಡು ಮಾಡಿತ್ತು.

ಶಾಂತಗೌಡನು ದುರುಗನ ಹೆಂಡತಿಯ ಮೇಲೆ ವ್ಯಾಮೋಹವನ್ನು ಜೊತೆಗೆ ಪ್ರೀತಿಯನ್ನು ಇಟ್ಟುಕೊಂಡಿದ್ದನು. ಆದರೆ ದುರುಗನ ಮಗ ಚೆನ್ನನು ಗೌಡನ ಮಗಳಾದ ಅಕ್ಕಮ್ಮನ ಮೇಲೆ ಪ್ರೀತಿಯನ್ನು ಹೊಂದಿದ್ದಾನೆ ಎನ್ನುವ ಕಾರಣಕ್ಕೆ ಗೌಡನು

ಆಲೋಚಿಸುವ ಕ್ರಮವೇ ಭಿನ್ನವಾಗಿದೆ. ಇಲ್ಲಿ ಜಾತಿಯ ಪ್ರಶ್ನೆ, ಆಸ್ತಿಯ ಅಂತರದ ಪ್ರಶ್ನೆ ಮುಖ್ಯವೆನಿಸಿಬಿಡುತ್ತದೆ. ಏಕೆಂದರೆ ಗೌಡನದು ಮೂಲತಃ ಊಳಿಗಮಾನ್ಯ ವ್ಯವಸ್ಥೆಯ ಅಧಿಕಾರಶಾಹಿ ತಂತ್ರ. ತನ್ನ ಆಳಾದ ದುರುಗನ ಹೆಂಡತಿಯನ್ನು ಗೌಡನು ವ್ಯಾಮೋಹಿಸಬಹುದಾದರೆ ಚೆನ್ನನು ತನ್ನ ಮಗಳನ್ನು ನೋಡಬಾರದೆಂದು ಪ್ರತಿಪಾದಿಸುವ ಗೌಡನ ಮನೋಭಾವನೆಯನ್ನು ಕತೆಯಲ್ಲಿ ಚಿತ್ರಿಸಲಾಗಿದೆ.

ಅಲ್ಲದೇ ಅವನು ದುರುಗನು ಪ್ರೀತಿಯಿಂದ ಬೆಳೆಸಿದ್ದ ಎರಡು ಮರಗಳನ್ನು ಕಡಿಸಲು ಕಟಗಿ ಅಡ್ಡೆ ರಸೂಲ್ಸಾಬುನ್ನ ಕರೆಸಿದ್ದ. ಅವನು ಈ ಎರಡೂ ಮರಗಳನ್ನು ಕಡಿದರೆ ನಿಮಗೆ ಮತ್ತು ನಿಮ್ಮಕ್ಕ ಗೌಡ್ಸಾನಿಗೆ ಎರಡು ಎತ್ತಿನ ಬಂಡಿಯಾಕ್ಕಾದ ಎನ್ನುತ್ತಾನೆ. ಈ ಎರಡೂ ಕಾರಣಗಳಿಗೂ ಗೌಡ ದುರುಗನ ಮೇಲೆ ತನ್ನ ಆಕ್ರಮಣಶೀಲತೆಯನ್ನು ಪ್ರದರ್ಶನ ಮಾಡುತ್ತಾನೆ. ಚೆನ್ನನ ಮೇಲೆ ಅವನಿಗಿರುವ ಕೋಪವನ್ನು ದುರುಗ ತನ್ನ ಹೆಂಡತಿ ಚಂದವ್ವನನ್ನು ನೆನಸಿಕೊಂಡು ಸುಮ್ಮನಾಗುತ್ತಿರುತ್ತಾನೆ. ಆದರೆ ಮರಗಳನ್ನು ಕಡಿಸಬೇಕೆಂದು ಗೌಡ ತಿಳಿಸಿದಾಗ ದುರುಗನಿಗೆ ತಾನು ಮತ್ತು ಚಂದವ್ವ ಪ್ರೀತಿಯಿಂದ ಸಾಕಿ ಬೆಳೆಸಿದ ಮರಗಳನ್ನು ಕಡಿಯುವುದು ಬೇಡ ಎಂದು ತಿಳಿಸುತ್ತಾನೆ. ಚಂದವ್ವನ ನೆನಪು ಈ ಮರಗಳ ಮೂಲಕ ಕಾಡುತ್ತಿರುತ್ತದೆ ಎನ್ನುವುದನ್ನು ಗೌಡನಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿ ಸೋಲುತ್ತಾನೆ. ಆದರೆ ಗೌಡನ ಸ್ವಭಾವವು ಇಲ್ಲೂ ಕೂಡ ವ್ಯಕ್ತವಾಗುತ್ತದೆ. ದುರುಗನ ಮಾತನ್ನು ಕೇಳದೇ ಅವನು ರಸೂಲ್‌ಸಾಬನಿಗೆ ಮರಗಳನ್ನು ಕಡಿಯಲು ಒಪ್ಪಿಗೆ ನೀಡುತ್ತಾನೆ.

ಈ ಎಲ್ಲಾ ಹಂತದಲ್ಲೂ ಗೌಡ ಏಕಾಂಗಿಯಾಗಿ ಉಳಿಯುವ ಪರಿಸ್ಥಿತಿಯನ್ನು ಹೀಗೆ ವಿವರಿಸುತ್ತಾನೆ. "ಹೆಣ್ತಿ ಹಂಪಮ್ಮ ನೆಪ್ಪಾದಳು; ಚಂದವ್ವ ಕಣ್ಣು ಮುಂದ ಬಂದಳು. ಅಕ್ಕ ರುದ್ರಮ್ಮ, ಮಗಳು ಕಣ್ಣ ಮುಂದೆ ನಿಂತರು. ಆದರೆ ಮನ್ಯಾಗ ಯಾರೂ ಇಲ್ಲ ಅಂಬದು ಅರುವಾದಾಗ 'ನಾನೆಂಗ ಇಷ್ಟುದಿನ ಒಂಟಿ ಬದುಕಿದೆ ಈ ಮನ್ಯಾಗ' ಅಂದುಕೊಂಡ'. ಶಾಂತಗೌಡುಗ ಈ ಪ್ರಶ್ನೆ ಎಂದೂ ಎದ್ದಿರಲಿಲ್ಲ."[5] ಗೌಡನು ತನ್ನ ಅಕ್ಕ ರುದ್ರಮ್ಮನ ಮನೆಗೆ ಬಂದಾಗ ಚೆನ್ನನನ್ನು ಕೊಲ್ಲಿಸುವ ನಿರ್ಧಾರವನ್ನು ಮಾಡಿರುತ್ತಾರೆ. ಈ ವಿಷಯವನ್ನು ಮುಟ್ಟಿಸುತ್ತಾಳೆ. ತುಂಗೆಯನ್ನು ದಾಟಲು ದುರುಗ ಗೌಡನನ್ನು ಎತ್ತಿಕೊಂಡವನು ಕಾಲಿಗೆ ನೀರು ಬಂದರೂ ಬಿಡದೇ ಮುನ್ನಡೆಯುತ್ತಾನೆ. ಗೌಡ ದುರುಗನನ್ನು ತಿರುಗಲೇ ಅಂದರೂ ಅದನ್ನು ಕೇಳದಿದ್ದಾಗ ದುರುಗನ ತಲೆಯನ್ನು ಜಜ್ಜುತ್ತಾನೆ. ಕಾಲು ಮುಗ್ಗರಿಸಿ ದುರುಗ ಕೆಳಗೆ ಬಿದ್ದು ಗೌಡನು ದುರಂತ ಅಂತ್ಯವನ್ನು ಕಾಣುತ್ತಾನೆ.

ಇಂತಹ ಕುಟುಂಬೇತರ ಸಂಬಂಧಗಳಲ್ಲಿ ನಡೆಯುವ ಅತಾಚುರ್ಯಗಳು,

ಅವಸರದ ನಿರ್ಧಾರಗಳು ಬದುಕನ್ನೇ ಕಿತ್ತುಕೊಳ್ಳುತ್ತದೆ ಎನ್ನುವುದಕ್ಕೆ 'ತಮಂಥದ ಕೇಡು' ಕತೆಯು ಉತ್ತಮ ಉದಾಹರಣೆಯಾಗಿದೆ. ಅಲ್ಲದೇ ಶಾಂತಗೌಡನು ದುರುಗನ ಹೆಂಡತಿಯ ವಿಷಯದಲ್ಲಿ ಮಾಡಬಹುದಾದ ಸ್ವಾತಂತ್ರ್ಯವನ್ನು ಶಾಂತಗೌಡನ ಆಳು ದುರುಗನು ಎನ್ನುವ ಕಾರಣಕ್ಕೆ ಗೌಡನು ಹೊಂದಿರುತ್ತಾನೆ. ಚಂದವ್ವಗೆ ಗೌಡತಿ ಎನ್ನುವುದನ್ನು ಬಿಟ್ಟು ಇನ್ನುಳಿದುದೆಲ್ಲ ಅಧಿಕಾರವು ಇದ್ದಿತು. ಆದರೆ ಇದೇ ದುರುಗನ ಮಗ ಚೆನ್ನನು ಒಂದೇ ಊರಿನ ತನ್ನ ತಂದೆ ಕೆಲಸ ಮಾಡುವ ಗೌಡನ ಮಗಳು ಎನ್ನುವ ಕಾರಣಕ್ಕೆ ಮಾತನಾಡಿಸಿದ್ದು ನಿಜಕ್ಕೂ ಕುಟುಂಬೇತರ ಸಂಬಂಧಗಳ ವಸ್ತುಸ್ಥಿತಿಯನ್ನು ನಮ್ಮೆದುರಿಗಿಡುತ್ತದೆ. ಊಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿ ಆಳುಗಳ ನಡುವಿನ ಸಂಬಂಧ ಎಷ್ಟೇ ಪ್ರೀತಿಯಿಂದ ಉಳ್ಳದ್ದು ಎಂದು ಪರಿಭಾವಿಸಬಹುದಾದರೂ ಅದರ ನಡುವಿನ ಕಂದರವೊಂದು ಇದ್ದೇ ಇರುತ್ತದೆ. ಸಂಬಂಧಗಳ ವಿಚಾರದಲ್ಲಿ ಗೌಡನು ಚಂದವ್ವನ ಮೇಲೆ ತಾಳುವ ನಿಲುವು ಅವನಿಗೆ ತಪ್ಪನ್ನು ತರದಿದ್ದಾಗ ಚೆನ್ನನ ಮೇಲೆ ಅವನ ಕ್ರೌರ್ಯ ನಿಜಕ್ಕೂ ಊಳಿಗಮಾನ್ಯದ ಆಂತರ್ಯವನ್ನು ಬಿಚ್ಚಿಡುತ್ತಿದೆ.

ವಸುಧೇಂದ್ರ ಅವರ 'ಕ್ಷಮೆಯಿಲ್ಲದೂರಿನಲಿ' ಕತೆಯು ಇಂದಿನ ದಿನಮಾನಗಳಲ್ಲಿ ನಡೆಯುತ್ತಿರುವ ಐಟಿ–ಬಿಟಿಯಲ್ಲಿ ಕೆಲಸ ಮಾಡುವಂತಹ ಜನರ ಕುರಿತುದಾಗಿದೆ. ಅವರು ಅಪಾರ್ಟ್‌ಮೆಂಟೊಂದರಲ್ಲಿ ವಾಸಿಸುತ್ತಿದ್ದರೂ ಕೂಡ ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಗುಣಗಳು ಇಲ್ಲದಾಗಿ, ಬದುಕನ್ನು ಜನರ ಜೊತೆ ಬೆರೆಯದೇ ಕೇವಲ ತಂತ್ರಜ್ಞಾನದ ಜೊತೆಯೇ ಕಾಲ ಕಳೆಯುವ ಮಾನವೀಯ ಮೌಲ್ಯಗಳನ್ನು ಮರೆತಿರುವ ಬಗೆಗೆ ಕತೆಯಲ್ಲಿ ಪ್ರಸ್ತಾಪಿಸುತ್ತಾರೆ. ಜಾಗತೀಕರಣದ ಪ್ರಭಾವದಿಂದಾಗಿ ಇಂದು ವ್ಯಕ್ತಿಗಳು ಪರಸ್ಪರ ತಮ್ಮನ್ನು ತಾವು ಇಂಟರ್‌ನೆಟ್, ಈ–ಮೇಲ್‌ಗಳ ಮೂಲಕವೇ ತಮ್ಮ ದಿನನಿತ್ಯದ ಕೆಲಸಗಳನ್ನು ಮಾಡಿಕೊಳ್ಳುತ್ತಾ ತಮ್ಮ ದೈನಂದಿನ ಘಟನೆಗಳನ್ನು ಅಂತರ್ಜಾಲದ ಮೂಲಕ ಚರ್ಚಿಸುವ ಕುರಿತು ಕತೆಯಲ್ಲಿ ಚಿತ್ರಿಸಿದ್ದಾರೆ. ಮನುಷ್ಯರು ಇಂದು ಮಾನವೀಯತೆಯನ್ನು ಮರೆತು ತಮ್ಮ ತೀರಾ ವೈಯಕ್ತಿಕವಾದ ವಿಚಾರಗಳನ್ನು ಸಹ ಈ ಇಂಟರ್‌ನೆಟ್‌ನ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚಿಸುವುದರ ಅಪಾಯವನ್ನು ಕತೆಯು ಹಿಡಿದಿಡುತ್ತದೆ.

ಮಗುವೊಂದು ಈಜುಕೊಳದಲ್ಲಿ ಒಂದ ಮಾಡಿಕೊಳ್ಳುವ ಘಟನೆಯನ್ನಿಟ್ಟುಕೊಂಡು ಶುರುವಾಗುವ ಈ ಚರ್ಚೆಯು ಒಂದು ಕುಟುಂಬದ ದುರಂತ್ಯ ಅಂತ್ಯವನ್ನು ಹೇಗೆ ಕಾಣಿಸುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ. ಕ್ಷಮೆಯನ್ನು ನೇರವಾಗಿಯೇ ಕೇಳಬಹುದಾಗಿದ್ದಂತಹ ಸಂದರ್ಭಗಳು ನಮಗಿದ್ದರೂ ಸಹ ಅದನ್ನು

ನಾಲ್ಕು ಜನರ ಮುಂದೆ ಪ್ರತಿಷ್ಠೆಯಂತೆ ಭಾವಿಸಿ ಇಂಟರ್‌ನೆಟ್ನ ಮೊರೆ ಹೋಗಿ ಅಲ್ಲಿ ಕ್ಷಮೆ ಕೇಳುವ ಪ್ರಸಂಗವು ಒಂದು ಕುಟುಂಬದ ಮಾನಸಿಕ ನೆಮ್ಮದಿಯನ್ನು ಹಾಳುಮಾಡುವ ಮೂಲಕ ಸುಜಾಳ ಗಂಡನಾದ ಶ್ರೀನಿವಾಸನ ಅಂತ್ಯವನ್ನು ಕಾಣುವ ಮಟ್ಟಕ್ಕೆ ಹೋಗುತ್ತದೆ. ಕತೆಯಲ್ಲಿ ಮುಖ್ಯವಾಗಿ ನಾವು ಕಾಣಬಹುದಾದ ಮುಖ್ಯ ಅಂಶವೆಂದರೆ ಇಂದಿನ ದಿನಗಳಲ್ಲಿ ತಂತ್ರಜ್ಞಾನದ ಬೆನ್ನುಹತ್ತಿ ಮನುಷ್ಯ ಸಂಬಂಧಗಳನ್ನು ಮರೆತು ಓಡುವ ಕುದುರೆಗಳಂತೆ ಪಯಣ ಮಾಡುತ್ತಿದ್ದೇವೆ. ಜನರ ಜೊತೆಗೆ ಬೆರೆಯದೇ ಏಕಾಂಗಿ ಭಾವವನ್ನು ಹೊಂದಿ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡು ಅಂತ್ಯವನ್ನು ನಾವೇ ಕಂಡುಕೊಳ್ಳುತ್ತಿದ್ದೇವೆ ಎಂಬುದನ್ನು ತಿಳಿಸುತ್ತದೆ.

ಸಾವಿನ ವಿಷಯವನ್ನು ತಿಳಿಸಿ ಸಹಾಯ ಮಾಡುವಂತೆ ಕೋರುವ ಸುಜಾಳ ಪರಿಸ್ಥಿತಿಯ ಅರಿವು ಆಕೃತಿ ಶರ್ಮಾಳಿಗೆ ಗೊತ್ತಿದ್ದರೂ ಅವಳ ಸಹಾಯಕ್ಕೆಂದು ಹೊರಟವಳು ಟೇಬಲ್ ಮೇಲಿದ್ದ ಕಂಪ್ಯೂಟರ್‌ನ್ನು ನೋಡಿ ಶ್ರೀನಿವಾಸನ್ ರೌಡಿಯಿಂದ ಸತ್ತ ವಿಷಯವನ್ನು ಯಾಹೂ ಐಡಿಯೊಳಗೆ ಲಾಗಿನ್ ಆಗಿ ಇಂಟರ್‌ನೆಟ್‌ನಲ್ಲಿ ಪ್ರಸ್ತಾಪಿಸಿ ಹೊರಡುತ್ತಾಳೆ. ಅದಕ್ಕೆ ಪ್ರತಿಕ್ರಿಯೆಯಾಗಿ ನಾಲ್ಕಾರು ಕಾಮೆಂಟ್‌ಗಳು ಬರುತ್ತವೆ ಎಂಬಲ್ಲಿ ಕತೆಯು ಮುಗಿಯುತ್ತದೆ. ಅಂದರೆ ಸಾವನ್ನು ಕೂಡ ನಾವು ಇಂದು ಗಂಭಿರವಾಗಿ ಪರಿಗಣಿಸುತ್ತಿಲ್ಲ ಎಂಬ ಸ್ಥಿತಿಯನ್ನು ಪ್ರಸ್ತುತ ಕತೆಯು ಜಾಗತೀಕರಣ ಪ್ರಭಾವವು ಇಂದು ಕುಟುಂಬದ ಹೊರತಾಗಿ ನೆರೆಹೊರೆಯವರೊಂದಿಗೆ ಇರಬೇಕಾದ ಸಹಜ ಗುಣಗಳನ್ನು ಕಳೆದುಕೊಳ್ಳುತ್ತಿರುವುದನ್ನು ಗುರುತಿಸುತ್ತದೆ.

ಎಚ್.ನಾಗವೇಣಿ ಅವರ 'ಮೀಯುವ ಆಟ' ಕತೆಯು ಕೂಡ ಇಂದು ಮನುಷ್ಯರನ್ನು ಮನುಷ್ಯರೇ ಬಳಸಿಕೊಳ್ಳುತ್ತಿದ್ದಾರೆ ಎಂದು ದೂರುವ ನೆಲೆಯನ್ನು ಕತೆಯು ತಿಳಿಸುತ್ತದೆ. ಆದರೆ ಇದೇ ಕಾಲಕ್ಕೆ ಮನುಷ್ಯ ಅಸಹಾಯಕನಾಗಿದ್ದು ಪ್ರಕೃತಿಯು ಕೂಡ ಅವನನ್ನು ಸಹಾಯ ಮಾಡಲಾಗದಂತೆ ತಡೆಯುತ್ತದೆ ಎನ್ನುವುದಕ್ಕೆ ಈ ಕತೆಯು ಉದಾಹರಣೆಯಾಗಿದೆ. ಇನ್ನೊಂದು ನೆಲೆಯಲ್ಲಿ ಕತೆಯ ಮುಖ್ಯ ಪಾತ್ರವಾದ ಖಾದ್ರಿಬ್ಯಾರಿಯು ತನ್ನ ಕೊನೆಯ ವಯಸ್ಸಿನಲ್ಲಿ 'ವಾತ' ರೋಗದಿಂದ ಬಳಲುತ್ತಿರುವವನು. ಇಡೀ ಕುಟುಂಬವನ್ನೆಲ್ಲಾ ಸಾಕಿ ಸಲಹಿ, ಇದ್ದ ಒಬ್ಬ ಮಗನಿಗೆ ತನ್ನ ವೃತ್ತಿಯನ್ನು ಹೇಳಿಕೊಟ್ಟು ಅವನಿಗೆ ಬದುಕನ್ನು ಕಲಿಸಿದನು. ಅವನಿಗೆ ನಫೀಸಮ್ಮ ಎನ್ನುವವಳೊಂದಿಗೆ ಮದುವೆ ಮಾಡಿದ ನಂತರ ಅವನಿಗೆ ತಂದೆ ಖಾದ್ರಿಬ್ಯಾರಿ ಮತ್ತು ತಾಯಿ ಮೈಮೂನಮ್ಮರ ಮೇಲೆ ಪ್ರೀತಿ ಕಡಿಮೆಯಾಗತೊಡಗಿತು. ಮೈಮೂನಮ್ಮ ಸತ್ತ ನಂತರ ಖಾದ್ರಿಬ್ಯಾರಿಯ ಜೀವನ ಅತ್ಯಂತ ಕಷ್ಟದಾಯಕವಾಯಿತು. ಅವನ

ವಾತ ರೋಗದಿಂದ ಅವನಿಗೆ ಬಿಸಿನೀರನ್ನು ಕಾಯಿಸಿ ಕೊಡದೇ ಅವನನ್ನು ತುಂಬಾ ನಿಷ್ಠುರವಾಗಿ ನಡೆಸಿಕೊಳ್ಳುತ್ತಿದ್ದಳು.

ಕುಟುಂಬದಲ್ಲಿ ಖಾದ್ರಿಬ್ಯಾರಿಗೆ ಇಂತಹ ಸ್ಥಿತಿಯಾದರೆ; ಇನ್ನೂ ಸಮಾಜದಲ್ಲಿ ಅವನಿಗೆ ಸಿಗುತ್ತಿದ್ದ ಬೆಲೆ ಬೇರೆಯೇ ರೀತಿಯದಾಗಿತ್ತು. ಇಂತಹ ಸಂದರ್ಭದಲ್ಲಿ ಅವನಿಗೆ ವೆಂಕಪ್ಪಶೆಟ್ಟರು ಮಗಳು ಸುಮತಿಯ ಬಾಣಂತನಕ್ಕಾಗಿ ಬಿಸಿನೀರು ಕಾಯಿಸಲು ಊರಿನಲ್ಲೆಲ್ಲಾ ಆಳಿಗಾಗಿ ಹುಡುಕಾಟವನ್ನು ನಡೆಸುತ್ತಿರುತ್ತಾರೆ. ಆಗ ವೆಂಕಪ್ಪಶೆಟ್ಟರು ಖಾದ್ರಿಬ್ಯಾರಿಯವರ ಮುಂದೆ ತಮ್ಮ ಅಳಲನ್ನು ತೋಡಿಕೊಂಡಾಗ “ಆ ಮಗು ಸುಮತಿ ಬೇರೆ ಅಲ್ಲ... ನಮ್ಮ ಮೊಮ್ಮಗಳು ಖೈರುನ್ನೀಸಾ ಬೇರೆ ಅಲ್ಲ...”[6] ಎಂದು ಬಿಸಿನೀರನ್ನು ಕಾಯಿಸಿಕೊಡಲು ಒಪ್ಪಿಕೊಳ್ಳುತ್ತಾರೆ. ಇದಕ್ಕಾಗಿ ವೆಂಕಟಪ್ಪಶೆಟ್ಟರು ಖಾದ್ರಿಬ್ಯಾರಿಯವರ ‘ವಾತ’ದ ಕಾಯಿಲೆಯನ್ನು ಅರಿತವರಾದ್ದರಿಂದ ಬಾಣಂತಿ ಮಿಂದಾದ ಮೇಲೆ ನೀವು ಬಿಸಿನೀರಲ್ಲಿ ಒಂದು ಗಡದ್ದ್ ಮಿಂದುಬಿಡಿ ಎಂದರು. ಇಡೀ ಕತೆಯಲ್ಲಿ ಖಾದ್ರಿಬ್ಯಾರಿಯು ತನ್ನ ರೋಗದ ಹಿನ್ನೆಲೆಯಿಂದ ಮಾತ್ರವೇ ಅಷ್ಟೇ ಅಲ್ಲದೇ ವೆಂಕಪ್ಪಶೆಟ್ಟಿಯ ಮಗಳು ಸುಮತಿಯ ಬಾಣಂತನಕ್ಕೆ ಬಿಸಿನೀರು ಕಾಯಿಸುವ ಪ್ರಸಂಗವು ಕುಟುಂಬೇತರ ಸಂಬಂಧಗಳಲ್ಲಿ ಜಾತಿ, ಧರ್ಮವನ್ನು ಮೀರಿದ ಅನ್ಯೋನ್ಯತೆಗಳಿರುತ್ತವೆ ಎನ್ನುವುದನ್ನು ಸೂಚಿಸುತ್ತಿದೆ. ವೆಂಕಪ್ಪಶೆಟ್ಟಿಯ ಹೆಂಡತಿ ಉಮ್ಮಕ್ಕಶೆಡ್ತಿ ಖಾದ್ರಿಬ್ಯಾರಿಯನ್ನು ಚೆನ್ನಾಗಿ ಬಲ್ಲವಳು. ಪ್ರೀತಿ, ವಿಶ್ವಾಸವನ್ನು ಹೊಂದಿದವಳು. ಆದಾಗ್ಯೂ ಖಾದ್ರಿಬ್ಯಾರಿಯು ದಿನಂಪ್ರತಿ ಬಂದು ನೀರನ್ನು ಕಾಯಿಸುತ್ತಿದ್ದರು. ಆದರೆ ಇದೇ ಸಂದರ್ಭದಲ್ಲಿ ಮಳೆಗಾಲವಿದ್ದಿತು. ಉಮ್ಮಕ್ಕಶೆಡ್ತಿಯು “ನೀರು ಉಗುರುಬಿಸಿ ಆದ್ರೆ ಸಾಕು ಸ್ಯಾಬೆರೇ... ಇವತ್ತೇ ಎಲ್ಲ ಮರಮಟ್ಟನ್ನು ಆ ಒಲೆಗಂಟಲಿಗೆ ತುರುಕಿದರೆ ನಾಳೆ ಅದರ ಬಾಯಿಗೆ ನಮ್ಮ ಕೈಕಾಲನ್ನು ತುರುಕಿಸುವುದಾ ಹೇಗೆ...?”[7] ಎನ್ನುವ ಮಾತನ್ನು ನಾನಾ ರೀತಿಗಳಲ್ಲಿ ಹೇಳುತ್ತಿದ್ದಳು. ಅಲ್ಲದೇ ಖಾದ್ರಿಬ್ಯಾರಿಯವರು ಇದನ್ನೇ ಮುಂದುವರಿಸಿದಾಗ “ಅಲ್ಲಾ... ಸ್ಯಾಬೆರೇ, ನಿಮ್ಗೆ ಎಷ್ಟೂಂತ ಹೇಳುದು ಮಾರಾಯ್ರೇ! ಇದು ಮಗು–ಬಾಣಂತಿ ಮೀಯುವ ನೀರಾ ಅಥವಾ ಹೆಣ ಮೀಯಿಸುವ ನೀರಾ...? ಒಲೆಬಾಯಿಗೆ ಕಸಕಡ್ಡಿ ತಳ್ಳುವುದಕ್ಕೆ ನಿಮಗ್ಗೆ ಒಂದು ತಲೆಬುಡ ಯಾವ್ದೂ ಇಲ್ಲಾಂತ ಕಾಣಿಸುತ್ತೆ...?”[8] ಎಂದಳು.

ಸುಮಾರು ನಲವತ್ತು ದಿನಗಳಿಂದ ಬಿಸಿನೀರು ಕಾಯಿಸಲು ಬರುತ್ತಿದ್ದ ಖಾದ್ರಿಬ್ಯಾರಿಯು ಉಮ್ಮಕ್ಕಶೆಡ್ತಿಯ ಇಂತಹ ಮಾತುಗಳನ್ನು ಕೇಳಿಸಿಕೊಂಡರೂ ಬೇಸರಗೊಳ್ಳದೇ ಸುಮತಿಗಾಗಿ ನೀರು ಕಾಯಿಸಲು ತನ್ನ ಮಗಳಂತೆ ಎಂದು ಭಾವಿಸಿ

ಬರುತ್ತಿದ್ದರು. ಆದರೆ ಇಷ್ಟು ದಿನ ಶೆಡ್ತಿಯು ಮಾತಾಡುತ್ತಿದ್ದರೂ ಇಂದಿನ ಮಾತುಗಳು ಮಾತ್ರ ಖಾದ್ರಿಬ್ಯಾರಿಯನ್ನು ಮಾನಸಿಕವಾಗಿ ನೋವುಂಟು ಮಾಡಿದ್ದವು. ಖಾದ್ರಿಬ್ಯಾರಿಯು ಬಿಸಿನೀರಿಗಾಗಿ ಸುಮತಿಗೆ ನೀರನ್ನು ಕಾಯಿಸಿಕೊಡಲು ಬರುತ್ತಿರಲಿಲ್ಲ. ಅವನು ತನ್ನ ಮೊಮ್ಮಗಳಂತೆ ಸುಮತಿಯನ್ನು ಭಾವಿಸಿ ಅವಳನ್ನು ತನ್ನ ಮಗಳೆಂದು ತನ್ನ ಕುಟುಂಬದಂತೆಯೇ ಭಾವಿಸಿದ್ದನು. ಆದರೆ ಉಮ್ಮಕ್ಕಶೆಡ್ತಿಯ ಮಾತುಗಳಿಗೂ ಕೂಡಾ ಪ್ರಕೃತಿಯ ನೈಸರ್ಗಿಕ ಕಾರಣಗಳನ್ನು ಕತೆಯಲ್ಲಿ ವಿವರಿಸಲಾಗಿದೆ. ಮಳೆಗಾಲದಲ್ಲಿ ಕಟ್ಟಿಗೆಗಳು ಸಿಗುವುದು ದುರ್ಭರ. ಇಂತಹ ಸಂದರ್ಭದಲ್ಲಿ ನಡೆಯುವ ಪ್ರಸಂಗದಲ್ಲಿ ಕುಟುಂಬೇತರವಾದರೂ ಸುಮತಿಗಾಗಿ ಮಿಡಿಯುವ ಖಾದ್ರಿಬ್ಯಾರಿಯ ಅಂತರಂಗವನ್ನು ಕತೆಯಲ್ಲಿ ಸೂಚಿಸುತ್ತದೆ. ಅಲ್ಲದೇ ಧರ್ಮದ ಹಂಗಿಲ್ಲದೇ ಎಲ್ಲರನ್ನು ಒಳಗೊಳ್ಳಬಹುದಾದ ಖಾದ್ರಿಬ್ಯಾರಿಯು ಸತ್ತ ನಂತರ ಇಡೀ ಊರೇ ಜಾತಿ ಬೇಧ ಮರೆತು ಕಣ್ಣೀರು ಸುರಿಸಿದರು ಎನ್ನುವುದು ಕುಟುಂಬೇತರ ಸಂಬಂಧಗಳನ್ನು ಕುರಿತು ತಿಳಿಸುತ್ತಿದೆ.

ಖಾದ್ರಿಬ್ಯಾರಿಯ ಸತ್ತ ದೇಹವನ್ನು ತೊಳೆಯಲು ಬಿಸಿನೀರನ್ನು ಕಾಯಿಸಲು ಹೆಣಗಾಡುತ್ತಿದ್ದ ಮೊಮ್ಮಕ್ಕಳನ್ನು ಕಂಡ ವೆಂಕಪ್ಪಶೆಟ್ಟರು ಹಸಿಕಟ್ಟಿಗೆಯಿಂದ ಇದು ಸಾಧ್ಯವಿಲ್ಲ ಎಂಬುದನ್ನರಿತು ಮನೆಗೆ ಹೋಗಿ ಕಟ್ಟಿಗೆಯನ್ನು ತಂದು ತಾನೆ ನೀರನ್ನು ಕಾಯಿಸಲು ತೊಡಗಿದ. ಇವನ ಜೊತೆ ಊರೇ ಸಹಕರಿಸಲು ಮುಂದಾಯಿತು ಅಲ್ಲದೇ ಕೊನೆಗೆ ಬಂದ ಉಮ್ಮಕ್ಕ ತನ್ನ ಮಾತನ್ನು ನೆನೆಸಿಕೊಂಡು ಕಣ್ಣೀರನ್ನು ಸುರಿಸಿದಳು. ಸಂಬಂಧಗಳನ್ನು ಉಳಿಸಿಕೊಳ್ಳುವ ಸಂದರ್ಭಗಳನ್ನು ಪ್ರಕೃತಿಯ ಹಲವು ವೈರುಧ್ಯಗಳಿಂದ ಕಳೆದುಕೊಳ್ಳುವ ಇಲ್ಲವೇ ಅವರ ಬಗ್ಗೆ ತಾತ್ಸಾರವನ್ನು ಮೂಡಿಸುವ ನೆಲೆಯು ಕತೆಯಲ್ಲಿದೆ. ಹಲವು ವೈರುಧ್ಯಗಳ ನಡುವೆಯೂ ಸಂಬಂಧಗಳನ್ನು ಉಳಿಸಿಕೊಳ್ಳುವುದಕ್ಕೆ ಪರದಾಡುವ ಖಾದ್ರಿಬ್ಯಾರಿಯ ಪಾತ್ರವೂ ಕತೆಯಲ್ಲಿ ಶಕ್ತವಾಗಿ ಮೂಡಿಬಂದಿದೆ. ಇದೇ ಸಂದರ್ಭದಲ್ಲಿ ಉಮ್ಮಕ್ಕನಿಗೆ ಖಾದ್ರಿಬ್ಯಾರಿಯ ಮೇಲೆ ಒಳ್ಳೆಯ ಅಭಿಪ್ರಾಯವಿದ್ದರೂ ಪ್ರಾಕೃತಿಕ ಸಮಸ್ಯೆ ಅವಳನ್ನು ಮಾತನಾಡುವಂತೆ ಮಾಡಿದ ನೆಲೆ ಕತೆಯಲ್ಲಿದೆ.

ಒಟ್ಟಿನಲ್ಲಿ ಕನ್ನಡದ ಕತೆಗಳು ಮನುಷ್ಯ ಸಂಬಂಧಗಳು ಇಂದು ಬದಲಾಗುತ್ತಿರುವ ನೆಲೆಗಳನ್ನು ಸ್ಪಷ್ಟವಾಗಿ ಗುರ್ತಿಸಿವೆ. ಎಲ್ಲ ಇದ್ದೂ ಏನೂ ಇಲ್ಲದಂತೆ ಅವನು ಏಕಾಂಗಿಯಾಗಿ ಉಳಿಯುವ, ಎಲ್ಲವನ್ನು ಕಳೆದುಕೊಂಡು ಮಾನಸಿಕವಾಗಿ ಹಿಂಸೆಯನ್ನು ಹೊಂದುವ ಚಿತ್ರಣವಾಗಿ ಕಂಡುಬರುತ್ತಾನೆ. ಅಲ್ಲದೇ ಅವನ

ಸಂಬಂಧಗಳು ಇದ್ದರೂ ಇಲ್ಲದೇ ಇದ್ದರೂ ಅವನ ಇಂದಿನ ವೈಯಕ್ತಿಕ ಹಿತಾಸಕ್ತಿಗಳು ಅನಿವಾರ್ಯ ಕಾರಣಕ್ಕೋ ಅಥವಾ ಸಂದರ್ಭಗಳಿಗೋ ಅವನು ಬದಲಾಗುತ್ತಿರುವುದನ್ನು ತೋರಿಸಿವೆ. ಅಲ್ಲದೇ ಅವರ ಸಂಬಂಧಗಳು ಕೇವಲ ಮನುಷ್ಯರೊಂದಿಗೆ ಮಾತ್ರವಲ್ಲದೇ; ಅದು ವಸ್ತುಗಳ ಜೊತೆಗೂ ಬೆರೆತಿರುವುದನ್ನು ಕತೆಗಾರರು ಗುರ್ತಿಸಿದ್ದಾರೆ. ಅವನು ಕಳೆದುಕೊಳ್ಳುತ್ತಿರುವುದಕ್ಕೆ ಪರೋಕ್ಷವಾಗಿ ಇಂದಿನ ಆಧುನಿಕ ಜಗತ್ತಿನ ಪ್ರಕ್ರಿಯೆಗಳು ಕಾರಣವಾಗುತ್ತಿರುವುದನ್ನು ಕತೆಗಾರರು ತಿಳಿಸಿದ್ದಾರೆ. ಶಿಕ್ಷಣ, ಉದ್ಯೋಗ, ಆರ್ಥಿಕತೆ, ಮೌಲ್ಯಗಳು ಇಂತಹ ಅಂಶಗಳನ್ನು ಕಳೆದುಕೊಳ್ಳುತ್ತಿರುವುದರಿಂದ ಅವನು ಸಮಾಜದಲ್ಲಿ ಏಕಾಂಗಿಯಾಗಿದ್ದಾನೆ. ಓಡುತ್ತಿರುವ ಇಂದಿನ ಆಧುನಿಕ ಯುಗದಲ್ಲಿ ಓಡಲು ಹರಸಾಹಸ ಪಡುತ್ತಾ ಕೊನೆಗೆ ಯಾರೂ ಇಲ್ಲದೇ ಪರದಾಡುವ ಸ್ಥಿತಿಯನ್ನು ಕತೆಗಳು ಕಾಣಿಸಿವೆ.

ಅಡಿ ಟಿಪ್ಪಣಿಗಳು

1. ಜಯಂತ ಕಾಯ್ಕಿಣಿ, ತೂಫಾನ್ ಮೇಲ್, ಪು.ಸಂ–57
2. ಅದೇ ಪುಸ್ತಕ, ಪು.ಸಂ–57
3. ಅಮರೇಶ ನುಗಡೋಣಿ, ಸವಾರಿ, ಪು.ಸಂ–197
4. ಅದೇ ಪುಸ್ತಕ, ಪು.ಸಂ–197
5. ಅಮರೇಶ ನುಗಡೋಣಿ, ತಮಂಧದ ಕೇಡು, ಪು.ಸಂ–13
6. ನಾಗವೇಣಿ.ಎಚ್., ಮೀಯುವ ಆಟ, ಪು.ಸಂ–62
7. ಅದೇ ಪುಸ್ತಕ, ಪು.ಸಂ–1
8. ಅದೇ ಪುಸ್ತಕ, ಪು.ಸಂ–2

ಪರಾಮರ್ಶನ ಗ್ರಂಥಗಳು

1. ಜಯಂತ್ ಕಾಯ್ಕಿಣಿ, ತೂಫಾನ್ ಮೇಲ್, ಅಂಕಿತ ಪುಸ್ತಕ, ಬೆಂಗಳೂರು, 2005
2. ಅಮರೇಶ ನುಗಡೋಣಿ, ಸವಾರಿ, ಅಂಕಿತ ಪುಸ್ತಕ, ಬೆಂಗಳೂರು, 2007.
3. ಅಮರೇಶ ನುಗಡೋಣಿ, ತಮಂಧದ ಕೇಡು, ಪಲ್ಲವ ಪ್ರಕಾಶನ, ಚನ್ನಪಟ್ಟಣ, 2016.
4. ನಾಗವೇಣಿ ಎಚ್, ಮೀಯುವ ಆಟ, ಲೋಹಿಯಾ ಪ್ರಕಾಶನ, ಬಳ್ಳಾರಿ, 2004.

***

ಬೇಂದ್ರೆಯವರ 'ತಾಯಿ' ಕವಿತೆಯ ವಿಶ್ಲೇಷಣೆ

1

ಅನಿತ ಕೆ.ವಿ., ಗೌರಿಬಿದನೂರು

ಸಹಾಯಕ ಪ್ರಾಧ್ಯಾಪಕರು

ಮೌಂಟ್ ಕಾರ್ಮೆಲ್ ಕಾಲೇಜು ಸ್ವಾಯತ್ತ

ವಸಂತನಗರ, ಬೆಂಗಳೂರು

ವಿಶ್ವಮಾತೆಯ ಗರ್ಭಕಮಲಜಾತ–
ಪರಾಗ–ಪರಮಾಣು ಕೀರ್ತಿ ನಾನು ।
ಭೂಮಿತಾಯಿಯ ಮೈಯ ಹಿಡಿಮಣ್ಣು
ಗುಡಿಗಟ್ಟಿ ನಿಂತಂಥ ಮೂರ್ತಿ ನಾನು ।

ಈ ಜಗತ್ತು ಹೆಣ್ಣಿಗೆ ನೀಡಿರುವ ಮಹತ್ವದ ಸ್ಥಾನದಲ್ಲಿ ತಾಯಿ ಸ್ಥಾನ ಅತ್ಯಮೂಲ್ಯವಾದುದು. ಪ್ರತಿ ಜೀವಿಯ ಕರುಳ ಸಂಬಂಧದಿಂದ ಉಂಟಾಗುವ ಸಂವೇದನೆ ತಾಯಿ ಎನ್ನುವ ಭಾವನೆ. ತಾಯಿಯೆಂದರೆ ದೇವರ ಮತ್ತೊಂದು ರೂಪ. ಭಗವಂತನನ್ನು ಅನುವಾದಿಸುವವಳು ತಾಯಿ ಎಂದು 'ಲಲಿತಾ ಸಿದ್ಧಬಸವಯ್ಯ' ಅವರು 'ಧನ್ಯವಾದಗಳು' ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ. ಸ್ತ್ರೀಯನ್ನು ಸ್ಫೂರ್ತಿ ಸೆಲೆ, ಜೀವ ಸೆಲೆ, ಒಲವಿನ ಸೆಲೆ, ತಾಳ್ಮೆಯ ಖನಿ, ಶಕ್ತಿ ಸ್ವರೂಪಿಣಿ ಎಂಬೆಲ್ಲಾ ನೆಲೆಗಳಲ್ಲಿ ಕಾಣಬಹುದಾಗಿದೆ. ಪ್ರಕೃತಿಯಲ್ಲಿ ಹೆಣ್ಣು – ಗಂಡು ಭಿನ್ನಲಿಂಗಗಳಲ್ಲಿ ಗುರುತಿಸಿಕೊಂಡಿದ್ದು

ಗುಣ ಸ್ವಭಾವಗಳಲ್ಲಿ ಭಿನ್ನರಾಗಿದ್ದಾರೆ. ಅದರಲ್ಲೂ ಹೆಣ್ಣು ವಿಶೇಷ ಶಕ್ತಿಯಿಂದ ಗುರುತಿಸಿಕೊಂಡಿದ್ದಾಳೆ. ನಮ್ಮ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯನ್ನು ಚೌಕಟ್ಟುಗಳಲ್ಲಿ ಬಂಧಿಸಿದ್ದರೂ, ಆಕೆ ಅಲ್ಲಿಯೂ ದೇವತೆ, ತಾಯಿ, ಶಿಕ್ಷಕಿ, ಪೋಷಕಿ, ರಕ್ಷಕಿಯಾಗಿ ಹಾಗೂ ಅನಂತ ಶಕ್ತಿಯಾಗಿ ಹೊರಹೊಮ್ಮುತ್ತಿದ್ದಾಳೆ.

ಪ್ರಕೃತಿಯ ಸೃಷ್ಟಿಯಲ್ಲಿ ಜೀವಕ್ಕೆ ಜೀವ ಕೊಡುವ ಪ್ರತಿಜೀವಿಯೂ ತಾಯ್ತನವನ್ನು ಹೊಂದಿರುತ್ತದೆ. ಸೃಷ್ಟಿತತ್ತ್ವದಲ್ಲೇ ತಾಯಿ ಗುಣಗಳು ಜೀವಿಗಳಲ್ಲಿ ತಂತಾನೆ ಒಳಗೊಂಡಿರುತ್ತವೆ. ಸ್ತ್ರೀತ್ವದ ತಾಯಿ ಬೇರು ತಾಯ್ತನ. ಪ್ರತಿಜೀವಿಯೂ ತಾನು ಹಡೆದ ಮಗುವನ್ನು ತನ್ನ ಜೀವದಂತೆ ಕಾಯುತ್ತದೆ. ಹಾಗಾಗಿಯೇ ತಾಯಿ ರಕ್ಷಕಿ. ತಾಯಿ ಸೃಷ್ಟಿಕರ್ತೆ. ತಾಯಿ ಜೀವಸೆಲೆ. ಈ ಜೀವ ಜಗತ್ತಿನ ಸಂವೇದನೆಗಳನ್ನು ಅತ್ಯಂತ ಆಪ್ತವಾಗಿ ಗಮನಿಸಿದ ಕವಿ ಬೇಂದ್ರೆ ತಮ್ಮ ಕವಿತೆಗಳಲ್ಲಿ ಮಾತೃತ್ವ ಭಾವಕ್ಕೆ ಜೀವ ತುಂಬಿದ್ದಾರೆ. ಹೃದಯಸ್ಪರ್ಶಿಯಾದ ಪದಪುಂಜಗಳಲ್ಲಿ ಅನುರೂಪವಾದ ತಾಯಿ ಪ್ರೇಮವನ್ನು ಮಿಡಿದಿದ್ದಾರೆ. ಅವರು ಆರಾಧಿಸಿದ ತಾಯಿ ಸ್ವರೂಪಗಳು ಭಾರತ ಮಾತೆ, ವಿಶ್ವಮಾತೆ, ಕನ್ನಡ ತಾಯಿ, ಭೂಮಿ ತಾಯಿ, ಹೆತ್ತತಾಯಿ. ಬೇಂದ್ರೆ ಅವರು ತನ್ನನ್ನು ತಾನು ಐದು ಐದೆಯರ ಪುತ್ರನೆಂದು ಭಾವಿಸುವಲ್ಲಿ ತಾಯಿಯನ್ನು ದೈವಿಕ ನೆಲೆಯಲ್ಲಿ ಕಂಡ ಭಾವನೆಗಳಿವೆ. ಈ ಎಲ್ಲ ತಾಯಂದಿರು ಪ್ರತಿಜೀವಿಗೂ ಸಲುಹುವ, ಉದ್ಧರಿಸುವ ನೆಲೆ ಬೇರೆಯಾದರೂ ಆ ಸ್ಥಾನದಲ್ಲಿ ಕಾಣುವ ಬಗೆ ಅನನ್ಯವಾದುದು. ಅವರ ಕವಿತೆಗಳಲ್ಲಿ ಮಾತೃ ಭಕ್ತಿರಸದ ಹರಿವಿದೆ. ಅವರ ‘ತಾಯಿ’, ‘ತಾಯಿಕೂಸು’, ‘ನಮನ’, ‘ನಾನು’, ‘ಮಲೆನಾಡ ಸೆರಗು’, ‘ನೆನಪು’, ‘ವಿಶ್ವಾವತಾರ’ ಕವಿತೆಗಳಲ್ಲಿ ಮಾತೃತ್ವದ ಅಭಿವ್ಯಕ್ತಿ ಕಾಣಬಹುದು. ಬೇಂದ್ರೆ ಅವರ ಮಾತುಗಳಲ್ಲೇ ಗಮನಿಸುವುದಾದರೆ “1.ದೇಹಕೊಟ್ಟ ತಾಯಿ, 2.ಮಾತು ಕಲಿಸಿದ ತಾಯಿ; 3.ಸಂಸ್ಕಾರ ಸಂಪನ್ನ ಮಾಡಿದ ತಾಯಿ; 4. ಭೂ ಮಂಡಲದ ಮಾನವೀಯತೆಯಲ್ಲಿ ನೆಲಸಿದ ತಾಯಿ; 5. ವಿಲ್ಲೋದರದಲ್ಲಿ ಧರಿಸಿದ ತಾಯಿ. ಈ ಐದು ಐದೆಯರು ದತ್ತನ ತಾಯಂದಿರು, ಇದು ’ಪಂಚ ಕೋಶ ಗರ್ಭ. ‘ಅಂಬಿಕೆ’ಯ ತೊಡೆ, ಹೊಟ್ಟೆ, ಎದೆ, ಕೊರಳು, ತುಟಿ, ಕಣ್ಣು ಒಂದೊಂದರಲ್ಲಿಯೂ ಈ ಮಹಾಸ್ಪರ್ಶವಿತ್ತು. ಆದರೆ ಆಕೆಯ ದೀಕ್ಷೆಯಲ್ಲಿ ಅನಂತ ಸಹನೆ ಇತ್ತು: ಯುಗ ಯುಗದ ನೋಂಪಿಯ ಕಂಪಿತ್ತು”. ಎಂದು ವಿವರಿಸುತ್ತಾರೆ. ಈ ರೀತಿ ಬೇಂದ್ರೆಯವರು ‘ಐವರು ತಾಯಂದಿರ’ ಕಲ್ಪನೆಯನ್ನು ಕಟ್ಟಿಕೊಡುತ್ತಾ, ತಮ್ಮ ಜೀವನ ಮತ್ತು ಕಾವ್ಯದಲ್ಲಿ ಮಾತೃತ್ವದ ಮಹತ್ವವನ್ನು

ಗುರುತಿಸುತ್ತಾರೆ. ಅವರ ಕಾವ್ಯನಾಮದಲ್ಲೂ 'ಅಂಬಿಕಾತನಯದತ್ತ' ಎಂದು ಗುರುತಿಸಿಕೊಂಡಿರುವುದು ತಾಯಿ ಪ್ರೀತಿಯ ಅನಂತತೆ ತೋರಿಸುತ್ತದೆ. ತಾಯ್ತನದ ಬಗೆಗೆ ಅವರಲ್ಲಿರುವ ಅಪಾರ ಗೌರವ ವ್ಯಕ್ತವಾಗಿದೆ. ಈ ಎಲ್ಲ ಚಿಂತನೆಗಳ ಹಿಂದೆ ಶ್ರೀಮಾತಾ ಮತ್ತು ಶ್ರೀ ಅರವಿಂದರ ಪ್ರಭಾವವೂ ಇದೆ. ಶ್ರೀಮಾತಾರ ಕುರಿತ ಕವಿತೆಗಳಲ್ಲಿ ಮಾತೃ ವಾತ್ಸಲ್ಯ ತುಂಬಿ ಹರಿದಿದೆ. ಬೇಂದ್ರೆ ಅವರ 'ನಾದಲೀಲೆ' ಕವನ ಸಂಕಲನದ 'ತಾಯಿ' ಕವಿತೆಯಲ್ಲಿ ತಾಯಿಯ ಮಹತ್ವವನ್ನು ಸಾರಿದ್ದಾರೆ.

ತಾಯಿಗಿಂತ ಯಾರು ಹೆಚ್ಚು?
ಬಸಿರ ಕುತ್ತ ಹೊತ್ತುಕೊಂಡು
ಬಯಕೆಗಾಗಿ ಕಾಡಿಬೇಡಿ
ಬೇನೆ ತಿಂದು ಬಳಲಿ ಹೆತ್ತು
ನಕ್ಕದರಾರೊ ನನ್ನ ಚೆನ್ನ?

ಬಸಿರು ಜೀವಕ್ಕೆ ಕುತ್ತು ಎಂದು ತಿಳಿದಿದ್ದರೂ, ಹೆಣ್ಣು ತಾಯ್ತನಕ್ಕಾಗಿ ಮಾಡುವ ದೊಡ್ಡ ಸಾಹಸ ಬಸಿರಾಗುವುದು ಎನ್ನಬಹುದು. ಜೀವ ತ್ಯಾಗ ಮಾಡುವ ಸಂದರ್ಭ ಒದಗಬಹುದಾದರೂ ಬಯಕೆಯ ಬೆನ್ನಲ್ಲೇ ಬೇನೆ ತಿಂದು ತನ್ನ ಕಂದನ ನಗುವಲ್ಲೇ ಎಲ್ಲಾ ನೋವು ಮರೆಯುತ್ತಾಳೆ. ಇದು ತಾಯಿ ಶಕ್ತಿ, ತಾಯಿ ಪ್ರೀತಿ. ಇಂತಹ ತಾಯಂದಿರು "ಮಕ್ಕಳಿರಲವ್ವ ಮನೆ ತುಂಬ" ಎಂದಿದ್ದಾರೆ. ಈ ನೆಲದ ಮಾನವ ಸಂಬಂಧಗಳ ಕುರಿತು ಮತ್ತು ಸಂವೇದನೆಗಳ ಕುರಿತು ಜನಪದ ಸಾಹಿತ್ಯದಲ್ಲಿ ವ್ಯಕ್ತವಾದ ಬಗೆಯನ್ನು ಗಮನಿಸಿದರೆ ತಾಯಿ ಮಕ್ಕಳ ಸಂಬಂಧ ಅತ್ಯಂತ ಶ್ರೇಷ್ಠವಾದುದು. ತಾಯಿಯನ್ನು ನೆನೆವ ಪರಿಯನ್ನು ಈ ಕವಿತೆಯಲ್ಲಿ ಗಮನಿಸಬಹುದು.

ಯಾರ ಇದ್ದರು ನನ್ನ ತಾಯಿವ್ವನ್ಹೋಲರ
ಸಾವಿರ ಕೊಳ್ಳಿ ಒಲಿಯಾಗ; ಇದ್ದರ
ಜ್ಯೋತಿ ನಿನ್ಯಾರು ಹೊಲ್ಯಾರ ।

ಹಾಗೆ ರಾಬರ್ಟ್ ಬ್ರಿಪಾಲ್ಸ್ ಅವರ "All good and bad luck comes from the mothers; it is they who, when angry, send diseases and death. Among the aboriginal populations of India, especially in the south where Aryan influence has been weakest, the native cults are represented by local deities who, with few

exceptions, are female and are frequently spoken of as, simply the Mother" ಈ ಮಾತುಗಳನ್ನು ಈ ಸಂದರ್ಭದಲ್ಲಿ ನೆನೆಯಬಹುದಾಗಿದೆ.

ಮಗನ ಸುಖಕ್ಕಾಗಿ ಕೊರಗಿ
ಮಗನ ಸುಖಕ್ಕಾಗಿ ಸೊರಗಿ
ಮಗುವೆ ಜಗವದಾಗಿ ತೋರಿ
ಬೆಳೆದರಾರೊ ನನ್ನ ಚೆನ್ನ?

ತಾಯಿ ಬದುಕೆಲ್ಲ ಮಕ್ಕಳ ಸುಖ–ದುಃಖಗಳಿಗೆ ಮೀಸಲು. ಮಕ್ಕಳೇ ತನ್ನ ಜಗತ್ತು ಎಂದು ಬದುಕುವವಳು ತಾಯಿ ಮಾತ್ರ. ತನ್ನ ಮಕ್ಕಳು ಬೆಳೆದು ಹಿರಿಯರಾದರೂ ಕೊನೆಯವರೆಗೂ ಮಕ್ಕಳಂತೆ ಭಾವಿಸಿ ಪೊರೆವವಳು, ಸದಾ ರಕ್ಷಣೆಯ ಧ್ಯಾನ ಮಾಡುವವಳು ತಾಯಿ. ಇಂತಹ ವಾತ್ಸಲ್ಯಮಯೀ, ತ್ಯಾಗಮಯೀ ಆದ ತಾಯಿ ಸೃಷ್ಟಿ ಅನನ್ಯ ಚೈತನ್ಯ ಜೀವಿ ಎಂಬ ಭಾವ ಬೇಂದ್ರೆ ಕವಿತೆಗಳಲ್ಲಿ ವ್ಯಕ್ತವಾಗುತ್ತದೆ. ಈ ತಾಯಿತನವನ್ನು ಅನುಭವಿಸಲು ಪ್ರಸ್ತುತ ಸಂದರ್ಭದಲ್ಲಿ ಪುರುಷರು ಕೂಡ ತಾಯಾಗಬಯಸಿದ್ದಾರೆಂದರೆ ತಾಯಿ ಮಹತ್ವ ವಿಶಿಷ್ಟವಾದುದು. ಹಾಗಾಗಿಯೇ ನಮ್ಮ ಹಿರಿಯರು 'ಮಾತೃ ದೇವೋಭವ' ಎಂದು ಭಾವಿಸಿದರು. ಜನಪದರ ಮಾತಿನಂತೆ "ಜ್ಯೋತಿಯೇ ಆಗು ಜಗಕೆಲ್ಲ" ಎಂದು ಆಶಿಸುವವಳು ತಾಯಿ.

ನಲ್ಲನಿತ್ತ ಮುತ್ತನೊಂದ
ತನ್ನ ಹಾಲಿನಿಂದ ತೊಳೆದು
ಕಣ್ಣಬೆಳಗಿನಿಂದ ಬೆಳಗಿ
ಕುಣಿದರಾರೋ ನನ್ನ ಚೆನ್ನ?

ಸೃಷ್ಟಿಕ್ರಿಯೆಗೆ ತಂದೆ–ತಾಯಿಯ ಕೊಡುಗೆ ಅನನ್ಯವಾದುದು. ಪ್ರಕೃತಿಯ ವರವಾಗಿ ಸಕಲ ಚರಚರಾ ಜೀವರಾಶೀಯಲ್ಲೂ ಈ ಕಾರ್ಯ ನಡೆಯುತ್ತದೆ. ಆಧುನಿಕ ಜಗತ್ತಿನಲ್ಲಿ ಬೆಳವಣಿಗೆಯ ಹಾದಿಯನ್ನು ಗಮನಿಸಿದರೆ ಪ್ರತಿದಿನವೂ ಜ್ಞಾನ ವಿಜ್ಞಾನ, ತಂತ್ರಜ್ಞಾನಕೆ ಹೊಸ ಹುಟ್ಟು. ವೈಜ್ಞಾನಿಕ ಕ್ಷೇತ್ರ ಬೆಳೆದಷ್ಟೂ ಸೃಷ್ಟಿಗೆ ತಾಯಿಯೂ ಅಗತ್ಯವಿಲ್ಲದಂತಹ ಆವಿಷ್ಕಾರಗಳಾಗಿವೆ. ಪ್ರಣಾಳಿಕೆಗಳೂ ಗರ್ಭಗೃಹಗಳಾಗುತ್ತಿವೆ. ಇಂದು ತಾಯ್ತನ ಸವಾಲಾಗಿಲ್ಲ. ಕೃತಕ ಗರ್ಭಧಾರಣೆಗಳು ನಡೆಯುತ್ತಿವೆ. ಪುರುಷನೂ ಹಡೆಯಲು ಮುಂದಾಗಿದ್ದಾನೆ. ಈ ವೈಪರೀತ್ಯಗಳು ಸಹಜವಾಗುತ್ತವೆ. ಆದರೆ ಇಂತಹ ಕೃತಕ ಗರ್ಭಗಳು ತಾಯಿಯಾಗಲಾರವು. ತಾಯಾದವಳು ನಲ್ಲನ ಕಾಣಿಕೆ ಪ್ರೀತಿಯ ಮುತ್ತನು ತನ್ನ ಎದೆಯ ಬಸಿದು ತೊಳೆಯುತ್ತಾಳೆ. ತನ್ನ ಜೀವದ ಕುಡಿಯನ್ನು

ಕಣ್ಣರೆಪ್ಪೆಯಲ್ಲಿಟ್ಟು ಸಲುಹಿ ನಲಿವವಳು ತಾಯಲ್ಲದೆ ಇನ್ಯಾರು ಸಂಭ್ರಮಿಸಲಾರರು ಎಂಬುದು ತಾಯಿಯಷ್ಟೇ ಸತ್ಯವಾದುದು. ಮಾನವಸಂಪತ್ತಿಗಾಗಿ ನಡೆದ ಸೃಷ್ಟಿಕಾರ್ಯ ಕಾಲಸರಿದಂತೆ ಹೊಸ ಸಂವೇದನೆಗಳೊಂದಿಗೆ ಬೆಳೆಯಿತು. ತಾಯ್ತನಕ್ಕೆ ಮಹತ್ವ ಬಂದಿತು. ಹೆತ್ತ ಕರುಳು, ಹೆತ್ತವ್ವ, ಹೆತ್ತಮ್ಮ ಎಂಬ ವಿಶೇಷ ಪದಗಳೇ ಭಾವನತ್ಮಕ ಪರಿಧಿಯೊಳಗೆ ಜನ್ಮತಾಳಿದವು. ಈ ಭಾವನಾತ್ಮಕ ಬಂಧವನ್ನು ಇಂದಿನ ಕೃತಕ ಸೃಷ್ಟಿಕಾರ್ಯಗಳಲ್ಲಿ ಕಾಣಲಾಗದು. ಪ್ರಸ್ತುತ ಸಮಾಜ ಮಾನವೀಯ ನೆಲೆಯಲ್ಲಿ ಸಂಬಂಧಗಳ ಮೌಲ್ಯಗಳನ್ನು ಅರಿಯಬೇಕಾದ ಅಗತ್ಯತೆಯನ್ನು ಬೇಂದ್ರೆ ಕವಿತೆಗಳು ಸಾರುತ್ತವೆ

ತಾಯಿಗಿಂತದಾರು ಹೆಚ್ಚು?
ಯಾರು ಹೆಚ್ಚು? ಯಾರು ಹೆಚ್ಚು?
ತಾಯಿಗಿಂತ ತಾಯ ಬಾಯಿ!
ಮಾತನಾಡಿ ಮುತ್ತನಿತ್ತು
ಹಾಡಿನೊಂದ ಗುಟುಕ ಕುಡಿಸಿ
ಕಥೆಯದೊಂದು ಕುಟುಕ ಹಾಕಿ
ನೋಡಲಾಡಲೋಡಕಲಿಸಿ
ಮಾತಿನೊಂದು ಮಂತ್ರದಿಂದ
ನಮ್ಮ ದೇಹಯಂತ್ರ ನಡೆಸಿ–
ದಂಥ ನಮ್ಮ ತಾಯ ಬಾಯ
ಆವಮಾತೆ ಜನ್ಮದಾತೆ!

'ತಾಯಿಗಿಂತ ಮಿಗಿಲಾದ ದೇವರಿಲ್ಲ' ಎಂಬ ಗಾದೆಯ ಹುಟ್ಟಿಗೆ ಕಾರಣ ತಾಯಿಯನ್ನು ಅನುವಾದಿಸುವ ಪರ್ಯಾಯ ಜೀವವಿಲ್ಲದ್ದನ್ನ ನಮ್ಮ ಜನ ಕಂಡುಕೊಂಡರು, ಆದ್ದರಿಂದಲೇ ಈ ಮಾತಿಗೆ ಮಹತ್ವ ಕಡಿಮೆ ಆಗಲಿಲ್ಲ. ತಾಯಿಗಿಂತ ತಾಯಿ ಮಾತು ಅತ್ಯಂತ ಮೌಲ್ಯಯುತವಾದದ್ದು. ದೈವ ಸ್ವರೂಪಿಯಾದ ತಾಯಿಯು ಪ್ರೀತಿಯಿಂದಲೇ 'ಮಾಂಸ ಪಿಂಡ ವಾಗಿದ್ದ ಮಗುವನ್ನು ಜ್ಞಾನದ ಪಿಂಡ'ವಾಗಿ ರೂಪಿಸುವಳು. ತನ್ನ ಮಡಿಲಲ್ಲಿ ಮಲಗಿಸಿಕೊಂಡು ಹಾರೈಕೆ ಮಾಡುವಾಗಿನಿಂದಲೇ ತನ್ನ ಪ್ರೀತಿ, ಮಮತೆಯ ಮಾತುಗಳಿಂದ ಒಂದೊಂದೇ ಮಾತು ಕಲಿಸುತ್ತಾಳೆ. ಹಾವಭಾವಗಳಲ್ಲಿ ಅರ್ಥೈಸುತ್ತಾಳೆ. ಮೃದುಮಾತಿನಲ್ಲಿ ಹೊರಡಹುದಾದ ಅನನ್ಯ ಪ್ರೀತಿ ಮಕ್ಕಳಿಗೆ ಚೈತನ್ಯ ತುಂಬುತ್ತದೆ. ಬುದ್ಧಿ ಶಕ್ತಿ, ಸಾಹಿತ್ಯ, ಮಾತು, ಸಂಗೀತ ಸಕಲ ಕಲೆಯು ತಾಯಿಯಿಂದ ದತ್ತವಾಗಿ

ಬಂದದ್ದು. ಹಾಗಾಗಿಯೇ ತಾಯಿ 'ಮಾತಾಂಗಿ' ಎನಿಸಿಕೊಂಡಳು. ಅನಂತ ಶಕ್ತಿಗಳ ಸಂಗಮ ತಾಯಿ. ತನ್ನ ಶಕ್ತಿಮೀರಿ ಸಕಲವನ್ನೂ ಪರಿಪೂರ್ಣತೆಯಿಂದ ಧಾರೆ ಎರೆಯುತ್ತಾಳೆ. ಮನೆ, ಮಕ್ಕಳು, ಸಮಾಜದ ಕಣ್ಣು ತಾಯಿ ಎಂಬ ಹೆಣ್ಣು.

ಒಡಲ ಹುಟ್ಟು ಮೊದಲ ಹುಟ್ಟು:
ಮಾತಿನಿಂದ ಪೂತನಾಗಿ
ತಾಯಿ ಮನದ ಮೂರ್ತಿಯಾಗಿ
ಅವಳ ಎದೆಯ ಗರ್ಭಗುಡಿಯ
ಮಿಣುಕು ಮಿಣುಕು ಬೆಳಕಿನಲ್ಲಿ
ಮುಗುಳ ನಗೆಯನರಳಿಸುತ್ತ
ನಿಲ್ಲಲಾಗ ಮರಳು ಹುಟ್ಟು
ಆ ಹುಟ್ಟೆ ನಮ್ಮ ಹುಟ್ಟು–
ನಮ್ಮ ಜನ್ಮದೆಲ್ಲ ಗುಟ್ಟು
ಅಲ್ಲಿ ಇಹುದು ಅಲ್ಲೆ ಇಹುದು.
ಮಾತಿಗಿಂತ ಏನು ಹೆಚ್ಚು?
ತಾಯ ಮಾತಿಗಿಂತ ತಾಯಿ
ಹೆಚ್ಚು ಎಂಬೆ ಅಯ್ಯೋ ಹುಚ್ಚೆ!
ಅವಳ ಪ್ರೀತಿ ಅವಳ ರೀತಿ
ಕಾಲು ಪಾಲು ಮೆಚ್ಚು ನಚ್ಚು
ಕಾಲು ಪಾಲು ಮೋಹ ಹುಚ್ಚು:
ಲಕ್ಷಕೋಟಿ ಅಬ್ಜವರ್ಷ–
ದಿಂದ ಬಂದ ಜನುಮದೊಂದೆ
ಕಡಲಿನೊಡಲ ಸಿಂಪಿನಂತೆ
ನನ್ನ ನಿನ್ನ ಅವನ ತಾಯಿ.

ಪ್ರಕೃತಿಯ ಸೃಷ್ಟಿಯಲ್ಲಿ ತಾಯಿ ಒಡಲ ಹುಟ್ಟೆ ಮನುಷ್ಯನ ಮೊದಲ ಹುಟ್ಟು ಎಂದಿದ್ದಾರೆ. ಒಡಲು ಮಾನವ ಮತ್ತು ಪ್ರಾಣಿಗಳ ಭೌತಿಕ ಚೌಕಟ್ಟು. ಒಟ್ಟಾರೆ ಮಾನವ ಜೀವಿಯ ರಚನೆಯನ್ನು ಒಡಲು ಎನ್ನುವರು. ಈ ಒಡಲನ್ನು ಮಾನವರು ಭಾವನಾತ್ಮಕವಾಗಿ ಮಹತ್ವದ್ದಾಗಿ ಕಂಡಿದ್ದಾರೆ. ಈ ಹುಟ್ಟು ಸಾವು ಮನುಷ್ಯ ಜೀವನದ ಮಹತ್ವದ ಘಟ್ಟಗಳಾಗಿವೆ. ಹುಟ್ಟಿನ ನಂತರ ಮಗು ಮಾತು ಕಲಿತು, ಪೂತನಾಗಿ–ಶುದ್ಧನಾಗಿ

ಅಂದರೆ ಪಕ್ವತೆಯನ್ನು ಪಡೆದುಕೊಂಡು ತಾಯ ಎದೆ ಬೆಳಕಿನಲ್ಲಿ ವ್ಯಕ್ತಿತ್ವ ರೂಪಿಸಿಕೊಂಡು ನಿಂತಾಗ ಮರುಹುಟ್ಟು ಪಡೆಯುತ್ತಾನೆ. ಈ ಹುಟ್ಟು ನಿಜದ ಹುಟ್ಟು ಎಂದಿದ್ದಾರೆ ಕವಿ ಬೇಂದ್ರೆ. ತಾಯಿಂದ ಯಾವ ಸಂಸ್ಕಾರ ಮೈಗೂಡಿಸಿಕೊಂಡು ಬೆಳೆವರೋ ಆ ಗುಣಗಳೇ ಜೀವನ ಪೂರ್ಣ ಅಭಿವ್ಯಕ್ತಗೊಳ್ಳುತ್ತವೆ. ಮಾನವ ಅನೇಕ ಜೀವ ಕೋಟಿಗಳನು ದಾಟಿ ಮನುಷ್ಯನಾಗಿ ಹುಟ್ಟುತ್ತಾನೆ. ಕಡಲ ಶಂಖದಂತೆ ತಾಯ ಒಲುಮೆ ಎಂಬ ಗರ್ಭಕವಚದಲ್ಲಿ ಸುರಕ್ಷಿತವಾಗಿ ಬೆಳೆದುನಿಲ್ಲುತ್ತಾನೆ ಎಂಬುದನ್ನು ಅತ್ಯಂತ ಅರ್ಥಪೂರ್ಣವಾಗಿ ಅರ್ಥೈಸಿದ್ದಾರೆ. ಪ್ರಸ್ತುತ ಸಮಾಜದಲ್ಲಿ ತಾಯಿ– ತಂದೆ ಮಕ್ಕಳನ್ನು ಬೆಳೆಸುವ ಪರಿ ಗಮನಿಸಿದರೆ ಎಲ್ಲರೂ ಯಂತ್ರನಾಗರೀಕತೆಗೆ ಬದುಕನ್ನು ಒಗ್ಗಿಸಿಕೊಂಡು ದುಡಿವ ಯಂತ್ರಗಳಂತೆ ತಯಾರಿಸುತ್ತಿದ್ದಾರೆ ಎನಿಸುತ್ತಿದೆ. ಮನುಷ್ಯ ತನ್ನ ಹುಟ್ಟಿಗೊಂದು ಸಾರ್ಥಕತೆ ಕಂಡುಕೊಳ್ಳುವುದಕ್ಕಿಂತ ಭೋಗಮುಖೀ ಸಮಾಜದ ಭಾಗವಾಗಿ ಬದುಕುತ್ತಿದ್ದಾರೆನ್ನಬಹುದು. 'ಆರ್. ಸುಧೀಂದ್ರಕುಮಾರ್' ಅವರ 'ಕನ್ನಡದ ಕಂದ ಓದುವುದು ಏನನ್ನ?' ಈ ಲೇಖನದ ಕೆಲವು ಮಾತು ಈ ಸಂದರ್ಭಕ್ಕೆ ನೆನೆಯುವುದು ಸೂಕ್ತ ಎನಿಸುತ್ತಿದೆ. "ಇಂದು ನಗರದಲ್ಲಿ ತಂಗಿರುವವರ ಪೈಕಿ ಅರ್ಧದಷ್ಟು ಮಂದಿ ಹಳ್ಳಿಯಿಂದ ಬಂದವರು; ಹಳ್ಳಿಂಯೊಂದಿಗೆ ಸಂಪರ್ಕವನ್ನು ಮೇಲೆ ಉಳಿಸಿಕೊಂಡವರಿದ್ದಾರೆ. ಹಾಗೆ ನಗರಕ್ಕೆ ಬಂದವರು ಇಲ್ಲಿ ಮಕ್ಕಳನ್ನು ಬೆಳೆಸುವುದಕ್ಕಿಂತ ತಯಾರಿಕೆಗೆ ಮಾರಿಹೋಗುತ್ತಿದ್ದಾರೆ. ತಯಾರಿಯನ್ನು ಈ ಮಕ್ಕಳು ಎಲ್ಲಿ? ಹೇಗೆ? ಎಷ್ಟು ಹೊತ್ತು? ಯಾವ ದಿನ? ಯಾರ ಬಳಿ? ಅದಕ್ಕಾಗಿ ವ್ಯಯವಾಗುವ ಹಣವೆಷ್ಟು ಎಂಬುದೆಲ್ಲ ಆವತ್ತಿನ ದಿನಪತ್ರಿಕೆಯ ಕೊನೆಯ ಪುಟದಲ್ಲಿ, ಟೀವಿಯಲ್ಲಿ, ಎಫ್‌ಎಂನಲ್ಲಿ, ಒಂದು ಗಂಟೆಗೊಮ್ಮೆ ಬರುವ ಮೊಬೈಲ್ ಸಂದೇಶದಲ್ಲಿ, ಇಂಟರ್‌ನೆಟ್‌ನಲ್ಲಿ, ಇತರೆ ಬ್ಲಾಗ್‌ಗಳಲ್ಲಿ ಸಿಗುತ್ತದೆ. ಅಷ್ಟರಮಟ್ಟಿಗೆ ಇಲ್ಲಿ ಎಲ್ಲವೂ ಕೈಯಳತೆಯಲ್ಲಿದೆ. ಇಲ್ಲಿಗೆ ಮಕ್ಕಳನ್ನು ನೀಟಾಗಿ ಡ್ರೆಸ್ ಮಾಡಿ ಗಾಡಿ ಮೇಲೆ ಕಳುಹಿಸುವ ಮನೆಯ ಪಾಡು ವಿಚಿತ್ರಗಾಥೆಯಲ್ಲಿ ಸುತ್ತಿಕೊಂಡಿದೆ". ಈ ವಿಚಾರವನ್ನು ಗಮನಿಸಿದರೆ ಬೇಂದ್ರೆ ಕಂಡ ತಾಯಿ ಸ್ವರೂಪ ಬದಲಾದ ಕಾಲಘಟ್ಟಕ್ಕೆ ಭಿನ್ನತೆಯಲ್ಲಿ ಕಾಣುತ್ತಿದೆ. ಒತ್ತಡದ ಬದುಕಿನಲ್ಲೂ ತಾಯಿ ತನ್ನ ಮನೋಭೂಮಿಕೆಯಲ್ಲಿ ಮಕ್ಕಳ ಭವಿಷ್ಯವನ್ನು ಸರಿಯಾದ ನೆಲೆಯಲ್ಲಿ ಕಟ್ಟಬೇಕೆಂಬುದು ಅರಿವಾಗಬೇಕಿದೆ.

ಕಪ್ಪುನೀರ ಕುಡಿಯಬಹುದು

ಉಪ್ಪು ನೀರ ಬಾಳು ಸಲ್ಲ,

ಬಾಳು ಸಲ್ಲದೆಲ್ಲ ಅಹುದು

ಅಲ್ಲಿ ಇಲ್ಲಿ ಎಲ್ಲ ಕಡೆಗು
ಉಪ್ಪು ನೀರೆ ಉಪ್ಪು ನೀರು
ಅದರ ಮೇಲೆ ಒಪ್ಪಹಾಕಿ–
ದಂತೆ ಮೂಡಿ ಮುಳುಗುವಂಥ
ನಗೆಯು ಕಾಣೋ ಬರಿಯ ಬುರುಗು!

'ಜಿ.ಕೃಷ್ಣಪ್ಪ' ಅವರ 'ತಾಯಿ ಮತ್ತು ವಾತ್ಸಲ್ಯ ಗೀತೆಗಳು' ಲೇಖನದಲ್ಲಿ ಈ ಮೇಲಿನ ಪದ್ಯಭಾಗವನ್ನು ಹೀಗೆ ಅರ್ಥೈಸಿದ್ದಾರೆ. "ಈ ಕವನದ ಕೊನೆಯ ಭಾಗವು ಜೀವನದಲ್ಲಿರುವ ಉಪ್ಪು ನೀರ ಬಾಳನ್ನು ಕಾಣಿಸುತ್ತ, ಅದನ್ನು ಗೆಲ್ಲುವ ಮಾರ್ಗಯಾವುದು ಎಂಬ ಪ್ರಶ್ನೆಯನ್ನು ಎತ್ತಿದೆ. ಈ ಉಪ್ಪು ನೀರ ಬಾಳನ್ನು ತೊರೆಯುವ ಹಾಗಿಲ್ಲ. ಆದಕಾರಣ ಬೇಂದ್ರೆಯವರು ಒಂದು ರೂಪಕದಿಂದ ಅದರ ಪರಿಹಾರವನ್ನು ಸೂಚಿಸಿದ್ದಾರೆ. 'ಕಪ್ಪುನೀರ ಕುಡಿಯಬಹುದು' ಅಂದರೆ ಒಂದು ಕಪ್ಪು (ಛಿಣಾ) ನೀರನ್ನು ಕುಡಿಯಬಹುದು. ಅದು ಪ್ರತಿಯೊಬ್ಬನ ಮಿತಿ ಮತ್ತು ಉಳಿವಿಗೆ ಬೇಕಾದುದು. ಆದರೆ ಅದು ಉಪ್ಪು ಉಪ್ಪು ಆದಾಗ ಕುಡಿಯಲು ಸಾಧ್ಯವಿಲ್ಲ. ಹೀಗಿರುವಾಗ ಬಾಳೆಲ್ಲ ಉಪ್ಪು ನೀರಾದಾಗ ಬದುಕುವುದು ಹೇಗೆ ಎಂಬ ಪ್ರಶ್ನೆ ಏಳುತ್ತದೆ. ಅದಕ್ಕೆ ಬೇಂದ್ರೆಯವರು ತಾಯಿಯ ನಗೆಯ ಅಮೃತ ಈ ಉಪ್ಪನೀರ ಬಾಳನ್ನು ಸುಖಮಯವಾಗಿ ಮಾಡಲು ಶಕ್ತವಾಗಿದೆ ಎಂದು ಹೇಳಿದ್ದಾರೆ".

ಸೃಷ್ಟಿ ಕುರಿತು ಹೇಳುವ ಈ ಕವಿತೆಯು ಹುಟ್ಟು ಸಾವುಗಳ ಸರಳ ರೇಖೆಯನ್ನು ಕುರಿತು ಚರ್ಚಿಸುತ್ತಿದೆ. ಕೊನೆಯ ಭಾಗದಲ್ಲಿ ಸಾವನ್ನಾದರೂ ಅನುಭವಿಸಬಹುದು. ನೋವನ್ನು ಅನುಭವಿಸುವುದು ಕಷ್ಟ ಎಲ್ಲ ಕಡೆಯೂ ನೋವುಗಳೇ ಕಾಣುತ್ತವೆ. ಕೆಲವರು ನೋಯಿಸುವುದನ್ನೇ ಬದುಕಾಗಿಸಿಕೊಂಡು ಇನ್ನೊಬ್ಬರನ್ನು ಹಿಂಸಿಸುತ್ತಾರೆ. ಈ ಸೃಷ್ಟಿಯಲ್ಲಿ ನೋವು ನೆಮ್ಮದಿಯಲ್ಲ ಎಂದಿದ್ದಾರೆ. ನೋವು ತೆರೆಗಳಂತೆ ಬರುತ್ತವೆ. ತಾಯಿ ಆ ಎಲ್ಲ ನೋವನ್ನು ಸಹಿಸುತ್ತಾಳೆ. ಅದು ಬಹಳ ಕಾಲ ಉಳಿಯುವುದಿಲ್ಲ. ಬುರುಗಿನಂತೆ ಕರಗಿ ಮಾಯವಾಗುತ್ತದೆ. ಈ ಎಲ್ಲವನ್ನೂ ಸಹಿಸಿ ಮತ್ತೆ ಆನಂದ ತುಂಬುವ ಶಕ್ತಿ ತಾಯಿಗಿದೆ ಎನ್ನುವುದು ಬೇಂದ್ರೆಯವರ ನಿಲುವು.

ನವೋದಯಕಾಲದ ಮಹಿಳಾ ಸಂವೇದನೆಗಳನ್ನು ಹಲವು ನೆಲೆಗಳಲ್ಲಿ ಅಭಿವ್ಯಕ್ತಿಸಿದವರು ಆ ಕಾಲದ ಕವಿಗಳು. ಬೇಂದ್ರೆಯವರು ಕೂಡ ಹೆಣ್ಣಿನ ಹಲವು ಸ್ತರಗಳಲ್ಲಿ ಅಂದರೆ ತಾಯಿ, ಸಖಿ, ವಿಧವೆ, ಸೂಳೆ ಮುಂತಾದ ಪಾತ್ರಗಳನ್ನು ತಮ್ಮ ಸಾಹಿತ್ಯದಲ್ಲಿ ನೋಡಿದ

ಕ್ರಮ ಅನನ್ಯವಾದುದು. ಮನುಷ್ಯರಲ್ಲಿನ ಸಾಮಾಜಿಕ ಸಂಬಂಧಗಳನ್ನು ಗ್ರಹಿಸಿದ ಪರಿ ವಿಶಿಷ್ಟವಾದುದು. ಈ ಹಿನ್ನೆಲೆಯಲ್ಲಿ ತಾಯಿಯ ಮಹತ್ವವನ್ನು ಅತ್ಯಂತ ಅರ್ಥಪೂರ್ಣವಾಗಿ ತಮ್ಮ ಕವಿತೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

ತಾಯ ಮಾಯೆ ಅಂಬಿಕೆಯೇ ನಿನ್ನ ತನಯದತ್ತನು
ನೀನು ಇತ್ತುದಿತ್ತನು
ನಿನ್ನ ಜನುಮದೊಂದು ಪಾಡು ಹಾಡು ಆಗಿ ಮೂಡಿತು
ನನ್ನ ಕೊರಳು ಹಾಡಿತು.

ಅಂಬಿಕಾತನಯದತ್ತರಾಗಿ ಕರೆದುಕೊಂಡು 'ಅಂಬಿಕಾತನಯದತ್ತ' ಕವಿತೆಯಲ್ಲಿ ಅವರ ವ್ಯಕ್ತಿತ್ವ, ಜ್ಞಾನ, ಕಾವ್ಯಸ್ಫೂರ್ತಿ ಎಲ್ಲವೂ ತಾಯಿಂದಲೇ ಎಂಬುದನ್ನು ಈ ಕವಿತೆಯ ಸಾಲುಗಳಲ್ಲಿ ಗಮನಿಸಬಹುದು. ಇದು ಬೇಂದ್ರೆ ಅವರಿಗಿದ್ದ ತಾಯಿಭಕ್ತಿಯನ್ನು ಸೂಚಿಸುತ್ತದೆ.

ಪರಾಮರ್ಶನ ಗ್ರಂಥಗಳು :

1. ಜಿ.ಕೃಷ್ಣಪ್ಪ, ತಿರುತಿರುಗಿಯು ಹೊಸತಾಗಿರಿ, ಸಾಹಿತ್ಯ ಲೋಕ ಬುಕ್ ಹೌಸ್, 2015, ಬೆಂಗಳೂರು.
2. ರವಿಶಂಕರ ಎ.ಕೆ., ಸೌಂದರ್ಯ ಶುಚಿ, ಎಸ್,ಎಲ್,ಎನ್ ಪಬ್ಲಿಕೇಷನ್, 2022, ಬೆಂಗಳೂರು.
3. ಟಿ.ಸಿ.ಭಾರತಿ, ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆ, ನಿರಂತರ ಪ್ರಕಾಶನ, 2011, ಬೆಂಗಳೂರು.
4. https://www.prajavani.net/art-culture/article-features/ PÀ£ÀßqÀzÀ-PÀAzÀ-NzÀÄªÀÅzÀÄ-K£À£Àß- 2162234
5. ಅಂಬಿಕಾತನಯದತ್ತರ ಸಮಗ್ರಕಾವ್ಯ ಔದುಂಬರ ಗಾಥೆ, ನಮನ, ಸಿದ್ಧಾಂತ., ವಾಮನ ಬೇಂದ್ರೆ(ಸಂ)., 2003, 2017., ವರಕವಿ ಡಾ॥ ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.

***

ಕುವೆಂಪು ಕಾವ್ಯದಲ್ಲಿ ನಾಡು–ನುಡಿಯ ಸಂಕಲ್ಪ : ಅಸ್ಮಿತೆಯ ಆದರ್ಶ ಮತ್ತು ಆಶಯ

1

ಸುಕನ್ಯ ಎಂ

ಪ್ರಥಮ ವರ್ಷದ ವಿದ್ಯಾರ್ಥಿ, ಇಂಟೀರಿಯರ್ ಡಿಸೈನ್ ವಿಭಾಗ, ಜೈನ್ ವಿಶ್ವವಿದ್ಯಾಲಯ ಬೆಂಗಳೂರು1

sukanyagayatri80.com@gmail.com

1

ಅಕ್ಷಯ ಸುಂದರೆಸನ್

ಪ್ರಥಮ ವರ್ಷದ ವಿದ್ಯಾರ್ಥಿ, ಇಂಟೀರಿಯರ್ ಡಿಸೈನ್ ವಿಭಾಗ, ಜೈನ್ ವಿಶ್ವವಿದ್ಯಾಲಯ ಬೆಂಗಳೂರು2

akshaya010807@gmail.com

1

ಡಾ. ಬಸಯ್ಯ ಸ್ವಾಮಿ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೈನ್ ವಿಶ್ವವಿದ್ಯಾಲಯ ಬೆಂಗಳೂರು3

bassayya.s@jainuniversity.ac.in

ಕನ್ನಡ ಸಾಹಿತ್ಯದ ಸಾರ್ವಕಾಲಿಕ ಮಹಾಕವಿ, ಯುಗದ ಕವಿ, ಜಗದ ಕವಿ ಕುವೆಂಪು (ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ) ಅವರು ಕೇವಲ ಸಾಹಿತಿಯಾಗಿರದೆ, ಕನ್ನಡ ನಾಡು–ನುಡಿಯ ಆರಾಧಕರೂ, ದಾರ್ಶನಿಕರೂ ಆಗಿದ್ದರು. ಅವರ ಕಾವ್ಯ ಕನ್ನಡಿಗರ ಆತ್ಮಚೈತನ್ಯವನ್ನು ಉದ್ದೀಪನಗೊಳಿಸುವ ಮಂತ್ರವಾಗಿದೆ. ಭಾಷೆ, ನಾಡು, ಸಂಸ್ಕೃತಿ, ಮತ್ತು ಕನ್ನಡಿಗರ ಅಸ್ಮಿತೆಯ ವಿಷಯವಾಗಿ ಅವರು ತಮ್ಮ ಕಾವ್ಯದ ಮೂಲಕ ಪ್ರಕಟಿಸಿದ ಹೆಮ್ಮೆ, ನೋವು, ಮತ್ತು ಸಂಕಲ್ಪ ಇಂದಿಗೂ ಪ್ರಸ್ತುತ. ಕುವೆಂಪು ಅವರ ಪ್ರಸಿದ್ಧ ಕವನಗಳಾದ 'ಅಳುಕದೀ ಕನ್ನಡಂ!', 'ಕರ್ಣಾಟಕ ಮಂತ್ರದೀಕ್ಷೆ', ಮತ್ತು 'ಎಲ್ಲಾದರು ಇರು, ಎಂತಾದರು ಇರು' – ಈ ಮೂರೂ ಕೃತಿಗಳು ಕೇವಲ ಸಾಹಿತ್ಯಕ ಸೃಷ್ಟಿಗಳಾಗಿರದೆ, ಕನ್ನಡಿಗರ ರಾಷ್ಟ್ರಗೀತೆಯಾಗಿ, ದೀಕ್ಷಾ

ಸಂಕಲ್ಪವಾಗಿ, ಮತ್ತು ಜೀವನಾದರ್ಶವಾಗಿ ಮಾರ್ಪಟ್ಟಿವೆ. ಈ ಕವನಗಳಲ್ಲಿ ನಾಡಿನ ಗತ ವೈಭವದ ಹೆಮ್ಮೆಯಿದೆ, ವರ್ತಮಾನದ ಅಭಿಮಾನ ಕುಂದುತ್ತಿರುವ ನೋವಿದೆ, ಮತ್ತು ಭವಿಷ್ಯದ ಬಗೆಗಿನ ಭವ್ಯ ಸಂಕಲ್ಪವಿದೆ. ಈ ಲೇಖನದಲ್ಲಿ, ಈ ಮೂರು ಕವನಗಳನ್ನು ಆಧಾರವಾಗಿಟ್ಟುಕೊಂಡು ಕುವೆಂಪು ಅವರ ನಾಡು–ನುಡಿ ಪ್ರೇಮದ ಆಯಾಮಗಳನ್ನು ವಿಶ್ಲೇಷಿಸಲಾಗಿದೆ.

ಗತ ವೈಭವದ ಹೆಮ್ಮೆ ಮತ್ತು ಅಸ್ಮಿತೆಯ ಅಡಿಪಾಯ: 'ಅಳುಕದೀ ಕನ್ನಡಂ!' ಕಾವ್ಯದಲ್ಲಿನ ಸಂಕಲ್ಪ

ಕುವೆಂಪು ಅವರ 'ಅಳುಕದೀ ಕನ್ನಡಂ!' ಎಂಬ ಕವನವು ಕನ್ನಡ ಭಾಷೆಗಿರುವ ಅಸಾಧಾರಣ ಬಲ ಮತ್ತು ಸ್ಥಿರತೆಯನ್ನು ಘೋಷಿಸುವ ಒಂದು ಕೆಚ್ಚೆದೆಯ ಕವನ. ಇದು ಕನ್ನಡದ ಬೇರುಗಳು ಎಷ್ಟು ಗಟ್ಟಿಯಾಗಿವೆ ಎಂಬುದನ್ನು ದಾರ್ಶನಿಕವಾಗಿ ವಿವರಿಸುತ್ತದೆ.

"**ಪಂಪರನ್ನರ್ ಕುಮಾರವ್ಯಾಸ ಲಕ್ಷ್ಮೀಶ ಹರಿಹರಾದಿಗಳುಸಿರ್**
ನಮ್ಮೊಳಿರ್ಪನ್ನೆಗಂ ಅಳುಕದೀ ಕನ್ನಡಂ,
ಅಳಿಯದೀ ಕನ್ನಡಂ, ಉಳಿವುದೀ ಕನ್ನಡಂ!"

(ಎಲ್ಲಾದರೂ ಇರೂ ಎಂತಾದರೂ ಇರು) ಕುವೆಂಪು ಸಮಗ್ರ ಕಾವ್ಯ – ಸಂ. 2

ಈ ಸಾಲುಗಳು ಕುವೆಂಪು ಅವರು ಕನ್ನಡದ ಶ್ರೇಷ್ಠತೆಯ ಅಡಿಪಾಯವನ್ನು ಎಲ್ಲಿ ಕಂಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಕುವೆಂಪು ಅವರ ಪ್ರಕಾರ, ಕನ್ನಡದ ಅಸ್ತಿತ್ವಕ್ಕೆ ಬುನಾದಿ ಹಾಕಿರುವುದು ವಿದ್ಯಾಲಯಗಳಲ್ಲ, ಬದಲಿಗೆ ಆ ಭಾಷೆಯ ಸಾಹಿತ್ಯಕ ಶ್ರೀಮಂತಿಕೆ ಮತ್ತು ಯುಗ ಪ್ರವರ್ತಕ ಕವಿಗಳ ಪರಂಪರೆ. ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶ, ಹರಿಹರರಂತಹ ಮಹಾಕವಿಗಳ ಉಸಿರು (ಅವರ ಕಾವ್ಯ) ನಮ್ಮಲ್ಲಿರುವವರೆಗೂ ಕನ್ನಡವು ಅಳುಕುವುದಿಲ್ಲ, ಅಳಿಯುವುದಿಲ್ಲ, ಮತ್ತು ಖಂಡಿತವಾಗಿಯೂ ಉಳಿಯುತ್ತದೆ. ಇದು ಕನ್ನಡದ ಗತವೈಭವದ ಮೇಲಿನ ಹೆಮ್ಮೆಯ ಸ್ಪಷ್ಟ ಘೋಷಣೆ.

ಆದರೆ ಕುವೆಂಪು ಅವರು ಈ ಶ್ರೇಷ್ಠತೆಯ ಅಭಿಮಾನದ ಜೊತೆಗೆ, ಕನ್ನಡಿಗರು ತಮ್ಮ ಭಾಷೆಯ ಬಗ್ಗೆ ಹೊಂದಿರಬೇಕಾದ ನಿಜವಾದ ನಿಲುವನ್ನು ಕುರಿತು ಆತಂಕವನ್ನೂ ವ್ಯಕ್ತಪಡಿಸುತ್ತಾರೆ. ಅವರು ಕನ್ನಡವನ್ನು 'ಪಸುಳೆ' (ಶಿಶು)ಯಂತೆ ಕಾಣುವ ಮನಸ್ಥಿತಿಯನ್ನು ತೀವ್ರವಾಗಿ ವಿಮರ್ಶಿಸುತ್ತಾರೆ.

"**ಮೊನ್ನೆ ಕಣ್ ಬಿಟ್ಟುದೀ**

ಪಸುಳೆ ವಿದ್ಯಾನಿಲಯವಾ ಮುತ್ತ ನುಡಿತಾಯ್ಕೆ
ಮೊಲೆವಾಲನಿತ್ತೊಲಿದು ಸಲಹಿದಪುದೆಂಬಾಸೆ
ನಗೆಗೇಡು, ನಾಣ್ಗೆಡು, ಬೆಳ್ತನಂ! ತಾಯಿಂದ
ಪಸುಳೆಬಾಳ್; ತಾಯೆರ್ದೆಯೆ ಸಿಸುಗೆ ಕೂಳ್! ಪೆತ್ತಳಂ
ಪಳಿದುಳಿವುದೇನರ್ಭಕಂ ಪೇಳ್?"

(ಕುವೆಂಪು ಸಮಗ್ರ ಕಾವ್ಯ – ಸಂ. 2, ಪುಟ–123)

ಇಲ್ಲಿ ಕುವೆಂಪು ಅವರು "ಹೊಸದಾಗಿ ಹುಟ್ಟಿದ ವಿದ್ಯಾನಿಲಯಗಳು ಕನ್ನಡ ತಾಯಿಗೆ ಹಾಲುಣಿಸಿ ಸಲಹುತ್ತವೆ" ಎಂಬ ಕಲ್ಪನೆಯನ್ನು ನಗೆಗೇಡು ಎಂದು ಬಣ್ಣಿಸುತ್ತಾರೆ. ಇದು, ಆಧುನಿಕ ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಿ ವ್ಯವಸ್ಥೆಗಳ ಮೇಲಿನ ಅತಿಯಾದ ಅವಲಂಬನೆ ಮತ್ತು ತಾಯಿ ಭಾಷೆಯ ಬಗೆಗಿನ ತಮ್ಮ ವೈಯಕ್ತಿಕ ಜವಾಬ್ದಾರಿಯನ್ನು ಮರೆಯುತ್ತಿರುವ ಕನ್ನಡಿಗರ ಮನೋಭಾವದ ಕುರಿತಾದ ನೋವು. ಕನ್ನಡ ತಾಯಿಯ ಎದೆಯೇ ಮಗುವಿಗೆ ಅಮೃತ (ಕೂಳ್), ಮಗು ತಾಯಿಗೆ ಹಾಲುಣಿಸುವುದಲ್ಲ. ಅಂದರೆ, ಕನ್ನಡಿಗರು ಕನ್ನಡದಿಂದ ಬದುಕು ಪಡೆಯಬೇಕೇ ಹೊರತು, ಕನ್ನಡವನ್ನು ಉಳಿಸುವ ದೊಡ್ಡ ಜವಾಬ್ದಾರಿಯನ್ನು ಹೊರಗಿನ ವ್ಯವಸ್ಥೆಗೆ ವಹಿಸಿ ನಿರಾಳರಾಗಬಾರದು ಎಂಬುದು ಕುವೆಂಪು ಅವರ ಆಶಯ. ಇದು ಕನ್ನಡಿಗರು ತಮ್ಮ ಅಸ್ತಿತ್ವದ ತಾಯಿಬೇರಾದ ಭಾಷೆಯ ಬಗ್ಗೆ ತೋರುತ್ತಿರುವ ಅನಾಸಕ್ತಿ ಮತ್ತು ಅಭಿಮಾನ ಕಡಿಮೆಯಾಗಿರುವುದರ ಬಗೆಗಿನ ಕವಿಗಿರುವ ದುಃಖವನ್ನು ಪ್ರಕಟಿಸುತ್ತದೆ.

ಅಭಿಮಾನದ ಕೊರತೆ ಮತ್ತು ಪರಭಾಷಾ ಮೋಹದ ವಿಮರ್ಶೆ : ಬೇರು ಮತ್ತು ಚಿಗುರಿನ ಹೋರಾಟ

ಕುವೆಂಪು ಅವರ ಕಾವ್ಯದಲ್ಲಿ ಕನ್ನಡಿಗರ ಆತ್ಮವಿಶ್ವಾಸ ಮತ್ತು ಅಭಿಮಾನ ಕಡಿಮೆಯಾಗಿ ಇತರ ಭಾಷೆಯ ಮೇಲಿನ ಮೋಹಕ್ಕೆ ಒಳಗಾಗುತ್ತಿರುವುದರ ಬಗ್ಗೆ ತೀವ್ರ ವಿಮರ್ಶೆಯಿದೆ. 'ಅಳುಕದೀ ಕನ್ನಡಂ!' ಕವನದಲ್ಲಿನ 'ಪೇನ್' (ಹೇನು) ಮತ್ತು 'ಪಸುಳೆ' (ಶಿಶು) ರೂಪಕಗಳು ಈ ಮನಸ್ಥಿತಿಯನ್ನು ವಿಶ್ಲೇಷಿಸುತ್ತವೆ.

"ಪ್ರಭೇದವೇನ್ ಗೊತ್ತೆ, ಪಸುಳೆಗೆ ಮತ್ತೆ ಪೇನೆ? ನೆತ್ತರುಣೆ ಪೇನ್ ;
ಪಾಲುಣಲ್ ಪಸುಳೆ. ಕೊಂದು ಸಾವುದು ಕೊನೆಗೆ ತಾನ್
ಪೇನ್; ಬಳು ಬರ್ದುಕಿಪುದು ತನ್ನಬ್ಬೆಯಂ ಪಸುಳೆ!
ನೆತ್ತರುಣಿ ಪೇನಾಗದೆಯೆ ಪಸುಳೆ ತಾನಾಗಲೀ
ಕನ್ನಡಮ್ಮನ ಎರ್ದೆಯ ಅಮೃತ ಜೀವನವೀಂಟಿ,

ಮರಳಿ ಜೀವಾಮೃತವನೀವ ವಿದ್ಯಾಲಯಂ!"

(ಕುವೆಂಪು ಸಮಗ್ರ ಕಾವ್ಯ – ಸಂ. 2, ಪುಟ–123)

